# ರಚನಾ-೨

## ಎನ್.ಸಿ.ಎಫ್-2005

## ಹೊಸ ಪಠ್ಯ ಪುಸ್ತಕ ಆಧಾರಿತ
## ತರಬೇತಿ ಸಾಹಿತ್ಯ

## 2013-14

# ತರಗತಿ : 9
# ವಿಷಯ : ಕನ್ನಡ

**ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಬೆಂಗಳೂರು.**
**ಮತ್ತು**
**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, 100 ಅಡಿ ವರ್ತುಲ ರಸ್ತೆ,**
**ಬನಶಂಕರಿ 3ನೇ ಹಂತ, ಹೊಸಕೆರೆಹಳ್ಳಿ, ಬೆಂಗಳೂರು-560 085.**

| | | |
|---|---|---|
| 1. | ಹೊಸ ಪಠ್ಯಪುಸ್ತಕಗಳ ಆಧಾರಿತ ತರಬೇತಿ ಸಾಹಿತ್ಯ | : ಪ್ರಥಮ ಭಾಷೆ ಕನ್ನಡ |
| 2. | ಪ್ರಕಟಣೆ | : ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಬೆಂಗಳೂರು–560001.<br>ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, 100 ಅಡಿ ವರ್ತುಲ ರಸ್ತೆ, ಹೊಸಕೆರೆಹಳ್ಳಿ, ಬನಶಂಕರಿ 3ನೇ ಹಂತ, ಬೆಂಗಳೂರು–560085. |
| 3. | ಮುದ್ರಣ ವರ್ಷ | : 2013–14 |
| 4. | ಪ್ರತಿಗಳ ಸಂಖ್ಯೆ | : 4000 |
| 5. | ಮುದ್ರಕರು | : ಭಾಗ್ಯಂ ಬೈಂಡಿಂಗ್ ವರ್ಕ್ಸ್,<br>ನಂ. 25/1, 1ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, ಹೊಸ ಟಿಂಬರ್ ಲೇಔಟ್, ಮೈಸೂರು ರಸ್ತೆ, ಬೆಂಗಳೂರು–560026. |

# ಮುನ್ನುಡಿ

2013–14ನೇ ಸಾಲಿನಿಂದ NCF–2005ರ ಆಧಾರದ ಮೇಲೆ ಕರ್ನಾಟಕ ರಾಜ್ಯದಲ್ಲಿಯೂ ಹೊಸಪಠ್ಯಕ್ರಮವನ್ನು ಜಾರಿಗೊಳಿಸಲಾಗುತ್ತಿದ್ದು, ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ 6 ಮತ್ತು 9ನೇ ತರಗತಿಗಳಿಗೆ ಪರಿಷ್ಕೃತ ಪಠ್ಯಪುಸ್ತಕಗಳನ್ನು ರಚಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

NCF–2005ರ ಪರಿಕಲ್ಪನೆಗಳನ್ನು ಈ ಪರಿಷ್ಕೃತ ಪಠ್ಯಕ್ರಮ, ಪಠ್ಯವಸ್ತು ಮತ್ತು ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿದೆ. ಪರಿಷ್ಕರಣೆಯಲ್ಲಿ ಮೂಡಿಬಂದಿರುವ ಹೊಸ ಪರಿಕಲ್ಪನೆಗಳ ಬಗ್ಗೆ ಮತ್ತು ಬೋಧನಾ ಕಲಿಕಾ ಸನ್ನಿವೇಶದಲ್ಲಿ ಶಿಕ್ಷಕರು ಅನುಸರಿಸಬೇಕಾಗಿರುವ ವಿಧಿ ವಿಧಾನಗಳ ಬಗ್ಗೆ ಮನವರಿಕೆ ಮಾಡಿಕೊಡುವುದು; ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನವನ್ನು ಅಳವಡಿಸಿಕೊಳ್ಳುವುದು; ರಚನಾವಾದ (Constructivism)ದ ಬಗ್ಗೆ ಅರಿವು ಮೂಡಿಸುವುದು ಅತ್ಯಂತ ಅವಶ್ಯವಾಗಿದೆ. ಈ ದಿಸೆಯಲ್ಲಿ 6 ಮತ್ತು 9ನೇ ತರಗತಿಯ ಪರಿಷ್ಕೃತ ಪಠ್ಯಪುಸ್ತಕಗಳನ್ನು ಕಲಿಕೆ ಮತ್ತು ಬೋಧನೆಗೆ ಅಳವಡಿಸಲು ಮಾರ್ಗದರ್ಶಿ ರೂಪದಲ್ಲಿ ಶಿಕ್ಷಕ ತರಬೇತಿ ಮಾಡ್ಯೂಲನ್ನು ರಚಿಸಲಾಗಿದೆ. 6ನೇ ತರಗತಿಗೆ ಒಂದು ಸಂಪೂರ್ಣ ಮಾಡ್ಯೂಲ್ ತಯಾರಿಕೆಯಾಗಿದ್ದು 9ನೇ ತರಗತಿಗೆ ವಿಷಯವಾರು ಶಿಕ್ಷಕರ ತರಬೇತಿ ಸಾಹಿತ್ಯ ರೂಪಿಸಲಾಗಿದೆ.

ಈ ತರಬೇತಿ ಸಾಹಿತ್ಯವನ್ನು ಮುಂಬರುವ ದಿನಗಳಲ್ಲಿ ಶಿಕ್ಷಕರಿಗೆ ತರಬೇತಿ ನೀಡುವ ಸಂದರ್ಭದಲ್ಲಿ ಬಳಕೆ ಮಾಡಿಕೊಳ್ಳಲಾಗುವುದು. ಈ ಪುಸ್ತಿಕೆಯಲ್ಲಿ ಅಳವಡಿಸಿರುವ ಅಂಶಗಳು ಶಿಕ್ಷಕ ಸಮುದಾಯ ತಮ್ಮ ಬೋಧನಾ ಮತ್ತು ಕಲಿಕಾ ಸನ್ನಿವೇಶದಲ್ಲಿ ಅಳವಡಿಸಿ ತರಗತಿಗಳಲ್ಲಿ ಹೆಚ್ಚು ಕಾರ್ಯಕ್ಷಮತೆಯನ್ನು ಉಂಟುಮಾಡುವಿರೆಂದು ಆಶಿಸಲಾಗಿದೆ.

(ಎಚ್.ಎಸ್. ರಾಮರಾವ್)
ನಿರ್ದೇಶಕರು
ಸಂಶೋಧನೆ ಮತ್ತು ತರಬೇತಿ

## ಪರಿಕಲ್ಪನೆ ಮತ್ತು ಮಾರ್ಗದರ್ಶನ

**ಶ್ರೀಮತಿ / ಶ್ರೀ**

1. ಎಚ್.ಎಸ್. ರಾಮರಾವ್, ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಬೆಂಗಳೂರು.
2. ಯಶೋಧ ಬೋಪಣ್ಣ, ಸಹ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಬೆಂಗಳೂರು.
3. ಸಿರಿಯಣ್ಣನವರ ಲಲಿತ ಚಂದ್ರಶೇಖರ್, ಉಪ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಬೆಂಗಳೂರು.

## ಸಾಹಿತ್ಯ ರಚನಾ ತಂಡ

1. ಡಾ॥ ಕೋಡಿ ರಂಗಪ್ಪ, ಪ್ರಾಧ್ಯಾಪಕರು, ಸರ್ಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ಚಿಕ್ಕಬಳ್ಳಾಪುರ.
2. ಡಾ॥ ಮುಳುಕುಂಟೆ ರಮೇಶ್, ಕನ್ನಡ ಅಧ್ಯಾಪಕರು, ರಾಗೀಗುಡ್ಡ ಪ್ರೌಢಶಾಲೆ, ಜಯನಗರ 9ನೇ ಬಡಾವಣೆ, ಬೆಂಗಳೂರು–560060.
3. ಶ್ರೀ ಎ. ಭುಜಂಗಾಚಾರ್, ಕನ್ನಡ ಅಧ್ಯಾಪಕರು, ಜ್ವಾಲಾಮಾಲಿನಿ ಪ್ರೌಢಶಾಲೆ, ಸಿಂಹನ ಗದ್ದೆ, ಎನ್.ಆರ್. ಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
4. ಶ್ರೀ ಸಿ.ಬಿ. ವೀರಭದ್ರಾಚಾರಿ, ಕನ್ನಡ ಅಧ್ಯಾಪಕರು, ಸರ್ಕಾರಿ ಪದವಿ ಪೂರ್ವ ಕಾಲೇಜು (ಬಾಲಕರ), ಮಾಲೂರು, ಕೋಲಾರ ಜಿಲ್ಲೆ – 563130.
5. ಶ್ರೀಮತಿ ರೋಹಿಣಿ ಎಸ್. ದಾನಿ, ಸಹ ಶಿಕ್ಷಕಿ, ಸರ್ಕಾರಿ ಪ್ರೌಢಶಾಲೆ, ಗೋಲಭಾವಿ, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.

## ಕಾರ್ಯಕ್ರಮ ನಿರ್ವಹಣೆ

1. ಶ್ರೀ ಎಚ್.ಎಂ. ಬಸಪ್ಪ, ಹಿರಿಯ ಸಹಾಯಕ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಬೆಂಗಳೂರು.

## ಪರಿವಿಡಿ


| ಕ್ರಸಂ. | ವಿಷಯ | ಪುಟಸಂಖ್ಯೆ |
|---|---|---|
| 1. | ಪ್ರೌಢ ಶಿಕ್ಷಣ ಪಠ್ಯಕ್ರಮದಲ್ಲಿ ಭಾಷಾ ಬೋಧನೆ – ಕಲಿಕೆಯ ಮಹತ್ವ | 6 |
| 2. | ಭಾಷಾ ಶಿಕ್ಷಣದ ಬಗ್ಗೆ ಎನ್.ಸಿ.ಎಫ್. – 2005 ಮತ್ತು ಆರ್.ಟಿ.ಇ ಆಶಯಗಳು | 8 |
| 3. | ಪ್ರಥಮ ಭಾಷೆ ಕನ್ನಡ ಬೋಧನೆಯ ಗುರಿಗಳು | 21 |
| 4. | ಭಾಷಾ ಪಠ್ಯ ಪುಸ್ತಕದ ಪುನಾರಚನೆಯ ಆಶಯಗಳ ಹಿನ್ನಲೆಯಲ್ಲಿ ಸಿರಿಕನ್ನಡ –9 ವಿಶ್ಲೇಷಣೆ. | 26 |
| 5. | ತರಗತಿಯ ಪ್ರಕ್ರಿಯೆಯಲ್ಲಿ ಸಂವಹನದ ಪ್ರಾಮುಖ್ಯತೆ | 28 |
| 6. | ಭಾಷಾ ಕಲಿಕೆಯಲ್ಲಿ ಓದು–ಬರಹ ಕೌಶಲಗಳ ಅಭಿವೃದ್ಧಿ | 34 |
| 7. | ಪಾಠ ಯೋಜನೆಯ ರಚನೆಗೆ ಮಾರ್ಗಸೂಚಿ | 38 |
| 8. | ಗದ್ಯ ಪದ್ಯ ಕಲಿಕೆಗೆ ಮಾರ್ಗದರ್ಶಿ | 55 |
| 9. | ಗದ್ಯ ಪ್ರಾತ್ಯಕ್ಷಿಕೆ – ಮಾದರಿ ಪಾಠ ಯೋಜನೆ | 57 |
| 10. | ಪದ್ಯ ಪ್ರಾತ್ಯಕ್ಷಿಕೆ – ಮಾದರಿ ಪಾಠ ಯೋಜನೆ | 60 |
| 11. | ಸಿರಿಗನ್ನಡ – 09 ವಾರ್ಷಿಕ ಕಾರ್ಯಸೂಚಿ | 65 |
| 12. | ಕಲಿಕೆಯನ್ನು ಅನುಕೂಲಿಸುವ ವಿಧಾನಗಳು | 77 |
| 13. | ವ್ಯಾಕರಣ ಬೋಧನೆ ಮಾರ್ಗದರ್ಶಿ | 80 |
| 14. | ಅಲಂಕಾರ ಬೋಧನೆ ಮಾರ್ಗದರ್ಶಿ | 85 |
| 15. | ಛಂದಶಾಸ್ತ್ರ ಬೋಧನೆ – ಮಾರ್ಗದರ್ಶಿ | 86 |
| 16. | ಅನುಬಂಧಗಳು – 1, 2, 3 ಮತ್ತು 4 | 94 |
| 17. | ತರಬೇತಿ ವೇಳಾಪಟ್ಟಿ | 128 |

## ಪ್ರೌಢ ಶಿಕ್ಷಣ ಪಠ್ಯಕ್ರಮದಲ್ಲಿ ಭಾಷಾ ಬೋಧನೆ – ಕಲಿಕೆಯ ಮಹತ್ವ

ಭಾಷಾ ಕಲಿಕೆಯ ಮೂಲಕವೇ ಮಗುವಿನ ಶಿಕ್ಷಣ ಆರಂಭವಾಗುತ್ತದೆ. ಇದರಿಂದಾಗಿಯೇ ಪ್ರಾಥಮಿಕ ಹಂತವು ಭಾಷಾ ಶಿಕ್ಷಣ ಎಂದೇ ಪರಿಗಣಿಸಲ್ಪಟ್ಟಿದೆ. ಪ್ರಾಥಮಿಕ ಹಂತದಲ್ಲಿ ಭಾಷಾ ಕೌಶಲಗಳ ಕಲಿಕೆ ಹಾಗೂ ಪ್ರಯೋಗದಲ್ಲಿ ಮಕ್ಕಳು ಒಂದು ಮಟ್ಟದಲ್ಲಿ ಭಾಷಾ ಪ್ರಭುತ್ವವನ್ನು ಗಳಿಸಿಕೊಂಡಿರುತ್ತಾರೆ. ಈ ಹಂತದಲ್ಲಿ ಭಾಷಾ ಕೌಶಲಗಳನ್ನು ಕಲಿತರೆ ಪ್ರೌಢ ಹಾಗೂ ಮುಂದಿನ ಹಂತಗಳಲ್ಲಿ ಭಾಷೆಯ ವಿಸ್ತೃತ ಕಲಿಕೆಗೆ ಆದ್ಯತೆ ನೀಡಲಾಗುವುದು. ಭಾಷೆಯ ಮೂಲಕ ಕಲಿಕೆ ರೂಪುಗೊಳ್ಳುತ್ತದೆ. ಮಕ್ಕಳ ಭಾಷಾ ಕಲಿಕೆಯ ಮಟ್ಟಕ್ಕು ಅವರ ಶೈಕ್ಷಣಿಕ ಸಾಧನೆ ಹಾಗೂ ವ್ಯಕ್ತಿತ್ವ ವಿಕಾಸಕ್ಕೂ ನಡುವೆ ಸಕಾರಾತ್ಮಕ ಸಂಬಂಧವಿದೆ. ಹೀಗಾಗಿ ಈ ಹಂತದಲ್ಲಿ ಭಾಷಾ ಕೌಶಲಗಳ ಕಲಿಕೆ ಮತ್ತು ಬಳಕೆಗೆ ವಿಶೇಷ ಒತ್ತು ನೀಡುವ ಅಗತ್ಯವಿದೆ. ಭಾಷಾ ಕಲಿಕೆಯ ಮೂಲಕ ಓದು ಬರಹದಲ್ಲಿ ಸ್ವಾವಲಂಬನೆ ಹಾಗೂ ಸ್ವಯಂ ಅಭಿವ್ಯಕ್ತಿ ಕೌಶಲ, ಪರಿಣಾಮಕಾರಿ ಸಂವಹನ ಸಾಮರ್ಥ್ಯ, ಸ್ವತಂತ್ರವಾಗಿ ಅಧ್ಯಯನ ಮಾಡುವ ಸಾಮರ್ಥ್ಯ, ಸ್ವತಂತ್ರ ಚಿಂತನೆ ಮತ್ತು ಅಭಿವ್ಯಕ್ತಿ, ಪುಸ್ತಕ ಸಂಸ್ಕೃತಿ ಮತ್ತು ಸಾಹಿತ್ಯ ಅಭಿರುಚಿ, ಓದುವ ಅಭ್ಯಾಸ ಮತ್ತು ಅಭಿರುಚಿ, ಮಾಧ್ಯಮಗಳ ಮೂಲಕ ಕಲಿಕೆ, ತನ್ನ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಗತ್ಯಗಳಿಗಾಗಿ ಭಾಷೆಯ ಬಳಕೆ, ವಿವಿಧ ಅಗತ್ಯಗಳಿಗೆ ಸ್ವತಂತ್ರವಾಗಿ ಭಾಷೆಯನ್ನು ಅರ್ಥಬದ್ಧವಾಗಿ ಬಳಸುವುದು ಮುಂತಾದ ಸಾಮರ್ಥ್ಯಗಳನ್ನು ಗಳಿಸಿಕೊಳ್ಳುವುದು ಅಪೇಕ್ಷಣೀಯ. ಭಾಷಾ ಕಲಿಕೆಯ ಬಗ್ಗೆ ಇಂತಹ ನಿರೀಕ್ಷೆಗಳು ಸಾಕಾರಗೊಳ್ಳಲು ನೆರವಾಗುವಂತೆ ಭಾಷಾ ಬೋಧನೆಯನ್ನು ಹೆಚ್ಚು ಆಕರ್ಷಕವಾಗಿ, ರಚನಾತ್ಮಕವಾಗಿ ರೂಪಿಸಿಕೊಳ್ಳುವುದು ಅಗತ್ಯ.

ಆದರೆ ಪ್ರಸ್ತುತ ಬಹುತೇಕ ನಮ್ಮ ವಿದ್ಯಾರ್ಥಿಗಳು ಭಾಷಾ ಕಲಿಕೆಯಲ್ಲಿ ನಿರೀಕ್ಷಿತ ಮಟ್ಟದಲಿಲ್ಲ. ಓದು ಬರಹಗಳನ್ನು ಸ್ವತಂತ್ರವಾಗಿ ಬಳಸುವ ಸ್ಥಿತಿಯಲ್ಲಿಲ್ಲ. ಹೀಗಾಗಿ ಮಕ್ಕಳ ಅಧ್ಯಯನ ಶೀಲತೆ ಹಾಗೂ ಬೌದ್ಧಿಕ ಉನ್ನತಿ ಆಶಾದಾಯಕವಾಗಿಲ್ಲ. ಸಾಹಿತ್ಯ, ಸಂಸ್ಕೃತಿ ವರ್ಧನೆಯಂತೂ ನಿರೀಕ್ಷಿತ ಮಟ್ಟದಲ್ಲಿಲ್ಲ.

ಈ ಹಿನ್ನಲೆಯಲ್ಲಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005 ಭಾಷಾಬೋಧನೆ–ಕಲಿಕೆಯ ಬಗ್ಗೆ ವಿಶೇಷ ಒತ್ತು ನೀಡಿದೆ. ಭಾಷಾ ಕಲಿಕೆಯು ಭಾಷಾ ಪಠ್ಯಪುಸ್ತಕ, ಭಾಷಾಪ್ರಗತಿಗಷ್ಟೇ ಸೀಮಿತವಾಗದೆ ಇಡೀ ಶಾಲಾ ವ್ಯವಸ್ಥೆಯಲ್ಲಿ ಭಾಷಾ ಕಲಿಕೆ ಹಾಗೂ ಪ್ರಯೋಗಕ್ಕೆ ಮುಕ್ತ ಅವಕಾಶಗಳನ್ನು ರೂಪಿಸಬೇಕು ಎಂಬ ಆಶಯ ವ್ಯಕ್ತವಾಗಿದೆ. ಭಾಷಾ ಕಲಿಕೆಯನ್ನು ಪ್ರತ್ಯೇಕ (Isolate) ವಾಗಿಸದೆ ಬಹು ಆಯಾಮಗಳ ಕೃಷಿಯಾಗಬೇಕು. ತರಗತಿಯ ಜೊತೆಗೆ ಮನೆ, ಸಾಮಾಜಿಕ, ಸಾಂಸ್ಕೃತಿಕ ಪರಿಸರ ಹಾಗೂ ಮಾಧ್ಯಮಗಳನ್ನು ಸಹ ಭಾಷಾ ಕಲಿಕೆಯ ಸಂಪನ್ಮೂಲ ಸಾಧನಗಳನ್ನಾಗಿ ಬಳಸಿಕೊಳ್ಳಬೇಕು. ಸ್ವಯಂ ಕಲಿಕೆ, ಸಮವಯಸ್ಕರ ಅಂತರ ಕ್ರಿಯೆಗಳಿಗೆ ಪಠ್ಯಕ್ರಮದಲ್ಲಿ ಅವಕಾಶಗಳನ್ನು ಕಲ್ಪಿಸಬೇಕು.

ಈ ದಿಕ್ಕಿನಲ್ಲಿ ಭಾಷೆಯನ್ನು ಯಾಂತ್ರಿಕವಾಗಿ ಕಲಿಸದೆ ರಚನಾತ್ಮಕವಾಗಿ (Constructivist Approach) ಕಲಿಸುವ ಉಪಕ್ರಮಗಳನ್ನು ಬಳಸಿಕೊಳ್ಳುವುದನ್ನು ರಾ.ಪ.ಚೌ. 2005 ಸಲಹೆ ಮಾಡಿದೆ. ವಿದ್ಯಾರ್ಥಿಯು ತನ್ನ ಸ್ವಂತ ಅನುಭವಗಳ ಆಧಾರದಲ್ಲಿ ರಚನಾತ್ಮಕ ಅಭ್ಯಾಸಗಳ ಮೂಲಕ ಜ್ಞಾನವನ್ನು ಕಟ್ಟಿಕೊಳ್ಳುತ್ತಾ ಕಲಿಯುವ ಕ್ರಿಯೆಯೇ ರಚನಾವಾದದ ಕಲಿಕೆ. ರಚನಾತ್ಮಕ ಉಪಕ್ರಮದಲ್ಲಿ ವಿದ್ಯಾರ್ಥಿಯು .....

* ಪರಿಕಲ್ಪನೆಗಳ ಅರ್ಥವನ್ನು ಸ್ವಯಂ ಕಂಡುಕೊಳ್ಳುವರು.
* ಸಮ ವಯಸ್ಕರೊಂದಿಗೆ ಅಂತರ ಕ್ರಿಯೆಗಳಿಂದ ಜ್ಞಾನವನ್ನು ಕಟ್ಟಿಕೊಳ್ಳುವರು.
* ಮುಕ್ತ ವಾತಾವರಣದಲ್ಲಿ ಸ್ವತಂತ್ರವಾಗಿ ಪಾಲ್ಗೊಂಡು ಸ್ವಯಂ ಕಲಿಯುವರು.
* ಮನೆ ಮತ್ತು ಸಾಮಾಜಿಕ ಸನ್ನಿವೇಶದಲ್ಲಿ ಕಲಿತಿರುವ ಭಾಷಾ ಅನುಭವದೊಂದಿಗೆ ಭಾಷೆಯನ್ನು ಅಧಿಕೃತವಾಗಿ ಕಲಿತು ಬಳಸುವುದನ್ನು ಕಲಿಯುವರು.
* ಭಾಷಾ ಕಲಿಕೆಯ ಮೂಲಕ ಸ್ವತಂತ್ರ ಓದು-ಬರಹ, ಅಭಿವ್ಯಕ್ತಿಯ ಜೊತೆಗೆ ವಿಶ್ಲೇಷಣಾತ್ಮಕ ಚಿಂತನೆ, ಸೃಜನಾತ್ಮಕ ಚಿಂತನೆ ಹಾಗೂ ಅಭಿವ್ಯಕ್ತಿಯನ್ನು ಗಳಿಸಿಕೊಳ್ಳುವರು.
* ಉಪಾಧ್ಯಾಯನು ಭಾಷೆಯನ್ನು ಸಿದ್ಧ ರೀತಿಯಲ್ಲಿ ಕಲಿಸುವನಾಗಿರದೆ ಮಕ್ಕಳ, ಭಾಷಾ ಕಲಿಕೆಗೆ ಅಗತ್ಯ ಅವಕಾಶಗಳನ್ನು, ಚಟುವಟಿಕೆಗಳನ್ನು ಹಾಗೂ ಸಲಹೆಗಳನ್ನು ನೀಡುವ ಸುಗಮಕಾರನಾಗಿರುತ್ತಾರೆ.
* ರಚನಾತ್ಮಕ ಚಟುವಟಿಕೆಗಳ ಮೂಲಕ ಆಲೋಚನೆ ಹಾಗೂ ಅಭಿವ್ಯಕ್ತಿ ಸಾಮರ್ಥ್ಯವನ್ನು ಕಟ್ಟಿಕೊಳ್ಳಲು ಅವಕಾಶಗಳಿರಬೇಕು.
* ಗುಂಪಿನ ಅಂತರ ಕ್ರಿಯೆಗಳು, ಚರ್ಚೆಗಳು, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಸರದ ಅನುಭವಕ್ಕೂ ಅವಕಾಶಗಳಿರುತ್ತವೆ.
* ತರಗತಿಯ ಭಾಷಾ ಸಂಸ್ಕೃತಿ, ಉಪಾಧ್ಯಾಯರ ಸಂವಹನ, ಮನೋಭಾವ, ನಂಬಿಕೆ ಮತ್ತು ಅಭಿರುಚಿಗಳು ಭಾಷಾ ಕಲಿಕೆಗೆ ಪೂರಕವಾಗಿರಬೇಕು.

# ಎನ್.ಸಿ.ಎಫ್–2005 ಮತ್ತು ಪ್ರಥಮ ಭಾಷಾ ಬೋಧನೆ

ರಾಷ್ಟ್ರೀಯ ಪಠ್ಯಪುಸ್ತಕ ಚೌಕಟ್ಟು 2005 ರ ನಂತರ ಮೂರನೆಯ ಅಧ್ಯಾಯದಲ್ಲಿ ಪ್ರಥಮ ಭಾಷೆಯ ಅಧ್ಯಯನದ ಅಗತ್ಯ ಮತ್ತು ಮಹತ್ವದ ಬಗ್ಗೆ ಚರ್ಚಿಸಲಾಗಿದೆ. ಅದರಂತೆ ಮಕ್ಕಳು ತಮ್ಮಲ್ಲಿ ಅಂತರ್ಗತವಾಗಿರುವ ಭಾಷಾ ಸಾಮರ್ಥ್ಯವನ್ನು ಕುಟುಂಬ ಮತ್ತು ಮನೆಯ ಸುತ್ತಮುತ್ತಲಿನವರೊಡನೆ ನಡೆಸುವ ಭಾಷಿಕ ಚಟುವಟಿಕೆಗಳಿಂದ ಪಡೆದಿರುತ್ತಾರೆ. ಹಾಗಾಗಿ ಶಾಲೆಗೆ ಪ್ರವೇಶಿಸುವ ವೇಳೆಗೆ ಅವರಿಗೆ ಮಾತನಾಡುವ, ಸರಳಪದಗಳನ್ನು ಅರ್ಥಮಾಡಿಕೊಳ್ಳುವ ಭಾಷಾ ಸಾಮರ್ಥ್ಯವನ್ನು ಪಡೆದೇ ಬಂದಿರುತ್ತಾರೆ. ಅವರು ಕೇವಲ ಹಲವು ಪದಗಳ ಸಂಪತ್ತನ್ನು ಮಾತ್ರ ಪಡೆದು ಶಾಲೆಯನ್ನು ಪ್ರವೇಶಿಸುವುದಿಲ್ಲ. ಧ್ವನಿಗಳ, ಪದಗಳ, ವಾಕ್ಯಗಳ, ವಾಕ್ಯಖಂಡಗಳ, ಸನ್ನಿವೇಶಗಳ ವಿವಿಧ ಹಂತಗಳಲ್ಲಿ ಪ್ರಯೋಗವಾಗುವ ಭಾಷೆಯ ಅರಿವನ್ನು ಹೊಂದಿರುತ್ತಾರೆ. ಮಗುವಿಗೆ ತನ್ನ ಭಾಷೆಯಲ್ಲಿ ಸರಿಯಾಗಿ ಮಾತನಾಡುವುದು, ಆಡಿದ್ದನ್ನು ಅರ್ಥಮಾಡಿಕೊಳ್ಳುವುದೂ ಅಲ್ಲದೆ ಔಚಿತ್ಯಪೂರ್ಣವಾಗಿ ಬಳಸುವುದೂ ತಿಳಿದಿರುತ್ತದೆ. ವ್ಯಕ್ತಿ, ಸ್ಥಳ ಮತ್ತು ವಿಷಯ ಇವುಗಳನ್ನು ಗಮನಿಸಿ ಸಂದರ್ಭಕ್ಕೆ ತಕ್ಕಂತೆ ತನ್ನ ನಡವಳಿಕೆಗಳನ್ನು, ಭಾಷೆಯ ಬಳಕೆಯನ್ನು ಬದಲಾಯಿಸಿಕೊಳ್ಳುವ ಸಾಮರ್ಥ್ಯವನ್ನು ಅವರು ಹೊಂದಿರುತ್ತಾರೆ. (ಇಲ್ಲಿ ಜಾತಿಗೆ ತಕ್ಕ ಜೋಡು; ವೇಶಕ್ಕೆ ತಕ್ಕ ಭಾಷೆ ಎಂಬ ಜನಪದ ನುಡಿಯನ್ನು ನೆನೆಯಬಹುದು).

ಭಾಷೆಯಲ್ಲಿ ಬಳಕೆಯಾಗುವ ಅಸಂಖ್ಯಾತ ಧ್ವನಿಗಳ ನಡುವೆ ತನ್ನ ವಿವೇಚನೆಯಿಂದ ಅತ್ಯಂತ ಸಮರ್ಪಕವೂ, ಸಂಕೀರ್ಣವೂ ಆದ ಭಾಷಿಕ ಅಂಶಗಳನ್ನು ಗುರುತಿಸುವ ಸಾಮರ್ಥ್ಯವನ್ನು ಅವರು ಪಡೆದಿರುತ್ತಾರೆ. ಈ ಕೌಶಲವನ್ನು ಮಸೆದು ಉತ್ತಮಪಡಿಸುವುದೇ ಅಲ್ಲದೇ, ಭಾಷೆಯಲ್ಲಿ ಉನ್ನತ ಮಟ್ಟದ ಸಂವಹನ ಹಾಗೂ ಬೌದ್ಧಿಕ ಸಾಮರ್ಥ್ಯಗಳನ್ನು ಬೆಳೆಸುವುದು, ಪ್ರಥಮ ಭಾಷಾ ಬೋಧನೆಯ ಗುರಿ.

ಮೂರನೆಯ ತರಗತಿಯಿಂದಾಚೆಗೆ ಉನ್ನತ ಮಟ್ಟದ ಸಂವಹನ ಕೌಶಲ ಮತ್ತು ವಿಮರ್ಶಾತ್ಮಕ ಚಿಂತನೆಗಳನ್ನು ಬೆಳೆಸಲು ಮಾತುಗಾರಿಕೆ ಮತ್ತು ಸಾಕ್ಷರತೆ ಇವುಗಳನ್ನು ಸಾಧನಗಳಾಗಿ ಬಳಸಿಕೊಳ್ಳಬೇಕು. ಪ್ರಾಥಮಿಕ ಹಂತದಲ್ಲಿ ಮಕ್ಕಳು ಭಾಷೆಯನ್ನು ಯಥಾವತ್ ಸ್ವೀಕರಿಸಬೇಕು. ಇಲ್ಲಿ ಅದನ್ನು ತಿದ್ದುವ ಪ್ರಯತ್ನ ಮಾಡಬಾರದು. ನಾಲ್ಕನೆಯ ತರಗತಿಯಿಂದಾಚೆಗೆ ಸಾಕಷ್ಟು ಸಮೃದ್ಧವಾದ ಮತ್ತು ನಿರ್ದಿಷ್ಟ ಬರವಣಿಗೆಯ ನಿಯಮಗಳನ್ನು ಮಗು ತಾನಾಗಿಯೇ ಕಲಿತುಕೊಳ್ಳುತ್ತದೆ. ಭಾಷೆಯನ್ನು ಕಲಿಸುವ ಮತ್ತು ಕಲಿಯುವ ಸಂದರ್ಭದಲ್ಲಿ ತಪ್ಪುಗಳಾಗುವುದು ಸಹಜ ಈ ತಪ್ಪುಗಳು ಕಲಿಕೆಯ ಅವಿಭಾಜ್ಯ ಅಂಗವೆಂಬುದನ್ನು ಮತ್ತು ಮಕ್ಕಳು ತಪ್ಪನ್ನು ತಿದ್ದಿಕೊಳ್ಳಲು ಸಿದ್ಧರಾಗಿದ್ದರೆ ಮಾತ್ರ ತಿದ್ದಿಕೊಳ್ಳುತ್ತಾರೆ ಎಂಬ ಅಂಶವನ್ನು ಗಣನೆಗೆ ತೆಗೆದು ಕೊಳ್ಳಬೇಕು. ತಪ್ಪುಗಳನ್ನು ತಿದ್ದುವ ಮತ್ತು ಕಠಿಣಾಂಶಗಳನ್ನು ಕಲಿಸುವತ್ತಲೇ ಬೋಧನೆಯನ್ನು ಕೇಂದ್ರಿಕರಿಸುವ ಬದಲು ಅದೇ ಸಮಯವನ್ನು ಹೆಚ್ಚು ಹೆಚ್ಚು ಆಸಕ್ತಿ ಹುಟ್ಟಿಸುವ, ಸುಲಭವಾಗಿ

ಅರ್ಥವಾಗುವ ಮತ್ತು ಸವಾಲುಗಳನ್ನು ಒಡ್ಡುವ ಭಾಷಾ ಚಟುವಟಿಕೆಗಳನ್ನು ಒದಗಿಸಲು ವ್ಯಯ ಮಾಡಿದರೆ ಒಳಿತು.

ಶಾಲೆಗಳಲ್ಲಿ ಮಕ್ಕಳ ಮನೆಭಾಷೆಗಳ ಬೋಧನೆಯ ಮಹತ್ವ ಕುರಿತು ಹೆಚ್ಚು ಹೇಳಬೇಕಾಗಿಲ್ಲ. ಮಕ್ಕಳು ಒಬ್ಬರ ಜೊತೆ ಇನ್ನೊಬ್ಬರು ಮಾತನಾಡಲು ಅಗತ್ಯವಾದ ಮೂಲ ಸಂವಹನ ಕೌಶಲಗಳನ್ನು ಪಡೆದಿದ್ದರೂ, ಉನ್ನತ ಮಟ್ಟದ ಅರಿವಿನ ಭಾಷಿಕ ಪ್ರೌಢಿಮೆಯನ್ನು ಶಾಲೆಯಲ್ಲಿ ಪಡೆಯಬೇಕು. ಸಾಂದರ್ಭಿಕವಾಗಿ ಸಮೃದ್ಧವಾದ ಮತ್ತು ಭೌದ್ಧಿಕ ಚಿಂತನೆಗೆ ಅಷ್ಟೇನೂ ಸವಾಲಿಲ್ಲದ ಸಂದರ್ಭದಲ್ಲಿ ಉದಾಹರಣೆಗೆ : ಗೆಳೆಯರೊಡನೆ ಮಾತುಕತೆ ನಡೆಸಲು ಮೂಲಕೌಶಲಗಳು ಸಾಕಾಗುತ್ತವೆ. ಆದರೆ ಸಾಂದರ್ಭಿಕವಾಗಿ ಬಲವಾದ ಮತ್ತು ಹೆಚ್ಚು ಬೌದ್ಧಿಕ ಚಿಂತನೆಯನ್ನು ಅಪೇಕ್ಷಿಸುವ ಸಮಯದಲ್ಲಿ ಉನ್ನತ ಮಟ್ಟದ ಕೌಶಲಗಳು ಅಗತ್ಯವಾಗುತ್ತವೆ. ಉನ್ನತ ಮಟ್ಟದ ಕೌಶಲಗಳು ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ವರ್ಗಾಯಿಸಲ್ಪಡುತ್ತವೆ ಎಂಬ ಅಂಶವು ಈಗ ದೃಢಪಟ್ಟಿದೆ. ಆದ್ದರಿಂದ ಶಾಲಾಮಟ್ಟದಲ್ಲಿ ಭಾರತೀಯ ಭಾಷೆಗಳ ಕಲಿಕೆಯನ್ನು ಬಲಪಡಿಸಲು ನಾವು ನಮ್ಮ ಕೈಲಾದಷ್ಟು ಪ್ರಯತ್ನವನ್ನು ಮಾಡಬೇಕು.

ಭಾಷಾ ಶಿಕ್ಷಣವು ಭಾಷಾತರಗತಿಗೆ ಮಾತ್ರ ಸೀಮಿತವಾಗಿಲ್ಲ. ನಿಜಹೇಳಬೇಕೆಂದರೆ ವಿಜ್ಞಾನ, ಸಮಾಜ ವಿಜ್ಞಾನ ಅಥವಾ ಗಣಿತ ತರಗತಿಗಳೂ ಸಹ ಭಾಷಾತರಗತಿಗಳೇ ಆಗಿರುತ್ತವೆ. ಕೆಲವೊಂದು ವಿಷಯವನ್ನು ಕಲಿಯುವುದೆಂದರೆ ಪಾರಿಭಾಷಿಕ ಪದಗಳನ್ನು ಕಲಿಯುವುದು, ಅಲ್ಲಿನ ಪರಿಕಲ್ಪನೆಗಳನ್ನು ಕಲಿಯುವುದು, ಅವುಗಳ ಬಗ್ಗೆ ವಿಮರ್ಶಾ ದೃಷ್ಟಿಯಿಂದ ಚರ್ಚಿಸುವುದು ಮತ್ತು ಬರೆಯುವುದು ಎಂದರ್ಥ.

ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ ಪುಸ್ತಕಗಳನ್ನು ಓದುವುದನ್ನು, ಬೇರೆ ಭಾಗದವರೊಡನೆ ಚರ್ಚಿಸುವುದನ್ನು ಅಂತರ್ಜಾಲದ ಮೂಲಕ ಇಂಗ್ಲೀಷ್ ಭಾಷೆಯಲ್ಲಿ ವಿಷಯ ಸಂಗ್ರಹಿಸುವುದನ್ನು ಪ್ರೋತ್ಸಾಹಿಸಬೇಕು. ಪಠ್ಯಕ್ರಮದಲ್ಲಿ ಬೇರೆ ಬೇರೆ ಭಾಷೆಗಳನ್ನು ಬಳಸುವ ಈ ನೀತಿ ಶಾಲೆಗಳಲ್ಲಿ ನೈಜವಾಗಿ ಬಹು ಭಾಷಿಯತೆಯನ್ನು ಬೆಳೆಸಲು ಅನುಕೂಲವಾಗುತ್ತದೆ. ಕತೆಗಳು, ಕವಿತೆಗಳು, ಹಾಡುಗಳು ಮತ್ತು ನಾಟಕ ಮುಂತಾದವು ಮಕ್ಕಳನ್ನು ಸಾಂಸ್ಕೃತಿಕ ಪರಂಪರೆಯ ತೆಕ್ಕೆಯಲ್ಲಿ ಬಂಧಿಸುತ್ತವೆಯಲ್ಲದೆ ಅವರು ತಮ್ಮ ಅನುಭವಗಳನ್ನು ಅರ್ಥಮಾಡಿಕೊಳ್ಳಲು ಅವಕಾಶಗಳನ್ನೂ ಮತ್ತು ಇತರರಿಗೆ ಸ್ಪಂಧಿಸುವುದನ್ನೂ ಕಲಿಸುತ್ತವೆ. ಅನೇಕ ವೇಳೆ ಬೇಜಾರು ಮೂಡಿಸುವ ವ್ಯಾಕರಣ ತರಗತಿಯ ಪಾಠಗಳಿಗೆ ಹೋಲಿಸಿದರೆ, ಈ ಬಗೆಯ ಚಟುವಟಿಕೆಗಳಿಂದಲೇ ಮಕ್ಕಳು ವ್ಯಾಕರಣದ ಅಮೂರ್ತ ಕಲ್ಪನೆಗಳನ್ನು ಹೆಚ್ಚು ಕಷ್ಟಪಡದೆ ಸುಲಲಿತವಾಗಿ ಕಲಿಯುತ್ತಾರೆಂಬ ಅಂಶವನ್ನು ನಾವು ಮನಗಾಣಬೇಕು. ಸಾಮಾನ್ಯವಾಗಿ ಅನೇಕ ಬಹುಮುಖ ಪ್ರತಿಭೆಗಳುಳ್ಳ ಮಕ್ಕಳು ಮೂಲಭಾಷಿಕ ಕೌಶಲಗಳನ್ನು ಸಾಮಾಜಿಕ ಮಾತುಕತೆಗಳ ಮೂಲಕ ಕಲಿಯುತ್ತಾರಾದರೂ, ಅವರಿಗಾಗಿಯೇ ವಿನ್ಯಾಸಗೊಳಿಸಿದ ಭಾಷಿಕ ಸಾಮಾಗ್ರಿಗಳನ್ನು ಹೆಚ್ಚುವರಿಯಾಗಿ ಒದಗಿಸುವಲ್ಲಿ ಅವರ ಬೆಳವಣಿಗೆಗೆ ನೆರವಾಗುತ್ತದೆ.

(ರಾ.ಪ.ಚೌ–2005)

## ಭಾಷಾ ಕಲಿಕೆಯ ಪರಿಕಲ್ಪನೆ

ಒಂದು ಮಗು ಶಾಲೆಗೆ ಬಂದಾಗಿನಿಂದ, ಅವನು ಆ ಅವಧಿಯ ಶಾಲಾಭ್ಯಾಸವನ್ನು ಮುಗಿಸಿ ಹೊರಡುವಾಗ ಅವನು ಭಾಷೆಯ ಈ ಕೌಶಲಗಳನ್ನು ಅರ್ಥಪೂರ್ಣವಾಗಿ, ಸ್ವಾಧೀನ ಪಡಿಸಿಕೊಂಡು, ನಿರರ್ಗಳವಾಗಿ, ಸಹಜವಾಗಿ ಬಳಸುವ ಸಾಧ್ಯತೆಯನ್ನು ಪಡೆಯುವಂತೆ ಮಾಡುವುದೇ ಭಾಷಾ ಕಲಿಕೆಯ ಉದ್ದೇಶ. ಭಾಷೆಯು ಅತಿಸುಲಭವೆಂದೂ, ಅದನ್ನು ಯಾರಾದರೂ ಬೋಧಿಸಬಹುದೆಂದೂ ಮತ್ತು ಒಂದು ವಿದ್ಯಾಭ್ಯಾಸ ಉಳ್ಳವರಿಗೆ ಅದು ತಾನಾಗಿಯೇ ಬರುವುದೆಂದೂ ಒಂದು ಶಾಸ್ತ್ರೀಯ ಕಲಿಕೆಯ ವಿಧಾನದ ಕ್ರಮವಾದ ಅಧ್ಯಯನವು ತುಂಬಾ ಅವಶ್ಯಕ. ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಭಾಷೆಯು ತನ್ನದೇ ಆದ ವೈಶಿಷ್ಟ್ಯವನ್ನು ಅಪಾರವಾದ ಶ್ರೇಷ್ಠ ಸಾಹಿತ್ಯ ರಾಶಿಯನ್ನು ಮತ್ತು ಉತ್ತಮ ಪರಂಪರೆಯನ್ನು ಹೊಂದಿರುತ್ತದೆ.

ಜೀವಂತವೂ, ಸಾಹಿತ್ಯಕವೂ, ಸಾಂಸ್ಕೃತಿಕವೂ ಆಗಿರುವ ಭಾಷೆಯು ತನ್ನದೇ ಆದ ಧ್ವನಿಶಾಸ್ತ್ರ, ವ್ಯಾಕರಣ, ಶೈಲಿ, ಲಿಪಿ ಮತ್ತು ಅರ್ಥ ವ್ಯವಸ್ಥೆಯನ್ನು ಹೊಂದಿರುತ್ತದೆ. ಇದರ ಸಂಪೂರ್ಣ ಅರಿವು ಭಾಷಾಬೋಧಕನಿಗೆ ಇರಬೇಕಾಗುತ್ತದೆ. ಅಲ್ಲದೆ ಭಾಷಾಶಾಸ್ತ್ರದ ಒಂದು ಸಾಮಾನ್ಯ ಅರಿವೂ ಇರಬೇಕಾಗುತ್ತದೆ. ಇಷ್ಟೇ ಅಲ್ಲದೆ ಭಾಷಾ ಬೋಧನೆಯ ಶಾಸ್ತ್ರೀಯ ಅರಿವೂ ಅಗತ್ಯ.

## ಕನ್ನಡ ಭಾಷೆಯನ್ನು ಕಲಿಸಲು ಸಿದ್ಧತೆಯ ಹಂತಗಳು

### ಪಾಠದ ಹಿನ್ನೆಲೆ

1) ಸಾಹಿತ್ಯ, ಪ್ರಕಾರ, ಅದರ ಪ್ರಮುಖರು
2) ಕವಿ, ಲೇಖಕ– ಹಿನ್ನಲೆ ಇತರ ಕೃತಿಗಳು
3) ಪ್ರಸ್ತುತ ಕೃತಿಯ ಆಕರ ಗ್ರಂಥ, ಅದರ ಪೂರ್ತಿ ಪರಿಚಯ
4) ಅವಶ್ಯಕವಾದ ಇತರ ತಿಳಿವಳಿಕೆ: ಮೂಲ ಗ್ರಂಥ (ಆಕರ), ಮೂಲಕವಿ (ಅನುವಾದ ಇತ್ಯಾದಿ ಆದಾಗ ಮಾತ್ರ)

### ಪಠ್ಯ ವಿಶ್ಲೇಷಣೆ

1) ಬೋಧನಾ ಘಟಕಗಳಾಗಿ
2) ವಿದ್ಯಾರ್ಥಿಗಳ ದೃಷ್ಟಿಯಿಂದ ಅಲ್ಲಿರಬಹುದಾದ ಕಠಿಣಪದಗಳು, ಪರಿಕಲ್ಪನೆಗಳು, ಇವುಗಳನ್ನು ಪರಿಚಯಿಸುವ ಸಂದರ್ಭಗಳ ರಚನೆ.
3) ಪಾಠದಲ್ಲಿ ಬರುವ ಮುಖ್ಯಪಠ್ಯಾಂಶಗಳು– ಅವುಗಳ ಪಟ್ಟಿ ಸಿದ್ದತೆ
4) ಗಮನಿಸಬೇಕಾದ ಅಂಶಗಳು, ಬೇಕಾಗುವ ಪಾಠೋಪಕರಣಗಳು–ನಕ್ಷೆ, ಲೇಖಕರ ಚಿತ್ರ, ಆಕರ ಗ್ರಂಥದ ಪ್ರತಿ ಇತ್ಯಾದಿ.
5) ಪ್ರಕಟವಾಗುವ ಪ್ರಧಾನ ಮೌಲ್ಯಗಳು, ಸಂಬಂಧಗಳು.

**ಪಾಠಯೋಜನೆ ತಯಾರಿಕೆ :–**

ಅ) ಇಡೀ ಪಾಠವನ್ನು ಒಂದು ಘಟಕವಾಗಿ ಭಾವಿಸಿ ಯೋಜನೆ ತಯಾರಿಸಬೇಕು.

ಆ) ಕಲಿಕೆಯ ಫಲಗಳನ್ನು ಸ್ಪಷ್ಟವಾಗಿಸಿಕೊಂಡು ನಿರೂಪಿಸಿಕೊಳ್ಳಬೇಕು.

ಇ) ಸೂಕ್ತ ಕಲಿಕೆಯ ಅನುಭವಗಳನ್ನು ನಿರೂಪಿಸಿ, ಮೌಲ್ಯ ಮಾಪನದ ವಿಧಾನವನ್ನು ಗುರುತಿಸಿಕೊಳ್ಳಬೇಕು.

1. ಸಂಬಂಧೀಕರಣ
2. ಜ್ಞಾನ ಸೃಷ್ಟಿ
3. ವಿಮರ್ಶಾತ್ಮಕ ಚಿಂತನೆ

ಈ) ಪಾಠದ ಬೆಳವಣಿಗೆಯ ಹಂತಗಳನ್ನು ರೂಪಿಸಿಕೊಂಡು ಕಲಿಕಾ ಸಾಮಗ್ರಿಗಳನ್ನು ಹೊಂದಿಸಿಕೊಳ್ಳುವುದು.

ಉ) ಘಟಕ ಮೌಲ್ಯಮಾಪನ ರೂಪಿಸಿಕೊಂಡು ದೋಷ ನಿವಾರಣಾ ಮಾರ್ಗಗಳನ್ನು ಯೋಚಿಸಿ.

(ಹೆಚ್ಚಿನ ವಿವರಗಳಿಗೆ ರಚನಾ–1 ನೋಡಿ: ಗದ್ಯ–ಪದ್ಯ ಬೋಧನೆ).

**ರಚನಾತ್ಮಕ ವಿಧಾನ (Constructivist Approach)**

ಮಗುವು ತನ್ನ ಚಟುವಟಿಕೆಯ ಮೂಲಕ ಅನುಭವ ಪಡೆದು ತನ್ನ ಜ್ಞಾನವನ್ನು ರೂಪಿಸಿಕೊಳ್ಳುತ್ತದೆ. ಈ ವಿಧಾನದ ಮೂಲತತ್ವ. ಮಗುವು ತನ್ನ ಜ್ಞಾನವನ್ನು ಬಾಹ್ಯ ಸಂವೇದನೆಯಿಂದ ಪಡೆಯುತ್ತದೆಯೆಂಬ ವಾದಗಳೆರಡರ ಸಂಗಮ ಇದು (ಪಿಯಾಜೆ–ಬ್ರೂನರ್)

ಪಾಠ ಕಲಿಸುವಾಗ ವಿಷಯವನ್ನು ಚಿಕ್ಕ ಚಿಕ್ಕ ಅಂಶಗಳಾಗಿ ಮಾಡಿ, ಮಕ್ಕಳೇ ಅವುಗಳನ್ನು ರೂಪಿಸಿ ಜೋಡಿಸುವಂತೆ ಮಾಡಲು ಅವಕಾಶ ಮಾಡಿಕೊಟ್ಟು ಜ್ಞಾನವನ್ನು ರೂಪಿಸುವಂತೆ ಪ್ರೇರೇಪಿಸಬಹುದು.

ಈ ವಿಧಾನವನ್ನು ಕನ್ನಡದಲ್ಲಿ ವ್ಯಾಕರಣ (ಸಂಧಿ–ಸಮಾಸ), ಛಂದಸ್ಸು, ಅಲಂಕಾರಗಳನ್ನು ಬೋಧಿಸಲು ಬಳಸಬಹುದು. ಅಲ್ಲದೆ ಪ್ರಬಂಧ, ಸಾರ ಸಂಗ್ರಹ, ಪತ್ರಲೇಖನ ಇತ್ಯಾದಿ ಪಠ್ಯಾಂಶಗಳ ಕಲಿಕೆಗೂ ಬಳಸಬಹುದು. ಇದರ ಸೂತ್ರ ವಿಭಜನೆ+ಸಂಯೋಜನೆ=ಪೂರ್ಣ ಅರ್ಥಗ್ರಹಿಕೆ.

# NCF-2005 ಮತ್ತು ಕನ್ನಡ ಭಾಷಾ ಕಲಿಕೆಯ ಆಶಯಗಳು

1986 ರ ರಾಷ್ಟ್ರೀಯ ಶಿಕ್ಷಣನೀತಿ ಒಂದು ರಾಷ್ಟ್ರೀಯ ವ್ಯವಸ್ಥೆಯನ್ನು ಹುಟ್ಟು ಹಾಕುವ ಪ್ರಯತ್ನ ಆರಂಬಿಸಿತ್ತು. 1992ರ ಕ್ರಿಯಾ ಯೋಜನೆಯಲ್ಲಿ ಇದನ್ನು ಇನ್ನೂ ವಿವರವಾಗಿಯೂ ಸ್ಪಷ್ಟವಾಗಿಯೂ ಹೇಳಲಾಗಿತ್ತು. ಈಗಾಗಲೆ 'ನಿರಂತರ' ಹಾಗೂ 'ರಚನಾ–1' ರಲ್ಲಿ ಈ ವಿಚಾರಗಳನ್ನು ಚರ್ಚಿಸಲಾಗಿದೆ.

ಎಷ್ಟೇ ಚರ್ಚಿಸಿದರೂ ಹೊಸ ವಿಷಯಗಳಿಗೆ ನಾಂದಿಯಾಗುವ ಈ ವಿಷಯವನ್ನು ಮತ್ತೊಮ್ಮೆ ಮೆಲುಕು ಹಾಕುವುದು ಸೂಕ್ತ. ಶಿಕ್ಷಣ ವ್ಯವಸ್ಥೆಗೆ ತಳಹದಿಯಾಗಿ ಆಗಾಗ ಪಠ್ಯಕ್ರಮದ ನೀತಿ ನಿರೂಪಣೆ ಮಾಡಲಾಗುತ್ತದೆ. ಈ ಎಲ್ಲ ಪಠ್ಯಕ್ರಮಗಳ ಮೂಲದಲ್ಲಿ ಸಂವಿಧಾನದಲ್ಲಿ ಶಿಫಾರಸು ಮಾಡಲಾದ ಮೌಲ್ಯಗಳನ್ನೇ ಕಾಣಬಹುದಾಗಿದೆ. Egalitarian, seecular, pluralistic society founded on social justice and equality ಈ ಅಂಶಗಳನ್ನು ಆಧರಿಸಿಯೇ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005 ರೂಪುಗೊಂಡಿದೆ.

### ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005 ಮತ್ತು ಭಾಷಾ ಕಲಿಕೆ

ಎನ್. ಸಿ.ಎಫ್ 2005 ರ ಮುಖ್ಯ ಲಕ್ಷಣಗಳು ರಾಷ್ಟ್ರೀಯ ವ್ಯವಸ್ಥೆಯನ್ನು ಬಲಪಡಿಸುವುದೇ ಆಗಿದೆ. ಅದರ ಮುಖ್ಯಾಂಶಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಲಾಗಿದೆ.

1. ಭಾರತ ಸಂವಿಧಾನದಲ್ಲಿ ನೆಲೆಗೊಳಿಸಿರುವ ಮೌಲ್ಯಗಳ ಅಳವಡಿಕೆ.
2. ಪಠ್ಯಕ್ರಮ ವಿಧಿಸುವ ಹೊರೆಯನ್ನು ಕಡಿಮೆ ಮಾಡುವುದು.
3. ಎಲ್ಲರಿಗೂ ಮೌಲ್ಯಾಧಾರಿತ/ ಗುಣಾತ್ಮಕ ಶಿಕ್ಷಣ (FFA) ದೊರಕಿಸುವುದು.
4. ವ್ಯವಸ್ಥಿತ ಸುಧಾರಣೆ
5. ಸರ್ವ ಸಮಾನ ಶಾಲಾ ವ್ಯವಸ್ಥೆ

### ಭಾಷಾ ತರಗತಿಯಲ್ಲಿ ಪಠ್ಯಪುಸ್ತಕದ ಅಗತ್ಯ.

ಪಠ್ಯಪುಸ್ತಕವು ವಿವಿಧ ಭಾಷಾ ರಚನೆಯನ್ನು ಆಧರಿಸಿ ರಚಿಸಲ್ಪಟ್ಟಿರುವುದು. ಎಲ್ಲ ಭಾಷೆಗಳೂ ನಮಗೆ ಆಧಾರವಾದ ಕೆಲವು ಮೂಲಭೂತವಾದ ಭಾಷಾ ರಚನೆಗಳನ್ನೊಳಗೊಂಡಿರುತ್ತವೆ. ಅವುಗಳನ್ನು ಸ್ವಾದೀನ ಪಡಿಸಿಕೊಂಡಾಗ ಭಾಷೆಯು ನಮ್ಮ ಅಧೀನವಾಗುತ್ತದೆ. ನಾವು ಭಾಷೆಯ ಮೇಲೆ ಪ್ರಭುತ್ವ ಸಾಧಿಸಬಹುದು. ಹಾಗಾಗಿ ಭಾಷಾ ತರಗತಿಯಲ್ಲಿ ನಮಗೆ ಪಠ್ಯಪುಸ್ತಕವು ಭಾಷೆಯನ್ನು ಕಲಿಸುವ ಸಾಧನವೇ ಹೊರತು ಜ್ಞಾನ ಸಂಪಾದನೆಯ ಏಕೈಕ ಮಾರ್ಗವಲ್ಲ. ಭಾಷಾತರಗತಿಯಲ್ಲಿ ದೊರಕುವ ಈ ಜ್ಞಾನವು ಕೇವಲ ಅನುಷಂಗಿಕವಾದ್ದು

**ಭಾಷಾಕಲಿಕೆಯ ಉದ್ದೇಶ.**

ಭಾಷೆಯು ಗ್ರಹಿಕೆ ಮತ್ತು ಅಭಿವ್ಯಕ್ತಿಯ ಒಂದು ಸಾಧನ. ಅದು ನಮ್ಮ ಪರಿಸರದೊಂದಿಗೆ ವ್ಯವಹರಿಸಲು ನಮಗೆ ಸಾಧನವಾಗಿ ಒದಗುತ್ತದೆ. ಒಬ್ಬ ಕಾರ್ಮಿಕನಿಗೆ ಉಳಿ, ಸುತ್ತಿಗೆ, ಸ್ಪ್ಯಾನರ್ ಇತ್ಯಾದಿ ಉಪಕರಣಗಳು ಹೇಗೋ ಹಾಗೆ ಮಾನವನ ಅಭಿವ್ಯಕ್ತಿಗೆ, ಸಾಮಾಜಿಕ ವ್ಯವಹಾರಕ್ಕೆ, ಸಾಮಾಜಿಕ ಸಹಕಾರಕ್ಕೆ ಒದಗಿ ಬರುವ ಸಾಧನ–ಉಪಕರಣ ಭಾಷೆಯಾಗಿದೆ.

**ಭಾಷೆಯ ಬಳಕೆ**

ಒಬ್ಬ ವ್ಯಕ್ತಿಯು ತನ್ನ ಕೈಗೆ ಉಳಿ, ಸುತ್ತಿಗೆ, ಸ್ಪ್ಯಾನರ್ ಬಂದೊಡನೆಯೇ ನುರಿತ ಕಾರ್ಮಿಕನಾಗಲಾರನೋ ಹಾಗೆ ಸ್ಪಷ್ಟವಾದ, ನಿಖರವಾದ, ಕೌಶಲಗಳನ್ನು ಸಾಧಿಸದೇ ಯಾರೂ ಭಾಷಾ ಬಳಕೆಯ ಎಲ್ಲಾ ಸಾಧ್ಯತೆಗಳನ್ನು ಗಳಿಸಲು ಸಾಧ್ಯವಿಲ್ಲ.

**ಭಾಷಾ ಪ್ರಭುತ್ವ**

ಭಾಷೆಯ ಮೇಲಿನ ಪ್ರಭುತ್ವ ಸಾಧನೆಯೆಂದರೆ, ಭಾಷಾ ಬಳಕೆಯ ವಿವಿಧ ಕೌಶಲಗಳನ್ನು ಸಾಧಿಸುವುದೇ ಆಗಿದೆ. ಈ ಕೌಶಲಗಳು ಅನೇಕ ಸ್ತರದ ರೀತಿಯ ಆಂತರಿಕ ಪರಿಕರಗಳನ್ನು ಒಳಗೊಂಡಿರುತ್ತದೆ. ಸದಾಚಾರಗಳು ಪ್ರಜಾಸತ್ತಾತ್ಮಕ ಭಾಷೆ, ಒಳಗೊಳ್ಳುವ ಸಮನ್ವಯ ಭಾಷೆ, ಮನೋಧರ್ಮ, ಭಾವ ನಿಯಂತ್ರಣ.

ಪ್ರತಿಯೊಂದು ಭಾಷಾ ಕೌಶಲವೂ ತನ್ನದೇ ವಿವಿಧ ಸ್ತರಗಳ ಮಾನಸಿಕ ಮನೋದೈಹಿಕ ಹಾಗೂ ದೈಹಿಕ ಚಟುವಟಿಕೆಗಳಿಂದ ಕೂಡಿರುತ್ತದೆ.

**ಭಾಷಾ ಕೌಶಲಗಳು:–**

1) ಆಲಿಸುವುದು (Listening)
2) ಮಾತನಾಡುವುದು (Speaking)
3) ಓದುವುದು (Reading)
4) ಚಿಂತನೆ (Thinking)
5) ಬರೆಯುವುದು (Writing)
6) ಅಭ್ಯಾಸ ಕೌಶಲ/ಅಧ್ಯಯನ ಶೀಲತೆ (Study Skill)

**ಪ್ರೌಢಶಿಕ್ಷಣದಲ್ಲಿ ಭಾಷಾ ಪಠ್ಯಪುಸ್ತಕದ ಸ್ಥಾನ**

ಪ್ರಾಥಮಿಕ ಹಂತದ ಶಿಕ್ಷಣವು ಪ್ರಧಾನವಾಗಿ ಭಾಷಾ ಶಿಕ್ಷಣವೇ ಆಗಿದ್ದು ಈ ಹಂತದಲ್ಲಿ ಮಕ್ಕಳು ಮಾತೃಭಾಷೆಯಲ್ಲಿ ಓದು, ಬರಹ, ಮಾತು ಕಥೆಗಳನ್ನು ಒಂದು ಹಂತಕ್ಕೆ ಕಲಿತು ಬಳಸಲು ಶಕ್ತರಾಗುತ್ತಾರೆ. ಈ ಹಂತದಲ್ಲಿ ಭಾಷಾ ಕೌಶಲಗಳನ್ನು ಕಲಿತು ಪ್ರಯೋಗಿಸುವಲ್ಲಿ ಸ್ವಾವಲಂಬಿಗಳಾಗಿದ್ದರೂ ಮೂಲಭೂತ ಕಲಿಕೆ ಆಗಿರುತ್ತದೆಂಬುದು ಅಪೇಕ್ಷಣೀಯ. ಪ್ರೌಢಹಂತದಲ್ಲಿ ಈಗಾಗಲೇ ಕಲಿತಿರುವ ಭಾಷಾ ಕೌಶಲಗಳನ್ನು ಗಟ್ಟಿಗೊಳಿಸಿಕೊಳ್ಳುವುದರ ಜೊತೆಗೆ ಭಾಷೆಯನ್ನು ಕಲಿಕೆಯ ಒಂದು ಪ್ರಮುಖ ಸಾಧನವನ್ನಾಗಿ ಬಳಸಲು ಶಕ್ತರಾಗುತ್ತಾರೆ. ಈ ಹಂತದಲ್ಲಿ

ಆಲಿಸುವಿಕೆ, ಮಾತು, ಓದು, ಬರೆಹದ ಜೊತೆಗೆ ಲೇಖನ ರಚನಾ ಸಾಮರ್ಥ್ಯ, ಸ್ವಯಂ ಅಭಿವ್ಯಕ್ತಿ, ವ್ಯಾಕರಣಾಂಶಗಳ ತಿಳುವಳಿಕೆ, ಛಂದಸ್ಸು ಅಲಂಕಾರಗಳನ್ನು ಕಲಿಯಲು ಹಾಗೂ ಪರಿಣಾಮಕಾರಿ ಸಂವಹನ ಸಾಮರ್ಥ್ಯ ಕಲಿಯಲು ಅಗತ್ಯ ಅವಕಾಶಗಳನ್ನು ರೂಪಿಸಿಕೊಡುವುದು ಅಗತ್ಯ. ಈ ರೀತಿ ಭಾಷಾ ಕಲಿಕೆಯನ್ನು ವಿಸ್ತರಿಸುವುದು. ಭಾಷಾ ಪ್ರಯೋಗವನ್ನು ಹೆಚ್ಚು ಪರಿಣಾಮಕಾರಿಗೊಳಿಸಲು ಮಕ್ಕಳನ್ನು ತರಬೇತಿಗೊಳಿಸಲು ಭಾಷಾ ಪಠ್ಯ ಪುಸ್ತಕವು ನೆರವಾಗುತ್ತದೆ. ಈ ಆಶಯದೊಂದಿಗೆ ಸಿರಿಗನ್ನಡ 9 ಭಾಷಾ ಪಠ್ಯ ಪುಸ್ತಕವನ್ನು ರಚಿಸುವ ಯತ್ನಗಳಾಗಿವೆ. ಈ ಪಠ್ಯಪುಸ್ತಕದಲ್ಲಿರುವ ಗದ್ಯ, ಪದ್ಯಗಳು, ಪೂರಕ ಭಾಷಾ ಅಭ್ಯಾಸಗಳು, ಛಂದಸ್ಸು ಅಲಂಕಾರದ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಪ್ರಥಮಭಾಷೆ ಕನ್ನಡ ಕಲಿಕೆಯ ಮೂಲಕ

* ಅರ್ಥ ಗ್ರಹಿಕೆ, ವಾಚನ ಕೌಶಲ.
* ಮೌಖಿಕ ಮತ್ತು ಲಿಖಿತವಾಗಿ ಸ್ವಯಂ ಅಭಿವ್ಯಕ್ತಿ ಕೌಶಲವನ್ನು ಬಲಪಡಿಸುವುದು.
* ಕಥೆ, ಕವನ, ಸಾರಾಂಶ, ಅನುವಾದ, ಪತ್ರ, ಪ್ರಬಂಧ, ಗಾದೆಗಳ ವಿಸ್ತಾರ, ಸಾರಸಂಗ್ರಹ, ಸಾರವಿಸ್ತಾರ, ದಿನಚರಿ ಇತ್ಯಾದಿ ಬರಹಗಳಲ್ಲಿ ಪರಿಣತಿ ಗಳಿಸುವುದು.
* ಪರಿಣಾಮಕಾರಿ ಸಂವಹನ ಕೌಶಲ.
* ಸಾಹಿತ್ಯಾಭಿರುಚಿ ಹಾಗೂ ನಾಡು ನುಡಿಗಳ ಬಗೆಗೆ ಅಭಿಮಾನ, ಗೌರವ ಹೊಂದುವುದು.
* ಸ್ವತಂತ್ರ ಚಿಂತನೆ ಮತ್ತು ಅಭ್ಯಾಸ ಕೌಶಲಗಳು ಹಾಗೂ ಅಭಿರುಚಿ ಬೆಳೆಸುವುದು.
* ಪುಸ್ತಕ ಪ್ರೀತಿ ಮತ್ತು ಸಾಹಿತ್ಯ ಅಭಿರುಚಿ ಹೊಂದುವುದು.
* ಮಾಧ್ಯಮಗಳು, ಗ್ರಂಥಾಲಯದಲ್ಲಿ ಓದಿ ಜ್ಞಾನಾರ್ಜನೆ ಹೆಚ್ಚಿಸಿಕೊಳ್ಳುವುದು.
* ಓದಿನ ಮೂಲಕ ರಾಷ್ಟ್ರೀಯ ಮೌಲ್ಯಗಳ ವರ್ಧನೆ, ನಾಯಕತ್ವದೊಂದಿಗೆ ವ್ಯಕ್ತಿತ್ವ ವಿಕಾಸ ಹೊಂದುವುದು.
* ನಿಘಂಟು, ವಿಶ್ವಕೋಶಗಳ ಅಭ್ಯಾಸ.
* ಕಂಪ್ಯೂಟರ್, ಅಂತರ್ಜಾಲ ಮತ್ತು ಅಡಕ ಮುದ್ರಿಕೆಗಳ (ಸಿ.ಡಿ) ಬಳಕೆ.
* ದಿನನಿತ್ಯದ ವ್ಯವಹಾರ, ಉದ್ಯೋಗ ತರಬೇತಿ ಭಾಷೆಯ ಬಳಕೆ ಮುಂತಾಗಿ ಮಕ್ಕಳ ಸರ್ವಾಂಗೀಣ ವಿಕಾಸಕ್ಕೆ ಭಾಷಾ ಕಲಿಕೆಯು ಸೂಕ್ತ ನೆಲೆಯನ್ನು ಹಾಗೂ ಮುನ್ನೋಟವನ್ನು ಒದಗಿಸುವುದು ಅಪೇಕ್ಷಣೀಯ. ಪಡಿಯಚ್ಚು ರೀತಿಯಲ್ಲಿ ಮಾಹಿತಿಯನ್ನು ಸಂಗ್ರಹಿಸಿ ಹೊರಹಾಕುವ ಅವೈಜ್ಞಾನಿಕ ಹೊರತಾಗಿ ಸ್ವಯಂ ಚಟುವಟಿಕೆ, ಸಂವೇದನೆಗಳ ಮೂಲಕ ಜ್ಞಾನ, ಮನೋಭಾವ ಹಾಗೂ ಮೌಲ್ಯಗಳನ್ನು ರಚನಾತ್ಮಕವಾಗಿ ಕಟ್ಟಿಕೊಳ್ಳುವಂತಹ ಅನುಭವಗಳನ್ನು ಮಕ್ಕಳಿಗೆ ಒದಗಿಸಿಕೊಡಲು ಈ ವಿಶ್ವಪುಸ್ತಕವನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು. ಈ ದಿಕ್ಕಿನಲ್ಲಿ ಭಾಷಾ ಶಿಕ್ಷಕರು ಪಠ್ಯಪುಸ್ತಕದ ಆಶಯಗಳನ್ನು ಅರ್ಥಮಾಡಿಕೊಳ್ಳಬೇಕು ಹಾಗೂ ಪುಸ್ತಕವನ್ನು ಇನ್ನೂ ಗಟ್ಟಿಗೊಳಿಸಲು ಮುಂದಾಗಬೇಕು. ಈ ಪಠ್ಯಪುಸ್ತಕವನ್ನೇ ಸರ್ವಸ್ವ ಎಂದು

ಭಾವಿಸದೆ ಪಠ್ಯಪುಸ್ತಕ ರಾಜಿಗಿನ ಭಾಷಾ ಕಲಿಕೆಯನ್ನು, ಬಳಕೆಯನ್ನು ಪ್ರೋತ್ಸಾಹಿಸುವ ತಮ್ಮ ಚಿಂತನೆಯನ್ನು ಹರಿಸಬೇಕಾಗಿದೆ.

ಇವುಗಳ ಆಧಾರದಲ್ಲಿಯೇ ಶಿಕ್ಷಣದ ಗುರಿಗಳನ್ನು ರೂಪಿಸಲಾಗಿತ್ತು. ಇವುಗಳೆಂದರೆ

i) ಸ್ವತಂತ್ರ ಚಿಂತನೆ ಹಾಗೂ ಕ್ರಿಯಾಶೀಲ ಬೆಳವಣಿಗೆ.

ii) ಇತರರ ಭಾವನೆಗಳಿಗೆ ಸ್ಪಂದಿಸುವಿಕೆ

iii) ಹೊಸ ಸನ್ನಿವೇಶಗಳಿಗೆ ನಮ್ಯ ಹಾಗೂ ಸೃಜನಶೀಲ ರೀತಿಯಲ್ಲಿ ಸ್ಪಂದಿಸುವಿಕೆ.

ಶಿಕ್ಷಣವು ಪ್ರಜಾಸತ್ತಾತ್ಮಕ ಜೀವನ ಶೈಲಿಯನ್ನು ಗಟ್ಟಿಗೊಳಿಸಬೇಕಾದರೆ, ಅದು ಮೊತ್ತಮೊದಲಿಗೆ ಪ್ರಥಮ ತಲೆಮಾರಿನ ಕಲಿಕಾರ್ಥಿಗಳನ್ನು ಶಾಲೆಯಲ್ಲಿಯೇ ಉಳಿಯುವಂತೆ ಮಾಡಬೇಕಾಗಿದೆ.

## 2.3 ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಭಾಷಾ ಬೋಧನಾ ಸಂಬಂಧಿ ಸಾರಾಂಶ

ಮೇಲೆ ತಿಳಿಸಿದ ಐದು ಮಾರ್ಗದರ್ಶಿ ಸೂತ್ರಗಳಲ್ಲದೆ ಎನ್.ಸಿ.ಎಫ್. –2005 ಹೊರೆಯಾಗದ ಕಲಿಕೆಗೂ ಆದ್ಯತೆ ಕೊಡುತ್ತದೆ. ಮುಂದಿನ ಅಧ್ಯಾಯಗಳಲ್ಲಿ ಕಲಿಕೆ ಮತ್ತು ವ್ಯವಸ್ಥೆಯ ಕುರಿತು ಈಚೌಕಟ್ಟು ವಿಷದವಾಗಿ ಚರ್ಚಿಸುತ್ತದೆ. ಜ್ಞಾನ ಮತ್ತು ಕಲಿಕೆಯ ಬಗ್ಗೆ ಪ್ರಸ್ತಾಪಿಸುತ್ತಾ ಮಗು ಜ್ಞಾನವನ್ನು ಕಟ್ಟಿಕೊಳ್ಳುವುದು ಎಂಬ ವಿಷಯವನ್ನು ಎನ್.ಸಿ.ಎಫ್ ವಿವರವಾಗಿ ಚರ್ಚಿಸುತ್ತದೆ. ಕಲಿಕೆಯು ಮಗುವಿನ ದೈಹಿಕ ಮಾನಸಿಕ ಮಟ್ಟಕ್ಕೆ ಇದ್ದು ಮಗು ಜ್ಞಾನವನ್ನು ಕಟ್ಟಿಕೊಳ್ಳುವಲ್ಲಿ ಪಠ್ಯಕ್ರಮ ಸಹಾಯ ಮಾಡಬೇಕು. ಕಲಿಕೆಯ ಅನುಭವವು ಮಗುವಿನ ಸ್ವಭಾವ ಹಾಗೂ ಪರಿಸರಕ್ಕೆ ಹೊಂದಿಕೆಯಾಗಬೇಕು.

ಜ್ಞಾನ ಮತ್ತು ಮಾಹಿತಿಯನ್ನು ಪ್ರತ್ಯೇಕಿಸಬೇಕು. ಬೋಧನೆಯನ್ನು ಒಂದು ವೃತ್ತಿಪರ ಚಟುವಟಿಕೆಯಾಗಿ ಪರಿಗಣಿಸಬೇಕೇ ಹೊರತು ಮಾಹಿತಿ ನೀಡುವ, ನೆನಪು ಶಕ್ತಿ ಬೆಳೆಸುವ ತರಬೇತಿ ಎಂದು ತಿಳಿಯಬಾರದು. ಚಟುವಟಿಕೆಗಳೇ ಮಗುವಿಗೆ ಈ ಪ್ರಪಂಚವನ್ನು ಅರ್ಥಮಾಡಿಕೊಳ್ಳಲು ಇರುವ ಮುಖ್ಯ ಮಾಧ್ಯಮ. ತರಗತಿಯ ಕಲಿಕಾ ಅನುಭವಗಳು/ ಚಟುವಟಿಕೆಗಳು ಮಕ್ಕಳಿಗೆ ತಮ್ಮ ಜ್ಞಾನವನ್ನು ಕಟ್ಟಿಕೊಳ್ಳಲು ಸಹಾಯಕವಾಗುವಂತಿರಬೇಕು.

ಶಿಕ್ಷಣ ಈಗ ಸಂವಿಧಾನ ಬದ್ದವಾದ ಮೂಲಭೂತ ಹಕ್ಕು, ಲಿಂಗ, ಜಾತಿ, ಅಂಗವಿಕಲತೆಗಳ ವ್ಯತ್ಯಾಸ ಮೀರಿದ ಶಾಲಾ ವಾತಾವರಣವನ್ನು ನಿರ್ಮಿಸಿ, ಮಕ್ಕಳ ಆರೋಗ್ಯ ಮತ್ತು ಪೌಷ್ಠಿಕ ಆಹಾರದ ಬಗ್ಗೆ ನಿಗಾವಹಿಸಬೇಕಾಗಿದೆ.

## 2.2 ಪಠ್ಯಕ್ರಮದ ಅಭಿವೃದ್ಧಿಗೆ ಎನ್.ಸಿ.ಎಫ್–2005 ಮಾರ್ಗದರ್ಶಿ ತತ್ವಗಳು

ಇಂದು ಕಲಿಕೆ ಹೊರೆಯಾಗಲು ನಾವು ಶಿಕ್ಷಣದ ಗುರಿಗಳನ್ನು ಈಡೇರಿಸಿಕೊಳ್ಳುವಲ್ಲಿ ಹಾಗೂ ಗುಣಾತ್ಮಕತೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ತಪ್ಪಿದ್ದೇವೆಂಬುದೇ ಸಾಕ್ಷಿ. ಇದನ್ನು ಸರಿಪಡಿಸಲು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು –2005 ಐದು ಮಾರ್ಗದರ್ಶಿ ಸೂತ್ರಗಳನ್ನು ಮುಂದಿಟ್ಟಿದೆ. ಈ ಸೂತ್ರಗಳು ಅತ್ಯಂತ ಸರಳವಾದ ಅರ್ಥವನ್ನು ಹೊಂದಿವೆ.

1. ಜ್ಞಾನವನ್ನು ಶಾಲೆಯ ಹೊರಗಿನ ಜೀವನಕ್ಕೆ ಸಂಬಂಧೀಕರಿಸುವುದು.
2. ಬಾಯಿ ಪಾಠ ಮಾಡುವ ವಿಧಾನಗಳಿಂದ ಕಲಿಕಾ ಪ್ರಕ್ರಿಯೆಯನ್ನು ಬೇರೆಯಾಗಿಸುತ್ತಿರುವುದನ್ನು ಖಚಿತಪಡಿಸಿಕೊಳ್ಳುವುದು.
3. ಪಠ್ಯಕ್ರಮವು ಪಠ್ಯಪುಸ್ತಕಗಳನ್ನು ಮೀರಿ ನಿಲ್ಲುವಂತೆ ಶ್ರೀಮಂತಗೊಳಿಸುವುದು.
4. ಪಠ್ಯವನ್ನು ಹೆಚ್ಚು ನಮ್ಯ ಮಾಡುವುದು ಹಾಗೂ ತರಗತಿಯ ಆಗುಹೋಗುಗಳೊಂದಿಗೆ ಸಮ್ಮಿಶ್ರಗೊಳಿಸುವುದು.
5. ಪ್ರಜಾಸತ್ತಾತ್ಮಕ ರಾಜ್ಯವ್ಯವಸ್ಥೆಯಲ್ಲಿ ಪಾರಸ್ಪರಿಕ ಶ್ರದ್ಧೆ ಹಾಗೂ ಪ್ರೀತಿಗಳುಳ್ಳ ಕಾಳಜಿಗಳನ್ನು ಬೆಳೆಸುವುದು.

ಇದಕ್ಕಾಗಿ ಈಗಿರುವ ವ್ಯವಸ್ಥೆಯನ್ನು ಬದಲಾಯಿಸಬೇಕಾಗಬಹುದು. ಹೆಚ್ಚು ಹೆಚ್ಚು ಸಂಪನ್ಮೂಲಗಳೂ ಅಗತ್ಯವಾಗಬಹುದು.

ಪಠ್ಯ ವಿಷಯಗಳೊಳಗಿನ ಅಂತರವನ್ನು ಕಡಿಮೆ ಮಾಡಿ ಸಂಮಿಳಿತ (integrated) ಪಠ್ಯವಸ್ತುವನ್ನು ಒದಗಿಸಲು ಶಿಫಾರಸು ಮಾಡಲಾಗಿದೆ. ಸ್ಥಳೀಯ ಹಾಗೂ ಪಾರಂಪರಿಕ ಕೌಶಲಗಳನ್ನೊಳಗೊಂಡ ಬಹುಪಠ್ಯಪುಸ್ತಕಗಳು ಹಾಗೂ ಇತರ ಸಾಹಿತ್ಯ ಮಗುವಿನ ಮನೆಯ ಹಾಗೂ ಸಮುದಾಯದ ಜೀವನದ ಅವಶ್ಯಕತೆಗಳಿಗೆ ಸ್ಪಂದಿಸಬೇಕು ಮಗುವಿನ ಮಾತೃಭಾಷೆ, ಸ್ಥಳೀಯ, ಬುಡಕಟ್ಟು ಭಾಷೆಗಳನ್ನು ಆರಂಭಿಕ ಹಂತದಲ್ಲಿ ಬೋಧನಾ ಮಾಧ್ಯಮವಾಗಿ ಬಳಸಬೇಕೆಂದು ಸೂಚಿಸಲಾಗಿದೆ.

ಇಂಗ್ಲೀಷ್ ಸೇರಿದಂತೆ ಬಹುಭಾಷಾ ಸಾಮರ್ಥ್ಯವನ್ನು ಮಕ್ಕಳಲ್ಲಿ ಬೆಳೆಸಬೇಕು. ಮಾತೃಭಾಷೆಯಲ್ಲಿ ಬರೆಯುವ, ಓದುವ ಕೌಶಲಗಳಿಗೆ ಔಪಚಾರಿಕ ತರಬೇತಿ ಕೊಡಬೇಕು, ಆದರೆ ದ್ವಿತೀಯ ಮತ್ತು ತೃತೀಯ ಭಾಷೆಗಳಿಗೆ ಎಲ್ಲ ಕೌಶಲಗಳಲ್ಲೂ ತರಬೇತಿ ನೀಡಬೇಕು. ಇವೆಲ್ಲವೂ ಮಾತೃಭಾಷೆಯ ಮೇಲೆ ಸರಿಯಾದ ಪ್ರಭುತ್ವ ಸಾಧಿಸುವುದರಿಂದ ಸಾಧ್ಯವಾಗುತ್ತದೆ. ಅದಕ್ಕೆ ಅಗತ್ಯವಾದ ಬೋಧನಾ ಕ್ರಮ ಅಳವಡಿಸಿಕೊಳ್ಳಬೇಕು. ಓದುವ ಕೌಶಲದ ಬೆಳವಣಿಗೆಗೆ ಒತ್ತು ನೀಡುವುದರಿಂದ ಶಾಲಾಕಲಿಕೆಗೆ ಪ್ರಯೋಜನವಾಗುವುದು ಎಂಬುದನ್ನು ಮನಗಾಣಲಾಗಿದೆ.

ಪರೀಕ್ಷಾ ಕ್ರಮಗಳಲ್ಲಿ ಬದಲಾವಣೆ – ಪರೀಕ್ಷೆಗಳು ಹೊರೆ ರಹಿತ ಹಾಗೂ ಒತ್ತಡ ಕಡಿಮೆ ಮಾಡುವಂತಿರಬೇಕು. ಪರೀಕ್ಷೆಯಲ್ಲಿ ಕೇಳುವ ಪ್ರಶ್ನೆಗಳ ಸ್ವರೂಪದಲ್ಲಿ ಬದಲಾಗಿ ಅವು ತಾರ್ಕಿಕ ಮತ್ತು ಸೃಜನ ಶೀಲ ಸಾಮರ್ಥ್ಯಗಳಿಗೆ ಹೆಚ್ಚು ಒತ್ತು ಕೊಡಬೇಕು. ತರಗತಿಯೊಡನೆ ಪರೀಕ್ಷಾ ಕ್ರಮಗಳು ಮತ್ತು ಮೌಲ್ಯಮಾಪನ ಸಮ್ಮಿಳಿತಗೊಳ್ಳಬೇಕು. ಪಾಸು/ಫೇಲು ಎಂಬ ಪದ್ದತಿ ಹೋಗಿ, ಬೇರೆ ಬೇರೆ ಮಟ್ಟದ ಸಾಧನೆ ಗುರುತಿಸುವಂತಾಗಬೇಕು ಶಾಲೆ ಮತ್ತು ಇತರ ಸಾಮಾಜಿಕ ಅಂಶಗಳ ನಡುವೆ ಸಹಭಾಗಿತ್ವ ಸಾಧಿಸುವುದು ಹಾಗೂ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಎಲ್ಲರ ಗುರಿಯಾಗಬೇಕು.

ಈ ಎಲ್ಲಾ ಮಾರ್ಗದರ್ಶಿ ತತ್ವಗಳು ಹಾಗೂ ಆಶಯಗಳ ಅನ್ವಯವೇ 9ನೆಯ ತರಗತಿ ಕನ್ನಡ ಪಠ್ಯಪುಸ್ತಕವನ್ನು ರಚಿಸಲಾಗಿದೆ. ಪುನರಾವರ್ತನೆ ಹಾಗೂ ಮನನ ಮೂಡಿಸುವ ದೃಷ್ಟಿಯಿಂದ ಪಠ್ಯಗಳ ಪರಿವಿಡಿಯಲ್ಲಿ ಭಿನ್ನತೆಯನ್ನು ಅನುಸರಿಸಲಾಗಿದೆ. ಇದರ ಉದ್ದೇಶ ಮಗುವನ್ನು ಪ್ರೌಢಹಂತಕ್ಕೆ ಸಿದ್ಧಗೊಳಿಸುವುದು. ಹಾಗೂ ಉನ್ನತ ಪ್ರೌಢ ಹಂತಕ್ಕೆ ಜ್ಞಾನವನ್ನು ಜೋಡಿಸಲು ಮಾನಸಿಕ ಹಾಗೂ ಬೌದ್ಧಿಕವಾಗಿ ಸಿದ್ಧಗೊಳಿಸುವುದು.

**2.4 9ನೆಯ ತರಗತಿ ಪ್ರ. ಭಾ. ಕನ್ನಡ ಪಠ್ಯಪುಸ್ತಕ ಹಾಗೂ ಎನ್.ಸಿ.ಎಫ್ 2005 ರ ಆಶಯಗಳು.**

9ನೆಯ ತರಗತಿ ಪ್ರಥಮ ಭಾಷಾ ಪಠ್ಯಪುಸ್ತಕವು ಸುಂದರವಾಗಿ ಮುದ್ರಣವಾಗಿದ್ದು ಮಕ್ಕಳಿಗೆ ಓದಲು ಅನುಕೂಲಕರವಾದ ದಪ್ಪಲಿಪಿಯನ್ನು ಒಳಗೊಂಡಿದೆ. ಪಠ್ಯಪುಸ್ತಕದ ಮುನ್ನುಡಿಯಲ್ಲಿಯೇ ಎನ್.ಸಿ.ಎಫ್–2005 ರ ರಾಷ್ಟ್ರೀಯ ಪಠ್ಯಕ್ರಮದ ವೈಶಿಷ್ಟ್ಯಗಳನ್ನು ಹೇಳಿದೆ. ಅವುಗಳೆಂದರೆ;

- ಭಾಷಾ ಕಲಿಕೆಯನ್ನು ಜೀವನದ ಅವಶ್ಯಕತೆಗಳೊಂದಿಗೆ ಜೋಡಿಸುವುದು.
- ಭಾಷಾ ಕಲಿಕೆಗೆ ಸಾಮಾಜಿಕ – ಸಾಂಸ್ಕೃತಿಕ ಪರಿಸರವನ್ನು ಬಳಸುವುದು.
- ಕಂಠಪಾಠ ವಿಧಾನದಿಂದ ರಚನಾತ್ಮಕ ಕಲಿಕೆಯನ್ನು ಮುಕ್ತಗೊಳಿಸುವುದು.
- ಬಹು ಭಾಷಾ ಕಲಿಕೆ ಮತ್ತು ಅನುವಾದಕ್ಕೆ ಅವಕಾಶಗಳಿರಬೇಕು.
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು.
- ಓದು ಬರಹ ಕೌಶಲಗಳಿಗೆ ವಿಶೇಷ ಒತ್ತು ನೀಡಬೇಕು.
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬೆಳೆಸುವುದು.
- ತ್ರಿಭಾಷಾ ಸೂತ್ರದ ಆಶಯಗಳನ್ನು ಪಾಲಿಸುವುದು.
- ಭಾರತದ ಪ್ರಜಾಸತ್ತಾತ್ಮಕ ನೀತಿ ಅನ್ವಯ ಆವಶ್ಯಕತೆಗೆ ತಕ್ಕಂತೆ ಸ್ಪಂದಿಸುವುದು.
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು.
- ವಿಷಯಗಳ ಮೇರೆಯನ್ನು ಮೀರಿ ಅವುಗಳ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸಿಕೊಳ್ಳುವುದು.
- ಶಾಲೆಯ ಹೊರಗಿನ ಬದುಕಿಗೆ ಜ್ಞಾನವನ್ನು ಸಂಯೋಜಿಸುವುದು.
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿಪಡಿಸುವುದು.

ಅಲ್ಲಿಯೇ ನೂತನ ಪಠ್ಯಪುಸ್ತಕದ ಬೋಧನೆಯ ಸಂದರ್ಭ ಅನುಸರಿಸಬೇಕಾದ ಮೂರು ವಿಧಾನಗಳನ್ನು ತಿಳಿಸಲು ಅದೆಂದರೆ:

1) ಅಂತರ್ಗತ ವಿಧಾನ (Integrated Approach)

2) ರಚನಾತ್ಮಕ ವಿಧಾನ (Constructive Approach)

3) ಸುರುಳಿಯಾಕಾರದ ವಿಧಾನ (Spiral Approach

**ಅಲ್ಲದೆ ಅಲ್ಲಿಯೇ ಪ್ರಕೃತ ಹೊಸ ಪಠ್ಯಪುಸ್ತಕದ ವಿಶೇಷತೆಯನ್ನು ತಿಳಿಸುತ್ತಾ :**

- ಹೊಸ ಪಠ್ಯ ಪುಸ್ತಕವು ವಿದ್ಯಾರ್ಥಿಗಳ ಚಿಂತನೆಯನ್ನು ಪ್ರಚೋದಿಸುವಂತಿದೆ.
- ಚಟುವಟಿಕೆ ಆಧಾರಿತವಾಗಿದೆ.
- ಜೀವನ ಮೌಲ್ಯಗಳನ್ನು ಪಠ್ಯಪುಸ್ತಕದಲ್ಲಿ ಅಂತರ್ಗತಗೊಳಿಸಿದೆ.
- ಈ ಪುಸ್ತಕವು ಕೇವಲ ಪರೀಕ್ಷಾದೃಷ್ಠಿಯಿಂದ ರಚಿತವಾಗಿಲ್ಲ.
- ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿದೆ.
- ಸ್ವಾಸ್ಥ್ಯ ಸಮಾಜದ ಉತ್ತಮ ಪ್ರಜೆಗಳಾಗಿ ರೂಪಿಸಲು ಪಠ್ಯಪುಸ್ತಕದಲ್ಲಿ ಪ್ರಯತ್ನಿಸಲಾಗಿದೆ.
- ಭಾಷಾ ಕಲಿಕೆಯ ಪ್ರಧಾನ ಗುರಿಗಳಾದ ಆಲಿಸುವುದು, ಮಾತನಾಡುವುದು, ಓದುವುದು, ಬರೆಯುವುದರ ಜತೆಗೆ ಆಕರಗಳಿಂದ ವಿಷಯ ಸಂಗ್ರಹಣೆ (Reference Skill).
- ಕೌಶಲಗಳ ಬೆಳವಣಿಗೆಗೆ ಆದ್ಯತೆ ನೀಡಿದೆ.
- ಕ್ರಿಯಾತ್ಮಕ ವ್ಯಾಕರಣ, ಸೌಂದರ್ಯ ಪಜ್ಞೆ ಹಾಗೂ ಪ್ರಶಂಸಾ ಮನೋಭಾವಗಳನ್ನು ವೃದ್ಧಿಸಲು ಸಹಕಾರಿಯಾಗಿದೆ.
- ಮೌಲ್ಯಗಳ ಸಂವರ್ಧನೆಗೆ ಅನುವು ಮಾಡಿಕೊಟ್ಟಿದೆ.
- ವಿದ್ಯಾರ್ಥಿಗಳ ಗುಂಪು ಚರ್ಚೆಗೆ ಅವಕಾಶ ಮಾಡಿಕೊಟ್ಟಿದೆ.
- ಅಭಿವ್ಯಕ್ತಿ ಹಾಗೂ ಸಂವಹನ ಕೌಶಲಗಳ ಸಂವರ್ಧನೆಯೇ ಕಲಿಕೆಯ ಗುರಿಯೆಂದು ಅಂತಹ ಚಟುವಟಿಕೆಗಳಿಗೆ ಪ್ರಾಮುಖ್ಯತೆ ನೀಡಲಾಗಿದೆ.
- ಮಕ್ಕಳಲ್ಲಿ ಕಲಿಯುವ ಕಲೆ (Learning to learn) ಹಾಗೂ ಜೀವನದಲ್ಲಿ ಅಳವಡಿಸಿಕೊಳ್ಳುವ ಶಕ್ತಿ (Learning to do) ಯನ್ನು ವೃದ್ಧಿ ಮಾಡುವಂತಿದೆ.
- ಸ್ಪರ್ಧಾತ್ಮಕ ಜಗತ್ತಿಗರ ತರಬೇತಿ ನೀಡುವಂತೆ. (ರಚನಾ ಸಮಿತಿಯ ಅಧ್ಯಕ್ಷರ ಸಮಾಲೋಚನೆಯ ಭಾಗ ನೋಡಿ)
- ಶೈಕ್ಷಣಿಕ ಸಂಶೋಧನೆ, ವೈಜ್ಞಾನಿಕ ಮನೋಭಾವ ವೃದ್ಧಿಗೆ ಪೂರಕ
- ಮಕ್ಕಳ ಪರಿಸರದ ಭಾಷೆಗೆ ಸನಿಹದಲ್ಲಿಯೇ ಭಾಷಾ ಮಾಧ್ಯಮ ಇದೆ.
- ಸಾಮಾಜಿಕ, ಸಾಂಸ್ಕೃತಿಕ, ಪ್ರಾದೇಶಿಕ ಮತ್ತು ಲಿಂಗಸಮಾನತೆಯನ್ನು ಕಾಯ್ದುಕೊಂಡಿದೆ.
- ಪಾಠಗಳು ಬೋಧನಾ ಕೌಶಲಕ್ಕು ಹಾಗೂ ಸ್ವಕಲಿಕೆಗೂ ಸೂಕ್ತ ಮತ್ತು ಪೂರಕವಾಗಿವೆ.

## 2.5 ಪಠ್ಯಪುಸ್ತಕದೊಳಗಿನ ಶೀರ್ಷಿಕೆಗಳ ಮಹತ್ವ:

'ಬೋಧಕರೊಂದಿಗೆ ಸಮಾಲೋಚನೆಯಲ್ಲಿ' ಪಠ್ಯಪುಸ್ತಕ ರಚನಾ ಸಮಿತಿಯ ಅಧ್ಯಕ್ಷರು ಪಠ್ಯಪುಸ್ತಕದ ಅಂತರಂಗದ ವಿವರಗಳ ಬಗ್ಗೆ ಆತ್ಮೀಯವಾಗಿ ಸಲ್ಲಾಪಿಸುತ್ತಾರೆ. ಅವುಗಳೆಂದರೆ:

- ಮುನ್ನುಡಿ
- ಹೊಸಪದಗಳು (ಅರ್ಥ್ಯೆಸಿ –ಓದಿ) ಲೇಖಕ/ ಲೇಖಕಿ ಪರಿಚಯ– ಭಾವ ಸಂಪನ್ಮೂಲತೆಯ ವಿವರ (ಆಕರ)
- ಬಹುವಿಧದ ಅಭ್ಯಾಸ ಪ್ರಶ್ನೆಗಳು ಭಾಷಾಭಾಸ
- ಪ್ರಯೋಗಶೀಲತೆ (ಪ್ರಾಯೋಗಿಕ ಭಾಷಾ ಅಭ್ಯಾಸ)
- ಸೃಜನಶೀಲತೆ
- ಸಂವಹನ ಮತ್ತು ಅಧ್ಯಯನ ಶೀಲತೆಗೆ – ಆದ್ಯತೆ ನೀಡಿದೆ.

ಗದ್ಯ ಪದ್ಯಪಾಠಗಳ ಜೋಡಣಾ ಅನುಕ್ರಮಣಿಕೆ ಕಲಿಕಾ ವೈಜ್ಞಾನಿಕತೆಯ ಹಿನ್ನೆಲೆಯಿಂದ ಕೂಡಿದೆ.

ಅಭ್ಯಾಸ ಭಾಗದಲ್ಲಿರುವ ಪ್ರಶ್ನೆಗಳು ಕಲಿಕಾರ್ಥಿಗಳು ಕಲಿಕೆಯಲ್ಲಿ ಸಾಮರ್ಥ್ಯ ಗಳಿಸುವುದಕ್ಕಾಗಿಯೇ ಹೊರತು ಪರೀಕ್ಷಾ ಪ್ರಶ್ನೆ ಪತ್ರಿಕೆಯ ತಯಾರಿಗಾಗಿ ಅಲ್ಲ.

ಇದೇ ಪ್ರಶ್ನೆಗಳನ್ನು ಪರೀಕ್ಷೆಯಲ್ಲಿ ಕೇಳಲೇಬೇಕೆಂಬ ನಿರ್ಬಂಧವೇನೂ ಇಲ್ಲ

ಹೀಗೆ ಪಠ್ಯ ಪುಸ್ತಕದ ಒಳಗಿನ ಅಂಶಗಳನ್ನು ಆರಂಭದಲ್ಲಿಯೇ ಹೇಳಿ ಪ್ರಕೃತ ಪಠ್ಯಪುಸ್ತಕವು ಹೇಗೆ ಎನ್.ಸಿ.ಎಫ್–2005 ರ ಆಶಯಗಳಿಗೆ ಹಾಗೂ ನಿರಂತರ ವ್ಯಾಪಕ ಮೌಲ್ಯಮಾಪನಕ್ಕೆ ಅನುಸಾರವಾಗಿದೆ ಎಂಬುದನ್ನು ಸ್ಥಿರೀಕರಿಸಿದ್ದಾರೆ.

## 2.6 ಪಠ್ಯ ಪುಸ್ತಕದಲ್ಲಿ NCF –2005 ರ ಆಶಯಗಳು ಅಂತರ್ಗತವಾಗಿರುವ ಬಗೆ

ಎನ್.ಸಿ.ಎಫ್ 2005ರ ಆಶಯದಂತೆ ಪ್ರಕೃತ 'ಸಿರಿಗನ್ನಡ–9' ಮಕ್ಕಳಿಗೆ ಕಲಿಕೆ ಹೊರೆಯನ್ನು ಕಡಿಮೆಗೊಳಿಸಿದೆ. ಗದ್ಯ/ಪದ್ಯ ಪಾಠಗಳನ್ನು ಕ್ರಮವಾಗಿ ಕಡಿಮೆಗೊಳಿಸಿ, ಭಾಷಾಂಶಗಳು, ವ್ಯಾಕರಣಾಂಶಗಳು, ಪದ ಸಂಪತ್ತಿನ ಬೆಳವಣಿಗೆ, ಸ್ಪಷ್ಟವಾಚನ, ಶುದ್ಧ ಬರೆಹ, ಭಾಷಾ ರಚನೆಗಳ ಪ್ರಾಯೋಗಿಕತೆಗೆ ಅಗತ್ಯ ಅವಕಾಶ ಮಾಡಿಕೊಡಲಾಗಿದೆ. ಗುಂಪು ಚರ್ಚೆ, ಪರಾಮರ್ಶನ, ಕೌಶಲ, ಯೋಜನೆ ತಯಾರಿ, ಚರ್ಚಾಸ್ಪರ್ದೆ, ಅಭಿನಯ ಇವುಗಳಿಗೆ ಅವಕಾಶ ನೀಡಲು ಈ ಸಮಯವನ್ನು ಸುಗಮಕಾರರು (Fesilitator) ಬಳಸಿಕೊಳ್ಳಬಹುದಾಗಿದೆ. ಕೇವಲ ಮಾಹಿತಿಗಳ ನೆನಪಿಗೆ ಬದಲಾಗಿ, ಭಾಷೆಯ ಪ್ರಾಯೋಗಿಕತೆ ಹಾಗೂ ಅನ್ವಯಕ್ಕೆ ಅವಕಾಶ ಮಾಡಿಕೊಡಲಾಗಿದೆ.

ಪಠ್ಯಭಾಗದಲ್ಲಿ ಹೀಗಾಗಿದ್ದರೆ ಹೇಗೆ? ಹೀಗಾಗದಿದ್ದರೆ ಆಗುವ ಪರಿಣಾಮಗಳೇನೆಂದು ಚಿಂತಿಸಲು ಅವಕಾಶ ಕಲ್ಪಿಸಲಾಗಿದೆ. ಉದಾಹರಣೆಗೆ ಪ್ರಾಮಾಣಿಕತೆ ಪಾಠದಲ್ಲಿ ರಹೀಮನು

ತನ್ನ ಪ್ರಾಮಾಣಿಕತೆಯಿಂದ ಶಿಕ್ಷೆ ಅನುಭವಿಸಬೇಕಾಯಿತು. ಆತ ಅಪ್ರಾಮಾಣಿಕನಾಗಿದ್ದರೆ ಆತ ಸುಖವಾಗಿರುತ್ತಿದ್ದನೆ ಎಂಬ ಬಗ್ಗೆ ಚಿಂತನೆಗೆ ಅವಕಾಶವಿದೆ. ಅಂತಿಮವಾಗಿ ಧನಾತ್ಮಕ ತೀರ್ಮಾನಕ್ಕೆ ಬರಲು ಅವಕಾಶ ಕಲ್ಪಿಸಲಾಗಿದೆ.

ಎನ್.ಸಿ.ಎಫ್–2005 ರ ಆಶಯದಂತೆ ಸಿರಿಕನ್ನಡ–9 ರಲ್ಲಿ ಪ್ರಾದೇಶಿಕ, ಸ್ಥಳೀಯ, ಬುಡಕಟ್ಟು ಭಾಷೆಗೆ ಆದ್ಯತೆ ನೀಡಲಾಗಿದೆ. 'ಸಮಾಗಮ' ಸಂಸ್ಕೃತಿಕ ಅನುವಾದಿತ ಕನ್ನಡ ನಾಟಕದಲ್ಲಿ ಹೊಸಗನ್ನಡದ ಆಡುಮಾತನ್ನು  ಬಳಸಲಾಗಿದೆ. 'ಇತಿಹಾಸದ ಚಕ್ಕಡಿ' ಆತ್ಮಕಥೆಯ ಭಾಗದಲ್ಲಿ ಸ್ಥಳೀಯ ಪ್ರಾದೇಶಿಕ ಭಾಷೆಯ ಬಳಕೆಯನ್ನು ಕಾಣಬಹುದಾಗಿದೆ. ಜನಪದ ಕಲೆಗಳ ವೈಭವ 'ಗದ್ಯಪಾಠದಲ್ಲಿ ಕಲೆ, ಸಂಸ್ಕೃತಿ ಮಾತ್ರವಲ್ಲದೆ ಸ್ಥಳೀಯ ಆಡುಮಾತಿನ ಜಾನಪದ ಶೈಲಿಯ ಭಾಷಾ ಬಳಕೆಯನ್ನು ಕಾಣಬಹುದಾಗಿದೆ. 'ಸಾರ್ಥಕ ರಕ್ಷಣೆ' ಪದ್ಯಭಾಗದಲ್ಲಿ ಜನಪದ ಬಳಕೆಯ ವಸ್ತುಗಳ ಹೆಸರು ಬಳಕೆಗೆ ಆದ್ಯತೆ ನೀಡಿರುವುದನ್ನು ಕಾಣಬಹುದಾಗಿದೆ.

ಪ್ರಕೃತ ಪಠ್ಯಪುಸ್ತಕವು ವಿದ್ಯಾರ್ಥಿಗಳ ಚಿಂತನೆಯನ್ನು ಅರಳಿಸಲು ಅವಕಾಶ ಕಲ್ಪಿಸಿದೆ. ಪ್ರತಿ ಗದ್ಯ–ಪದ್ಯ  ಪಾಠಗಳಲ್ಲಿಯೂ ಈ ಅಂಶವನ್ನು ವಿಭಿನ್ನವಾಗಿ ಗುರುತಿಸಲು ಅವಕಾಶವಿದೆ. ಅಲ್ಲದೆ ಪಠ್ಯಪೋಷಕ ಅಧ್ಯಯನವು ಮಕ್ಕಳ ಸ್ವಯಂ ಕಲಿಕೆಯ ಪಠ್ಯಭಾಗವಾಗಿದ್ದು, ವಾಚನ ಗ್ರಹಿಕಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಮತ್ತು ಅಭಿವ್ಯಕ್ತಿಯನ್ನು ಬೆಳೆಸಿಕೊಳ್ಳಲು ಅವಕಾಶಕಲ್ಪಿಸಿದೆ. ಮುಂದಿನ ಪಟ್ಟಿಯಲ್ಲಿ (Table) ಎನ್.ಸಿ.ಎಫ್ – 2005 ರ ಪ್ರಧಾನ ತತ್ವಗಳು ಪಠ್ಯಪುಸ್ತಕದಲ್ಲಿ ಬಳಕೆಯಾಗಿರುವ  ಬಗ್ಗೆಯನ್ನು ತಿಳಿಯಬಹುದಾಗಿದೆ.

# ಪ್ರಥಮ ಭಾಷೆ ಕನ್ನಡ ಬೋಧನೆಯ ಗುರಿಗಳು

* ಭಾಷಾ ಬೋಧನಾ ಕ್ರಮವು ಭಾಷಾ ಕೌಶಲಗಳನ್ನು ಕಲಿಸುವ ಸೀಮಿತ ಉದ್ದೇಶ ಹಾಗೂ ಭಾಷಾ ಪಠ್ಯ ಪುಸ್ತಕಗಳನ್ನು ಮೀರಿ ಅಂತರಶಾಸ್ತ್ರೀಯ ರೀತಿಯಲ್ಲಿ ಸಾಗಬೇಕು.
* ಭಾಷಾ ಬೋಧನೆಯು ಬಹುಮುಖಿ ಆಯಾಮಗಳೊಂದಿಗೆ ನಡೆಯಬೇಕು .... ಸಂವಹನ, ಅಭ್ಯಾಸಗಳು, ಸಾಹಿತ್ಯ, ಸಾಮಾಜಿಕ ಅಂತರಸಂಪರ್ಕ, ಸಾಂಸ್ಕೃತಿಕ ದ್ರವ್ಯಗಳು, ಮಾನಸಿಕ, ಭಾವನಾತ್ಮಕ ಹಾಗೂ ಮಾಧ್ಯಮಗಳ ಸಂಪರ್ಕದಲ್ಲಿ ಭಾಷಾಬೋಧನೆ ಜೀವ ಪಡೆಯಬೇಕು.
* ಔಪಚಾರಿಕ, ಅನೌಪಕಚಾರಿಕ, ಮೌಖಿಕ, ಬರಹ, ಸಂವಹನ, ಅನುಕರಣೆ ಹಾಗೂ ಅಭ್ಯಾಸಗಳ ಮೂಲಕ ಭಾಷಾಬೋಧನೆ ಸಾಗಬೇಕು.
* ಭಾಷೆಯ ಬಗೆಗಿನ ಭೌಗೋಳಿಕ, ಸಾಮಾಜಿಕ, ಸಾಂಸ್ಕೃತಿಕ, ವೈಜ್ಞಾನಿಕ ತಿಳುವಳಿಕೆ ಶಿಕ್ಷಕರಿಗೆ ಇರಬೇಕು.
* ಭಾಷಾ ಬೋಧನೆಯು ಕೇವಲ ಭೌದ್ಧಿಕ ಕಸರತ್ತಾಗದೆ, ಅಕಾಡೆಮಿಕ್ ಶಿಸ್ತಿನ ಜೊತೆಗೆ ಸೃಜನಶೀಲ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ವಿಕಾಸದ ಕಾರ್ಯವಾಗಬೇಕು.
* ಭಾಷಾ ಬೋಧನೆಯು ವಿದ್ಯಾರ್ಥಿಗಳಲ್ಲಿ ಜ್ಞಾನಾರ್ಜನೆಯ ಜೊತೆಗೆ ಸೃಜನಶೀಲ ಆಲೋಚನೆ ಮತ್ತು ಅಭಿವ್ಯಕ್ತಿ ಅಧ್ಯಯನಶೀಲತೆ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಅಭಿರುಚಿ, ರಸಭಾವಗಳ ಪೋಷಣೆ, ಸಂವೇದನೆ ಹಾಗೂ ಮಾನವೀಯ ಮೌಲ್ಯಗಳನ್ನು ಬೆಳೆಸಲು ಸೂಕ್ತ ಅವಕಾಶಗಳನ್ನು ಒದಗಿಸಬೇಕು.
* ಆಲಿಸುವಿಕೆ, ಓದು, ಬರಹ ಮತ್ತು ಚಿಂತನೆಯಲ್ಲಿ ಪರಿಣಿತಿ ಹಾಗೂ ಸೃಜನಶೀಲತೆಯನ್ನು ಬೆಳೆಸಬೇಕು. ಜೊತೆಗೆ ತನ್ನ ಭಾಷೆ, ಸಾಹಿತ್ಯ ಸಂಸ್ಕೃತಿಯ ಬಗ್ಗೆ ಅಭಿಮಾನ-ಗೌರವಗಳನ್ನು ಬೆಳೆಸಬೇಕು.

**ಮಾತೃಭಾಷಾ ಬೋಧನೆಯ ಸಾಮಾನ್ಯ ಉದ್ದೇಶಗಳು :**

1. ಮಕ್ಕಳಲ್ಲಿ ಆಲಿಸುವ, ಗ್ರಹಿಸುವ ಮತ್ತು ಅಭಿವ್ಯಕ್ತಿಸುವ ಹಾಗೂ ಓದುವ ಸಾಮರ್ಥ್ಯವನ್ನು ಅಭಿವೃದ್ಧಿಗೊಳಿಸುವುದು.
2. ಮೌಖಿಕ ಮತ್ತು ಲಿಖಿತ ಅಭಿವ್ಯಕ್ತಿಯ ಸಾಮರ್ಥ್ಯವನ್ನು ಬೆಳೆಸುವುದು.
3. ಜ್ಞಾನಾರ್ಜನೆಗಾಗಿ, ಸಾಹಿತ್ಯಾಭಿರುಚಿಗಾಗಿ, ಚಿಂತನೆಗಾಗಿ ಮತ್ತು ಆನಂದಕ್ಕಾಗಿ ಮಕ್ಕಳು ಸ್ವತಂತ್ರವಾಗಿ ಓದಲು ಸಮರ್ಥರಾಗುವಂತೆ ಮಾಡುವುದು.

4. ವಾಕ್ಯ ಬಂಧಗಳನ್ನು ಅರ್ಥಮಾಡಿಕೊಂಡು, ಪದಸಂಪತ್ತನ್ನು ವೃದ್ಧಿಗೊಳಿಸಿಕೊಂಡು ಮತ್ತು ಉಚ್ಚಾರಣೆಯನ್ನು ಸ್ಪಷ್ಟಗೊಳಿಸಿಕೊಂಡು ಭಾಷೆಯನ್ನು ದೋಷರಹಿತವಾಗಿ, ನಿಖರವಾಗಿ ಮತ್ತು ಪರಿಣಾಮಕಾರಿಯಗಿ ಬಳಸುವ ಸಾಮರ್ಥ್ಯವನ್ನು ಹೆಚ್ಚಿಸುವುದು.

5. ಸೌಂದರ್ಯಪ್ರಜ್ಞೆ, ಸ್ವಂತಿಕೆ, ಕಲ್ಪನೆ ಮತ್ತು ಸೃಜನಾತ್ಮಕ ಶಕ್ತಿಯನ್ನು ಬೆಳೆಸುವುದು.

6. ನಾಡು-ನುಡಿ, ಸಾಹಿತ್ಯ ಮತ್ತು ಸಂಸ್ಕೃತಿಯ ಬಗೆಗೆ ಆತ್ಮೀಯತೆ ಅಭಿಮಾನಗಳನ್ನು ಅಭಿವೃದ್ಧಿಪಡಿಸುವುದು.

7. ಸರ್ವತೋಮುಖ ವ್ಯಕ್ತಿತ್ವ ವಿಕಾಸಕ್ಕೆ ಸಾಧಕವಾಗುವಂತೆ ಜೀವನ ಮೌಲ್ಯಗಳನ್ನು, ಕರ್ತವ್ಯ ಪ್ರಜ್ಞೆಯನ್ನು ಮತ್ತು ರಸಭಾವಗಳ ಉದಾತ್ತತೆಯನ್ನು ಉಂಟುಮಾಡುವುದು.

8. ಮಾತೃಭಾಷೆಯಲ್ಲಿನ ಪ್ರಮುಖ ಕವಿಗಳ ಹಾಗೂ ಗ್ರಂಥಕರ್ತರ ಬಗ್ಗೆ ವಿಶಿಷ್ಟ ರೀತಿಯಲ್ಲಿ ಪರಿಚಯವಾಗುವಂತೆ ಸಾಹಿತ್ಯದ ಮುಖ್ಯ ಪ್ರಕಾರಗಳನ್ನು, ವ್ಯಾಕರಣವನ್ನು ಪರಿಚಯ ಮಾಡಿಕೊಡುವುದು.

9. ಸಮಾನತೆ, ರಾಷ್ಟ್ರೀಯ ಪ್ರಜ್ಞೆ, ಜಾತ್ಯತೀತತೆ, ಜೀವನಮೌಲ್ಯಗಳು ಇವುಗಳನ್ನು ಮೈಗೂಡಿಸಿಕೊಳ್ಳುವ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸುವುದು. ಭಾರತದ ಸಾಂಸ್ಕೃತಿಕ ಮತ್ತು ಪ್ರಾಕೃತಿಕ ಪರಂಪರೆಯ ಬಗ್ಗೆ ಅರಿವು ಮತ್ತು ಬಲವನ್ನು ಮೂಡಿಸುವುದು.

10. ಪರಿಸರ ಸಂರಕ್ಷಣೆ, ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ, ವೈಜ್ಞಾನಿಕ ಮನೋಭಾವ ಇವುಗಳನ್ನು ಸಾಹಿತ್ಯದ ಮೂಲಕ ಮಕ್ಕಳಿಗೆ ಪರಿಚಯಿಸುವುದು.

11. ಗದ್ಯ ಮತ್ತು ಪದ್ಯಗಳಲ್ಲಿ ಬರುವ ಸಾಮಾಜಿಕ, ಆರ್ಥಿಕ, ನೈತಿಕ, ಸಾಂಸ್ಕೃತಿಕ ಮೌಲ್ಯಗಳನ್ನು ಪರಿಚಯಿಸುವುದು. ವಿದ್ಯಾರ್ಥಿಗಳು, ಪುಸ್ತಕ ಸಂಸ್ಕೃತಿ ಹಾಗೂ ಅಧ್ಯಯನಶೀಲ ಕೌಶಲ ಮತ್ತು ಅಭಿರುಚಿ ಬೆಳೆಸುವುದು.

**ಕನ್ನಡ ದ್ವಿತೀಯ ಭಾಷಾ ಬೋಧನೆಯ ಉದ್ದೇಶಗಳು :**

1. ಸಾಮಾಜಿಕ, ಆರ್ಥಿಕ, ವೈಜ್ಞಾನಿಕ, ಸಾಂಸ್ಕೃತಿಕ, ಪರಿಸರಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಯು ಹಿಂದಿನ ತರಗತಿಯಲ್ಲಿ ಗಳಿಸಿದ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುವುದು.

2. ಕನ್ನಡ ಭಾಷೆಯ ಹಿರಿಮೆಯನ್ನು ಅರಿತುಕೊಂಡು ಪ್ರಶಂಸಿಸುವುದು.

3. ಕನ್ನಡವನ್ನು ಅಭ್ಯಸಿಸುವುದರ ಮೂಲಕ ಸಾಹಿತ್ಯಾಭಿರುಚಿಯನ್ನು ಬೆಳೆಸಿಕೊಳ್ಳುವುದು.

4. ಕನ್ನಡ ಭಾಷೆಯಲ್ಲಿ ಸರಳವಾಗಿ ರಚಿಸಿದ ಪುಸ್ತಕಗಳನ್ನು ಓದಿ, ಅದರ ಸಾರಾಂಶಗಳನ್ನು ಅಭಿವ್ಯಕ್ತಿಪಡಿಸುವುದು.

5. ದೈನಂದಿನ ಜೀವನದಲ್ಲಿ ಕನ್ನಡವನ್ನು ಕ್ರಮಬದ್ಧವಾಗಿಯೂ, ಸ್ಪಷ್ಟವಾಗಿಯೂ ಉಪಯೋಗಿಸುವ ಕೌಶಲ್ಯವನ್ನು ಹೆಚ್ಚಿಸಿಕೊಳ್ಳುವುದು.
6. ಕನ್ನಡ ನಾಡಿನ ಹಿರಿಮೆಯನ್ನು ಅರಿತು ಅವುಗಳನ್ನು ಮೆಚ್ಚಿಕೊಳ್ಳುವುದು.
7. ಕನ್ನಡವನ್ನು ದ್ವಿತೀಯ ಭಾಷೆಯಾಗಿ ಕಲಿಯುವ ಮಕ್ಕಳಲ್ಲಿ ಸ್ವಯಮಾಭಿವ್ಯಕ್ತಿ ಸಾಮರ್ಥ್ಯ ಬೆಳೆಯಬೇಕು. ಇದರಿಂದ ಅವರು ಸರಿಯಾಗಿ ಬದ್ಧವಾಗಿ, ನಿರರ್ಗಳವಾಗಿ ಮತ್ತು ಆತ್ಮವಿಶ್ವಾಸದೊಡನೆ ಮಾತನಾಡಬೇಕು.
8. ತಪ್ಪಿಲ್ಲದ ಕ್ರಮಬದ್ಧವಾದ ಅಂದವಾದ ಕನ್ನಡದ ಬರವಣಿಗೆಯನ್ನು ಬೆಳೆಸಿಕೊಳ್ಳುವುದು.
9. ಕನ್ನಡ ಭಾಷೆಯ ವ್ಯಾಕರಣಕ್ಕೆ ಸಂಬಂಧಪಟ್ಟ ಮುಖ್ಯಾಂಶಗಳನ್ನು ಅರಿತುಕೊಂಡು ಉಪಯೋಗಿಸುವುದು.
10. ಕನ್ನಡದ ನುಡಿಗಟ್ಟುಗಳು, ಗಾದೆಗಳು, ಪದಗಳು ಇವುಗಳನ್ನು ಸಂದರ್ಭಾನುಸಾರ ಅರ್ಥವತ್ತಾಗಿ ಪ್ರಯೋಗಮಾಡುವ ಸಾಮರ್ಥ್ಯ ಹೊಂದುವುದು.
11. ಸಾಹಿತ್ಯದ ವಿವಿಧ ಪ್ರಕಾರಗಳ ರಸಸ್ವಾದನೆ ಮಾಡಿ ಅದರ ಮೂಲಕ ಸಮಾಜದಲ್ಲಿ, ಪರಿಸರದಲ್ಲಿ ಒಳ್ಳೆಯದನ್ನು, ಸುಂದರವಾದುದನ್ನು ನೋಡಿ ಮೆಚ್ಚಿಕೊಳ್ಳುವ ಮನೋಭಾವವನ್ನು ಬೆಳೆಸಿಕೊಳ್ಳುವುದು.

## ತೃತೀಯ ಭಾಷೆಯಾಗಿ ಕನ್ನಡ ಬೋಧನೆಯ ಆಶಯಗಳು :

ಕನ್ನಡ ಮಾತೃಭಾಷೆಯಲ್ಲದವರು ಕನ್ನಡ ಭಾಷೆಯನ್ನು ಕಲಿಯುವುದು ಅವರ ಹಾಗೂ ರಾಜ್ಯದ ಹಿತದೃಷ್ಟಿಯಿಂದ ಅಪೇಕ್ಷಿತವಾದದ್ದಾಗಿದೆ. ಇಂಥವರು ಕನ್ನಡವನ್ನು ಪ್ರಥಮ ಭಾಷೆಯನ್ನಾಗಿ ಓದಿದರೆ ಬಹಳ ಸಂತೋಷ. ಕಾರಣಾಂತರದಿಂದ ಹಾಗೆ ಮಾಡದಿದ್ದಲ್ಲಿ ಕನ್ನಡವನ್ನು ತೃತೀಯ ಭಾಷೆಯನ್ನಾಗಿಯಾದರೂ ಅಭ್ಯಸಿಸಬೇಕು. ಕನ್ನಡದಲ್ಲಿ ಸರಳವಾಗಿ, ಸಂಕೋಚವಿಲ್ಲದೆ ವ್ಯವಹರಿಸಲು ಅವರಿಗೆ ಶಕ್ತರಾಗುವಂತೆ ಮಾಡಲು ಅಗತ್ಯ ಮಾತು, ಓದುಬರಹಗಳ ಕೌಶಲಗಳನ್ನು ಬೆಳೆಸುವ ಆಶಯ ಹೊಂದಲಾಗಿದೆ.

(ಆಧಾರ : ಪ್ರೌಢಶಾಲಾ ಪರಿಷ್ಕೃತ ಪಠ್ಯವಸ್ತು 1999–2000, ಪಠ್ಯಪುಸ್ತಕ ನಿರ್ದೇಶನಾಲಯ, ಡಿ.ಎಸ್.ಇ.ಆರ್.ಟಿ.)

## ಭಾಷಾ ಬೋಧನೆಯ ನಿರ್ದಿಷ್ಟ ಉದ್ದೇಶಗಳು :

ಸಾಮಾನ್ಯ ಉದ್ದೇಶಗಳು/ಗುರಿಗಳಿಗೆ ಪೂರಕವಾಗಿ ನಿರ್ದಿಷ್ಟ ಉದ್ದೇಶಗಳನ್ನು ರೂಪಿಸಿಕೊಳ್ಳಲಾಗಿರುತ್ತದೆ. ಭಾಷಾ ಬೋಧನೆಯಲ್ಲಿ ನಿರ್ದಿಷ್ಟ ಪಠ್ಯಾಂಶ ಬೋಧನೆ, ಭಾಷಾಭ್ಯಾಸಗಳು ಅಥವಾ ಚಟುವಟಿಕೆಗಳ ಮೂಲಕ ಕಡಿಮೆ ಅವಧಿಯಲ್ಲಿ ಸಾಧಿಸಲು ಸಾಧ್ಯವಾಗುವಂತೆ ಈ ಉದ್ದೇಶಗಳು ಇರುತ್ತವೆ. ಮಾಹಿತಿಯ ಪರಿಚಯ ಮತ್ತು ತಿಳಿಯುವಿಕೆ, ವಿಷಯಾಂಶದ ಅರ್ಥಪರಿಚಯ ಹಾಗೂ ಗ್ರಹಿಕೆ, ಸ್ವತಂತ್ರ ಚಿಂತನೆ ಮತ್ತು ಸ್ವಯಂ ಅಭಿವ್ಯಕ್ತಿ,

ಭಾಷೆಯ ಸೃಜನಶೀಲ ಪ್ರಯೋಗ, ಗುಣಗ್ರಹಣ, ಸಂವೇದನೆ, ಸೌಂದರ್ಯಾಸ್ವಾದನೆ ಮುಂತಾದ ರೀತಿಯ ಕಲಿಕೆ, ವರ್ತನೆ, ಕೌಶಲ ಮತ್ತು ಮನೋಭಾವಗಳ ಕಲಿಕೆ ಮತ್ತು ಪ್ರಯೋಗ ಅನ್ವಯಕ್ಕೆ ನೆರವಾಗುವಂತಹ ನಿರ್ದಿಷ್ಟ ಉದ್ದೇಶಗಳನ್ನು ಭಾಷಾ ಬೋಧನೆಯಲ್ಲಿ ರೂಪಿಸಿಕೊಳ್ಳಲಾಗಿದೆ.

1. **ಜ್ಞಾನ (knowledge) :** ಒಂದು ವಿಷಯಾಂಶ, ಪಠ್ಯ, ಮಾಹಿತಿಯ ಬಗೆಗಿನ ಸಾಮಾನ್ಯ ತಿಳುವಳಿಕೆ, ಮಾಹಿತಿ ಪರಿಚಯ, ಗುರ್ತಿಸುವಿಕೆ, ಅರ್ಥತಿಳಿಯುವಿಕೆ, ಪ್ರಾಥಮಿಕ ಅಂಶಗಳ ಬಗೆಗಿನ ತಿಳುವಳಿಕೆ, ಪದ ಮತ್ತು ವಾಕ್ಯಗಳ ಅರ್ಥತಿಳಿಯುವಿಕೆ; ಆಲಿಸಿ, ಓದಿ, ಅಥವಾ ವೀಕ್ಷಣೆಯ ಮೂಲಕ ಒಂದು ಮಾಹಿತಿಯ ಬಗೆಗೆ ಸಾಮಾನ್ಯ ತಿಳುವಳಿಕೆಯನ್ನು ಹೊಂದುವುದು ಹಾಗೂ ನೆನಪಿನಲ್ಲಿಟ್ಟುಕೊಳ್ಳುವುದನ್ನು ಜ್ಞಾನ ಎನ್ನಬಹುದು. ಜ್ಞಾನ ವಲಯದ, ಸಾಮಾನ್ಯ ಮಟ್ಟದ ಕಲಿಕೆ ಅಥವಾ ಪರಿಚಯವೇ ಜ್ಞಾನ. ಪರಿಚಯದ ಮೂಲಕ, ಸ್ಮರಣೆ ಹಾಗೂ ಗುರ್ತಿಸುವಿಕೆಯ ಮೂಲಕ ಈ ಉದ್ದೇಶ ಸಾಧನೆಯಾಗುತ್ತದೆ ಹಾಗೂ ಜ್ಞಾನ ವಲಯದಲ್ಲಿ ಉಳಿಯುತ್ತದೆ.

2. **ಅರ್ಥಗ್ರಹಿಕೆ (comprehension) :** ಒಂದು ವಿಷಯಾಂಶ, ಭಾಷಾಂಶ, ಪರಿಕಲ್ಪನೆಯನ್ನು ಗ್ರಹಿಸಿ ಅರ್ಥಮಾಡಿಕೊಳ್ಳುವುದೇ ಅರ್ಥಗ್ರಹಿಕೆ. ವಿಷಯಾಂಶದ ಬಗೆಗೆ ಪೂರ್ಣವಾಗಿ ಗ್ರಹಿಸುವುದು, ಅರ್ಥಮಾಡಿಕೊಳ್ಳುವುದು, ಧಾರಣೆ ಮಾಡಿಕೊಳ್ಳುವುದು, ವಿಷಯವೊಂದನ್ನು ಸಮರ್ಥವಾಗಿ/ಯಥಾವತ್ತಾಗಿ ಅರ್ಥಮಾಡಿಕೊಳ್ಳುವ ಮಾನಸಿಕ ಕೌಶಲ/ಸಾಮರ್ಥ್ಯ, ವಿಷಯಾಂಶ, ಪರಿಕಲ್ಪನೆ ಅಥವಾ ಮಾಹಿತಿಯನ್ನು ವ್ಯಾಖ್ಯಾನಿಸಿಕೊಳ್ಳುವುದು, ನಿರೂಪಿಸಿ ಕೊಳ್ಳುವುದು, ಪೂರ್ಣ ಅರ್ಥಗ್ರಹಿಸಿ ಧಾರಣೆ ಮಾಡಿಕೊಳ್ಳುವುದು ಅರ್ಥಗ್ರಹಿಕೆಯಾಗುತ್ತದೆ. ಕೇಳುವ, ಓದುವ ಅಥವಾ ವೀಕ್ಷಿಸುವ ಅಂಶಗಳನ್ನು ಗ್ರಹಿಸಿ ಮನನ ಮಾಡಿಕೊಳ್ಳುವ ಸಾಮರ್ಥ್ಯಗಳನ್ನು ಅರ್ಥಗ್ರಹಿಕೆ ಒಳಗೊಂಡಿರುತ್ತದೆ.

3. **ಅಭಿವ್ಯಕ್ತಿ (Expression) :** ಒಂದು ವಿಷಯಾಂಶ, ಆಲೋಚನೆ, ಅನುಭವ, ಮಾಹಿತಿ, ಅನಿಸಿಕೆ, ಅಭಿಪ್ರಾಯ ಮುಂತಾದವುಗಳನ್ನು ಅರ್ಥಬದ್ಧ, ಸುಸಂಬದ್ಧ ಪದ, ವಾಕ್ಯಗಳ ಮೂಲಕ ಮಾತಿನಲ್ಲಾಗಲಿ, ಬರಹದಲ್ಲಾಗಲಿ, ಚಿತ್ರ, ಅಭಿನಯ, ಸಂಕೇತಗಳ ಮೂಲಕವಾಗಲಿ ಪ್ರಕಟಪಡಿಸುವ ಕ್ರಿಯೆಯೇ ಅಭಿವ್ಯಕ್ತಿ. ಅಭಿವ್ಯಕ್ತಿಯು ಕ್ರಮಬದ್ಧವಾದ, ಅರ್ಥ ಮತ್ತು ಭಾವಪೂರ್ಣವಾದ ಮಾತು, ವಾಕ್ಸರಣಿ, ವಿವರಣೆ, ನಿರೂಪಣೆ ಆಗಿರುತ್ತದೆ. ಒಂದು ವಿಷಯಾಂಶ, ಅಭಿಪ್ರಾಯ, ಅನುಭವ, ಮಾಹಿತಿಗೆ ಭಾಷೆಯನ್ನು ಅರ್ಥಬದ್ಧವಾಗಿ ತೊಡಿಸಿ ವ್ಯಕ್ತಗೊಳಿಸುವ ಕೌಶಲವೇ ಅಭಿವ್ಯಕ್ತಿ ಸುಸಂಬದ್ಧ ಮತ್ತು ಅರ್ಥಬದ್ಧವಾಗಿ ಮಾತನಾಡುವುದು, ವಿವರಿಸುವುದು, ಸಂಭಾಷಣೆ, ನಿರೂಪಣೆ ಮಾಡುವುದು; ಕಾಗುಣಿತಬದ್ಧ ಬರಹ, ವಿಸ್ತರಿಸುವುದು, ಸಂಕ್ಷೇಪಿಸುವುದು, ಪ್ರಬಂಧ, ಕತೆ, ಕವನ ರಚನೆ ಇತ್ಯಾದಿ ಸಾಮರ್ಥ್ಯಗಳು ಅಭಿವ್ಯಕ್ತಿಯನ್ನು ಪ್ರತಿಬಿಂಬಿಸುತ್ತವೆ.

4. **ರಸಸ್ವಾದನೆ / ಗುಣಗ್ರಹಣ (Appreciation) :** ಒಂದು ವಿಷಯ, ಭಾವನೆ, ಸಾಹಿತ್ಯದ ಪಠ್ಯಗಳನ್ನು ಓದುವಾಗ ಅಥವಾ ಕೇಳುವಾಗ ಅವುಗಳ ಅರ್ಥವನ್ನಷ್ಟೆ ಗ್ರಹಿಸದೆ ಅವುಗಳನ್ನು ಪೂರ್ಣದೃಷ್ಟಿಯಿಂದ ಗ್ರಹಿಸಿ, ಅದರಲ್ಲಿರುವ ಗುಣ, ಭಾವನೆ, ಸ್ವಭಾವ, ರಸ, ಸೌಂದರ್ಯಗಳನ್ನು ರಸಸ್ಪುರಣದೊಂದಿಗೆ ಹೃದಯಂಗಮವಾಗಿ ಆಸ್ವಾದಿಸುವುದು ಮತ್ತು ಭಾವಪೂರ್ಣವಾಗಿ ಪ್ರತಿಕ್ರಿಯಿಸುವುದೇ ರಸಸ್ವಾದನೆ. ರಸಸ್ವಾದನೆಯಲ್ಲಿ ವಿವೇಕ, ಗುಣಗ್ರಹಣ, ಗುಣವಿವೇಚನೆ, ಅದರ ಮೌಲ್ಯವನ್ನು ಅರ್ಥಮಾಡಿಕೊಳ್ಳುವುದು ಮತ್ತು ಗೌರವಿಸುವುದು, ಸಂತಸ ಪಡುವುದು, ಸಂವೇದನೆಗೊಳ್ಳುವುದು, ಉತ್ತಮ ಗುಣಾಂಶಗಳನ್ನು ಎತ್ತಿ ಹಿಡಿಯುವುದು, ಮೌಲ್ಯವನ್ನು ನಿರ್ಧರಿಸಿ ಅಳವಡಿಸಿಕೊಳ್ಳುವಂತಹ ಮಾನಸಿಕ ಮತ್ತು ಭಾವಾನಾತ್ಮಕ ಕಲಿಕೆ ಮೂಡಿಬರುತ್ತದೆ. ವಿಷಯಾಂಶಗಳಂತೆ ಭಾಷೆಯ ರಚನೆ, ಸುಸಂಬದ್ಧತೆ, ಛಂದಸ್ಸು, ಅಲಂಕಾರ, ಪದಗಳ ಚಮತ್ಕಾರ, ನುಡಿಗಟ್ಟುಗಳ ಅಂತರಾರ್ಥದ ಆಸ್ವಾದನೆ, ಸಂದೇಶಗಳನ್ನು ಗ್ರಹಿಸುವುದು, ಸೃಜನಶೀಲ ಚಿಂತನೆ, ಭಾವಪೂರ್ಣ ಗ್ರಹಿಕೆ ಮತ್ತು ಪ್ರತಿಕ್ರಿಯೆಗಳು ಹೊರಹೊಮ್ಮುತ್ತವೆ. ಆಲೋಚನೆಗಳನ್ನು ಭಾವಪೂರ್ಣವಾಗಿ ಮತ್ತು ಕಲಾತ್ಮಕವಾಗಿ ಅಭಿವ್ಯಕ್ತಿಸುವುದು, ಸಾಹಿತ್ಯ ಅಭಿರುಚಿ, ಸೃಜನಶೀಲ ಬರಹಗಳು, ರಸಸ್ವಾದನೆಯಲ್ಲಿ ಆಸ್ವಾದನೆಯಾಗುತ್ತವೆ ಹಾಗೂ ಅಭಿವ್ಯಕ್ತಗೊಳ್ಳುತ್ತವೆ.

ಈ ನಿರ್ದಿಷ್ಟ ಉದ್ದೇಶಗಳು ಒಂದೊಂದೂ ಪ್ರತ್ಯೇಕ (isolate)ವಾಗಿರದೆ ಸಮಗ್ರತೆಯ (Intergrate) ಸ್ವರೂಪವನ್ನೊಂದಿರುತ್ತವೆ. ಭಾಷಾ ಪಠ್ಯಗಳ ಬೋಧನೆ ಮತ್ತು ಮೌಲ್ಯಮಾಪನದಲ್ಲಿ ಈ ನಿರ್ದಿಷ್ಟ ಉದ್ದೇಶಗಳಿಗೆ ನಿರ್ದಿಷ್ಟ ತೂಕಗಳನ್ನು ನಿರ್ಧರಿಸಿಕೊಳ್ಳಬಹುದು. ಉದ್ದೇಶಗಳ ಈ ರೀತಿಯ ತೂಕ ಪ್ರಮಾಣವು ಕಠಿಣ (rigid) ರೀತಿಯಲ್ಲಿರದೆ ಆಯಾ ಪಠ್ಯಾಂಶಗಳ ಸಾಮಾನ್ಯ ಉದ್ದೇಶಗಳು, ಪಠ್ಯಾಂಶಗಳ ಸ್ವರೂಪ, ವಿದ್ಯಾರ್ಥಿಗಳ ಸಾಮಾಜಿಕ-ಸಾಂಸ್ಕೃತಿಕ ಹಿನ್ನಲೆಯನ್ನು ಆಧರಿಸಿ ಅಗತ್ಯ ಪ್ರಮಾಣದಲ್ಲಿ ನಮನೀಯ (flrxible) ವಾಗಿ ರೂಪಿಸಿಕೊಳ್ಳುವುದು ಅಪೇಕ್ಷಣೀಯ.

## ಪ್ರಥಮ ಭಾಷಾ ಪಠ್ಯ ಪುಸ್ತಕದ ಪುನಾರಚನೆಯ ಆಶಯಗಳ ಹಿನ್ನೆಲೆಯಲ್ಲಿ ಸಿರಿಕನ್ನಡ – 9 ಪಠ್ಯ ಪುಸ್ತಕದ ವಿಶ್ಲೇಷಣೆ :

* ಸಿರಿಕನ್ನಡ –9 ಪಠ್ಯಪುಸ್ತಕವನ್ನು ಭಾಷಾ ಸಾಮರ್ಥ್ಯವನ್ನು ವೃದ್ಧಿಸುವ ಆಶಯದೊಂದಿಗೆ ರೂಪಿಸಲಾಗಿದೆ.
* ಪ್ರಸ್ತುತ ಕೃತಿಯಲ್ಲಿ ಗದ್ಯ ಪಾಠಗಳು – 09, ಪದ್ಯಪಾಠಗಳು 09 ಹಾಗೂ ಪೋಷಕ ಅಧ್ಯಯನ ಭಾಗಗಳ –05 ಪಠ್ಯಗಳು ಇವೆ.
* ಹಿಂದಿನ ಪಠ್ಯಪುಸ್ತಕಗಳಿಗೆ ಹೋಲಿಸಿದಾಗ ಗದ್ಯ – ಪದ್ಯಗಳ ಸಂಖ್ಯೆ ಕಡಿಮೆ ಕಾರಣವೇನು?
* ಪ್ರಸ್ತುತ ಪಠ್ಯ ಪುಸ್ತಕವು ಭಾಷಾ ಚಟುವಟಿಕೆ, ನಿ.ವ್ಯಾ.ಮೌ ಭಾಷಾಶುದ್ಧಿ, ಶುದ್ಧ ಬರಹ ಹಾಗೂ ಸ್ಪಷ್ಟ ಓದಿಗೆ ಆದ್ಯತೆ ನೀಡಿದೆ. ಹಾಗಾಗಿ ಪಾಠ–ಪದ್ಯಗಳ ಸಂಖ್ಯೆ ಮಿತಿಗೊಳಿಸಲಾಗಿದೆ.
* ಅದರಲ್ಲೂ ಬರಹ ಮತ್ತು ಓದು ಭಾಷೆಯ ಎರಡು ಕಣ್ಣುಗಳೆಂದು ಪರಿಗಣಿಸಲಾಗಿದೆ. ಹಾಗಾಗಿ ಪ್ರತಿಪಾಠದ ನಂತರ ಒಬ್ಬೊಬ್ಬ ವಿದ್ಯಾರ್ಥಿಯಿಂದ ಅಥವಾ ತಂಡಗಳಾಗಿ ವಿಂಗಡಿಸಿ ಒಂದು ಅಥವಾ ಎರಡು ಘಟಕಗಳನ್ನು ವಾಚನ ಕೌಶಲಕ್ಕೆ ಬಳಸುವುದು ಸೂಕ್ತ.
* ಅದರಂತೆ ವಾರದ ಒಂದು ಅವಧಿಯಲ್ಲಿ ಉಕ್ತಲೇಖನವನ್ನು ಕೈಗೊಂಡು ಬರವಣಿಗೆಯ ಕೌಶಲದ ವೃದ್ಧಿಗೆ ಆದ್ಯಗಮನ ನೀಡುವುದು.
* ಆರಂಭದ ಹಳೆಗನ್ನಡ ಗದ್ಯ ಪದ್ಯ ಕೃತಿಗಳನ್ನು ವರ್ಷದ ನಡುವೆ ಮತ್ತು ವರ್ಷಾಂತ್ಯದಲ್ಲಿ ಎರಡು ಬಾರಿ ಪುನರಾವರ್ತನೆ ಕೈಗೊಳ್ಳುವುದು ವಿದ್ಯಾರ್ಥಿಗಳ ಕಲಿಕಾದೃಷ್ಟಿಯಿಂದ ಅಪೇಕ್ಷಣೀಯ.
* ಪ್ರತಿ ಘಟಕವು ಮುಗಿದ ನಂತರ ಅಲ್ಲಿರುವ ಅಭ್ಯಾಸ ಮತ್ತು ಭಾಷಾಭ್ಯಾಸ ಚಟುವಟಿಕೆಗಳನ್ನು ಮಾಡಿದ ನಂತರ ಅಭ್ಯಾಸ ಪುಸ್ತಕವನ್ನು ಒಂದು ಅವಧಿಯಲ್ಲಿ ವಿದ್ಯಾರ್ಥಿ ತಂಡಗಳನ್ನಾಗಿ ಮಾಡಿ ಅವರಿಂದಲೇ ಚಟುವಟಿಕೆ, ಅಭ್ಯಾಸ ಪುಸ್ತಕದ ಪ್ರಶ್ನೆಗಳಿಗೆ ಉತ್ತರ ಬರೆಯಿಸುವುದು. ವಿದ್ಯಾರ್ಥಿಗಳಿಗೆ ಕಷ್ಟವೆನಿಸಿದಾಗ ಶಿಕ್ಷಕರು ಸಹಾಯ ಮಾಡಬಹುದು.
* ಪ್ರತಿ ಘಟಕದ ಹಿಂದಿರುವ ವ್ಯಾಕರಣಗಳನ್ನು ಆ ಘಟಕವು ಪೂರ್ಣಗೊಂಡನಂತರ ವಿದ್ಯಾರ್ಥಿಗಳಿಂದಲೇ ಮಾಡಿಸುವುದು ಉತ್ತಮ.
* ಪ್ರತಿ ಘಟಕದ ಹಿಂದಿರುವ ವ್ಯಾಕರಣಾಂಶಗಳನ್ನು ಹಿಂದೆ ಹೇಳಿದಂತೆ ವಿದ್ಯಾರ್ಥಿ ತಂಡಗಳಿಂದಲೇ ಮಾಡಿಸುವುದು ಅಪೇಕ್ಷಣೀಯ.

* ಕಂಠಪಾಠದ ಪದ್ಯಗಳನ್ನು ಸಾಮೂಹಿಕವಾಗಿ ಮಕ್ಕಳಿಗೆ ಹೇಳಿಕೊಟ್ಟು ದಿನವೂ ಅಭ್ಯಾಸ ಮಾಡಿಸುವುದರಿಂದ ಕಂಠಗತ ಮಾಡಲು ಅವಕಾಶವಿದೆ.
* ಹಳೆಗನ್ನಡ ಗದ್ಯ – ಪದ್ಯಗಳನ್ನು ಆರಂಭದಲ್ಲೆ ಹಾಕಿರುವುದು ಪುನರಾವರ್ತನೆಯಾಗಲಿ ಎಂಬುದು ಮುಖ್ಯ ಉದ್ದೇಶವಾಗಿದೆ.
* ಪ್ರಕೃತ ಪಠ್ಯದಲ್ಲಿ ಚರ್ಚೆಗೆ, ನಾಟಕಾಭಿನಯ, ಪ್ರವಾಸದ ಬಗ್ಗೆ ಟಿಪ್ಪಣಿ ತಯಾರಿಕೆ, ಆತ್ಮಕತೆ ರಚಿಸುವ ಸೃಜನಾತ್ಮಕತೆ ಮೊದಲಾದ ಭಾಷಾ ಕೌಶಲದ ವೃದ್ಧಿಗೆ ಆದ್ಯತೆ ನೀಡಿದೆ.
* ಪಠ್ಯಪುಸ್ತಕದ ಸಂಗಾತಿಯಂತಿರುವ ಅಭ್ಯಾಸ ಪುಸ್ತಕದಲ್ಲಿ ಪಠ್ಯ ವಿಷಯವೇ ಅಲ್ಲದೆ, ಹೆಚ್ಚಿನ ಸಾಹಿತ್ಯಾಂಶಗಳನ್ನು ನೀಡಿ ಅವುಗಳ ಅಭಿನಯ, ಗ್ರಹಿಕೆ, ಅಭಿವ್ಯಕ್ತಿಗಳಿಗೆ ಅವಕಾಶ ಮಾಡಿ ಕೊಡಲಾಗಿದೆ.
* ಯೋಜನಾಕಾರ್ಯಕ್ಕೆ ಅನುವಾಗುವಂತೆ ಪ್ರಕೃತ ಪಠ್ಯಪುಸ್ತಕವನ್ನು ಸಿದ್ಧಪಡಿಸಿದೆ. ವಿವಿಧ ಲೇಖಕರನ್ನು ಕುರಿತಂತೆ ಯೋಜನೆ ತಯಾರಿಕೆ, ಪಠ್ಯಾಧಾರ ಟಿಪ್ಪಣಿಗಳ ಸಂಗ್ರಹವನ್ನೇ ಒಂದು ಯೋಜನೆಯನ್ನಾಗಿ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ನೀಡಲು ಅವಕಾಶವಿದೆ.

# ತರಗತಿ ಪ್ರಕ್ರಿಯೆಯಲ್ಲಿ ಸಂವಹನದ ಪ್ರಾಮುಖ್ಯತೆ

ಸಂವಹನವು ಮಾನವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಬಂಧವಾಗಿದ್ದು ಮನುಷ್ಯರ ಸಾಮಾಜಿಕ, ಬೌದ್ಧಿಕ ಹಾಗೂ ಸಾಂಸ್ಕೃತಿಕ ಕೊಡುಕೊಳ್ಳುಗೆಯ ಕ್ರಿಯೆಯಾಗಿದೆ. ಸಂವಹನ ಕ್ರಿಯೆಯು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಶಿಕ್ಷಣ, ಸಂಶೋಧನೆ, ರಾಜಕೀಯ ಮತ್ತು ಸಮೂಹ ಮಾಧ್ಯಮಗಳ ಜೊತೆಯಲ್ಲಿ ವಿಶಿಷ್ಟ ಪ್ರಭಾವ ಬೀರುತ್ತದೆ ಸಂವಹನವು ವ್ಯಕ್ತಿಯ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಭಾವನಾತ್ಮಕವಾಗಿ ಅಂತರಂಗದ ಅಭಿವ್ಯಕ್ತಿಯನ್ನು ಬೆಳೆಸುತ್ತದೆ.

ಮಾಹಿತಿ ಪಡೆಯುವಿಕೆ ಮತ್ತು ಅಭಿವ್ಯಕ್ತಿಯು ವ್ಯಕ್ತಿಯ ಹಕ್ಕಾಗಿದ್ದು ಇದರ ಪರಿಣಾಮಕಾರಿ ಬಳಕೆಗೆ ಸಂವಹನ ಶಕ್ತಿ ಅವಶ್ಯಕ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ವ್ಯಕ್ತಿಯ ಸಾಮಾಜಿಕ, ಆಡಳಿತಾತ್ಮಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ವ್ಯವಹಾರಗಳಿಗೆ ಮತ್ತು ಕೊಡುಕೊಳ್ಳುವಿಕೆಗೆ ಸಂವಹನ ಸಾಮರ್ಥ್ಯ ಅಗತ್ಯ. ಬೌದ್ಧಿಕ ಮತ್ತು ಸಾಂಸ್ಕೃತಿಕ ಉನ್ನತಿಗೆ, ಸಾಮಾಜೀಕರಣಕ್ಕೆ, ಸಾಮಾಜಿಕ ಅಂತರ ಸಂಬಂಧಗಳನ್ನು ವೃದ್ಧಿಗೊಳಿಸಲು, ಸಾಮಾಜಿಕ ಅರಿವು ಮತ್ತು ಜಾಗೃತಿ ಮೂಡಿಸಲು, ಸಾಮಾಜಿಕ–ಸಾಂಸ್ಕೃತಿಕ ಸಾಮರಸ್ಯಕ್ಕೆ ಸಂವಹನ ಕ್ರಿಯೆ ಅಗತ್ಯವಾಗಿರಬೇಕು. ವ್ಯಕ್ತಿಯು ಗಳಿಸಿಕೊಳ್ಳುವ ಸಂವಹನವು ಕೇವಲ ಸಂಪರ್ಕಕ್ಕಷ್ಟೇ ಸೀಮಿತವಲ್ಲ. ವ್ಯಕ್ತಿಯಲ್ಲಿ ಆಲೋಚನೆ, ಅಭಿವ್ಯಕ್ತಿ, ಆತ್ಮವಿಶ್ವಾಸ ಬೆಳೆಸುವ ಸಂವಹನವು ಸಶಕ್ತತೆಯ ಶಕ್ತಿಯುತ ಸಾಧನ (means of empowerment) ವಾಗಿ ನೆರವಾಗುತ್ತದೆ.

ಶಿಕ್ಷಣ, ಉದ್ಯೋಗ, ಆಡಳಿತ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಂವಹನ ಕೌಶಲವು ಒಂದು ಪ್ರಭಾವಿ ಸಾಧನ. ಶಿಕ್ಷಣದಲ್ಲಿ ಮಾಹಿತಿ ಸಂಗ್ರಹ, ಜ್ಞಾನಾರ್ಜನೆ, ಸ್ವತಂತ್ರ ಚಿಂತನೆ, ಪರಿಣಾಮಕಾರಿ ಅಭಿವ್ಯಕ್ತಿ, ಚರ್ಚೆ, ವಿಚಾರ ವಿನಿಮಯ, ಭಾಷಾ ಬೆಳವಣಿಗೆ, ಪರಿಣಾಮಕಾರಿ ಕಲಿಕೆ, ಸಮೂಹ ಮೌಲ್ಯಗಳು, ನಾಯಕತ್ವದ ಗುಣಗಳು ಈ ರೀತಿ ವಿದ್ಯಾರ್ಥಿಯ ವ್ಯಕ್ತಿತ್ವ ವಿಕಾಸದಲ್ಲಿ ಸಂವಹನವು ನೆರವಾಗುತ್ತದೆ. ಉತ್ತಮ ಸಂವಹನ ಶಕ್ತಿ ಉಪಾಧ್ಯಾಯರ ಒಂದು ಅತ್ಯಗತ್ಯ ಗುಣ. ಪರಿಣಾಮಕಾರಿ ಸಂವಹನ ಕೌಶಲವಿಲ್ಲದೆ ಉತ್ತಮ ಬೋಧನೆ ಸಾಧ್ಯವಿಲ್ಲ. ತರಗತಿಯನ್ನು ಯಶಸ್ವಿ ನಿರ್ವಹಣೆ, ಶಿಸ್ತುಪಾಲನೆ, ಸಲಹೆ, ಸೂಚನೆ, ನಿರ್ದೇಶನಗಳನ್ನು ನೀಡಲು ನೆರವಾಗುತ್ತದೆ.

ಗ್ರಾಮೀಣ ಪ್ರದೇಶದ ನಮ್ಮ ಅದೆಷ್ಟೋ ಮಕ್ಕಳು ಸಂವಹನ ಕೌಶಲಗಳಲ್ಲಿ ತಿಳುವಳಿಕೆ ಮತ್ತು ಅಭ್ಯಾಸಗಳಿಲ್ಲದೆ ತಮ್ಮಲ್ಲಿರುವ ಅಪೂರ್ವ ಪ್ರತಿಭೆ, ಸಾಮರ್ಥ್ಯಗಳನ್ನು ಪ್ರಕಟಪಡಿಸಲಾರದೆ ಕೀಳರಿಮೆ ಬೆಳೆಸಿಕೊಳ್ಳುವ ಸಂದರ್ಭಗಳನ್ನು ಕಾಣಬಹುದು. ಸೆಕೆಂಡರಿ ಹಂತದ ಶಿಕ್ಷಣದಲ್ಲಿಯೇ ವಿದ್ಯಾರ್ಥಿಗಳಲ್ಲಿ ಸೂಕ್ತ ತರಬೇತಿ ಮೂಲಕ ಸಂವಹನ ಕೌಶಲಗಳನ್ನು ಬೆಳೆಸಿದರೆ ಮುಂದೆ ಅವರ ಶೈಕ್ಷಣಿಕ ಮತ್ತು ಸಾಮಾಜಿಕ ಜೀವನ ಉತ್ತಮಗೊಳ್ಳಲು ಸಾಧ್ಯ.

ಸಂವಹನ ಕೌಶಲಗಳ ಸಾಮರ್ಥ್ಯದಿಂದ ವಿದ್ಯಾರ್ಥಿಗಳಲ್ಲಿ ಚಿಂತನೆ ಮತ್ತು ಅಭಿವ್ಯಕ್ತಿ ಶಕ್ತಿ ಉತ್ತಮಗೊಳ್ಳುತ್ತದೆ. ವಿಚಾರ ವಿನಿಮಯಕ್ಕೆ ಜ್ಞಾನಾರ್ಜನೆಗೆ, ಆಲೋಚನೆ ಶಕ್ತಿ ಬೆಳೆಯಲು, ಸಾಮಾಜೀಕರಣಕ್ಕೆ ಹಾಗೂ ನಾಯಕತ್ವಗುಣಗಳನ್ನು ಬೆಳೆಸಲು ಸಂವಹನ ಕೌಶಲ ಬೆಂಬಲವಾಗುತ್ತದೆ. ವಿಚಾರ ವಿನಿಮಯ, ಆಲೋಚನೆ, ಕಲಿಕೆ ಹಾಗೂ ಅಭಿವ್ಯಕ್ತಿ ಗುಣಗಳು ಅನ್ಯೋನ್ಯ ಸಂಬಂಧ ಹೊಂದಿರುವುದರಿಂದ ಸಂವಹನ ಗುಣವು ಮಕ್ಕಳ ಕಲಿಕೆಯ ಮೇಲೆ ಸಕಾರಾತ್ಮಕ ಪ್ರಭಾವ ಬೀರುತ್ತದೆ. ಶಿಕ್ಷಕರ ಬೋಧನೆಯನ್ನು ಅನುಸರಿಸಲು, ಸಹಪಾಠಿಗಳು ಹಾಗೂ ಶಿಕ್ಷಕರೊಂದಿಗೆ ಚರ್ಚೆ, ವಿಚಾರ ವಿನಿಮಯವನ್ನು ವೃದ್ಧಿಗೊಳಿಸಲು ಸಂವಹನ ಕೌಶಲಗಳು ನೆರವಾಗುತ್ತವೆ.

## ಸಂವಹನದ ವಿಧಾನಗಳು

ಸಂವಹನದಲ್ಲಿ ಶಾಬ್ದಿಕ ಮತ್ತು ಅಶಾಬ್ದಿಕ ಸಂವಹನ ಕ್ರಿಯೆಗಳಿವೆ. ಭಾಷೆಯ ಮೂಲಕ, ನಡೆಯುವ ಸಂವಹನ ಶಾಬ್ದಿಕ ಎಂದೂ, ಮತ್ತು ಶಬ್ದಗಳಲ್ಲದೆ ಬೇರೆ ವಿಶಿಷ್ಟ ಸಂಕೇತಗಳ ಮೂಲಕ ನಡೆಯುವ ಸಂವಹನ ಅಶಾಬ್ದಿಕ ಸಂವಹನ ಎನ್ನಬಹುದು. ಶಾಬ್ದಿಕ ಸಂವಹನದಲ್ಲಿ ಮೌಖಿಕ ಮತ್ತು ಲಿಖಿತ ಎರಡು ವಿಧಾನಗಳುಂಟು.

## ಮೌಖಿಕ ಸಂವಹನ (Oral Communication)

ಮಾತಿನ ಮೂಲಕ ಸಂದರ್ಭಕ್ಕೆ ತಕ್ಕಂತೆ ಸಹಜವಾಗಿ ನಡೆಯುವ ಅಂತರ ಕ್ರಿಯೆ ಮತ್ತು ಮಾತುಕತೆಗಳನ್ನು ಮೌಖಿಕ ಸಂವಹನ ಎನ್ನಬಹುದು. ಶಿಷ್ಟಕ್ರಮದಲ್ಲಿ ನಡೆಯಬೇಕಾದ ಮೌಖಿಕ ಸಂವಹನಕ್ಕೆ ಅಗತ್ಯ ತರಬೇತಿ, ತಿಳಿವಳಿಕೆ, ಅಭ್ಯಾಸಗಳು ಬೇಕು. ಮೌಖಿಕ ಸಂವಹನದಲ್ಲಿ ಭಾಷೆಯ ರಚನೆ ಮತ್ತು ಪ್ರಯೋಗ ಪರಿಣಾಮಕಾರಿಯಾಗಬೇಕು. ಯೋಗ್ಯ ಪದಗಳ ಆಯ್ಕೆ ಮತ್ತು ಪ್ರಯೋಗ, ವಾಕ್ಯ ರಚನೆ ಮತ್ತು ಪ್ರಯೋಗ, ಸುಸ್ಪಷ್ಟ ಉಚ್ಚಾರ, ಅಗತ್ಯ ವೇಗ, ಭಾಷಾಶೈಲಿ, ಅರ್ಥ ಮತ್ತು ಭಾವಕ್ಕುಗುಣವಾಗಿ ಧ್ವನಿಯ ಏರಿಳಿತಗಳು, ನಿಲುಗಡೆಯ ಸ್ಥಳಗಳನ್ನು ಅನುಸರಿಸುವುದು, ಧ್ವನಿಯ ಮಟ್ಟ, ವ್ಯಾಕರಣಬದ್ಧ ಭಾಷೆ, ವಿಷಯ ವಿವರಣೆ ಹಾಗೂ ನಿರೂಪಣಾ ಕ್ರಮ, ಮುಖ್ಯಾಂಶಗಳನ್ನು ಒತ್ತುಕೊಟ್ಟು ಹೇಳುವ ರೀತಿ, ಸಂಕ್ಷಿಪ್ತವಾಗಿ ವಿಷಯ ನಿರೂಪಣೆ, ಸಂವಹನದಲ್ಲಿ ಸೂಕ್ತ ಕಣ್ನೋಟ, ಆಂಗಿಕ ಚಲನವಲನಗಳು, ಆತ್ಮವಿಶ್ವಾಸ ಮತ್ತು ಪ್ರೇರಣೆಗೊಳಿಸುವಂತೆ ಧ್ವನಿಯನ್ನು ಬಳಸುವುದು, ಇಂತಹ ಕೌಶಲ ಮತ್ತು ವರ್ತನೆಗಳನ್ನು ಅಳವಡಿಸುವುದರಿಂದ ಮೌಖಿಕ ಸಂವಹನವು ಪರಿಣಾಮಕಾರಿಯಾಗಿ ಮೂಡಿಬರಲು ಸಾಧ್ಯ. ಮೌಖಿಕ ಸಂವಹನವು ಮುಖಾಮುಖಿ ಸಂವಾದ, ಸಂಭಾಷಣೆ, ಗುಂಪುಚರ್ಚೆ, ಸಂದರ್ಶನ, ಪ್ರಶ್ನೋತ್ತರ, ದೂರವಾಣಿ ಮಾತು, ಭಾಷಣಗಳು, ಉಪನ್ಯಾಸಗಳು, ಸಭೆಗಳು, ಸಹಜ ಮಾತು, ವಿಷಯ ನಿರೂಪಣೆ, ವರದಿಮಾಡುವುದು ಇತ್ಯಾದಿ ರೂಪಗಳಲ್ಲಿ ನಡೆಯಬಹುದು.

## ಲಿಖಿತ ಸಂವಹನ (Written Communication)

ಪತ್ರಗಳು, ವರದಿಗಳು, ಸುತ್ತೋಲೆಗಳು, ಪ್ರಶ್ನೋತ್ತರಗಳು, ಕೋಷ್ಟಕಗಳು, ರೇಖಾನಕ್ಷೆಗಳು ಈ ರೀತಿ ಲಿಖಿತ ರೂಪಗಳಲ್ಲಿಯು ಸಂವಹನ ನಡೆಯುತ್ತದೆ. ಲಿಖಿತ ಸಂವಹನವು ಮೌಖಿಕ

ಸಂವಹನದ ಜೊತೆ ಜೊತೆ ಬಳಕೆಯಾಗಬಹುದು. ಕೆಲವು ಸಂದರ್ಭಗಳಲ್ಲಿ ಪ್ರತ್ಯೇಕವಾಗಿ ಬಳಕೆಯಾಗಬಹುದು. ವಿಷಯ ಮತ್ತು ಸಂವಹನದ ಉದ್ದೇಶಕ್ಕೆ ಅನುಗುಣವಾಗಿ ಲಿಖಿತ ಸಂವಹನವನ್ನು ರೂಪಿಸಿಕೊಳ್ಳಬೇಕು. ಸುಸಂಬದ್ಧ ಮತ್ತು ತರ್ಕಬದ್ಧ ವಾಕ್ಯ ಸರಣಿ, ಬರಹದ ಸಂಕ್ಷಿಪ್ತತೆ ಪರಿಣಾಮಕಾರಿ ಅರ್ಥ ಸಂವಹನ, ಸುಸ್ಪಷ್ಟತೆ ಗುಣ ಹೊಂದಿರಬೇಕು. ಪರಿಣಾಮಕಾರಿ ಸಂವಹನಕ್ಕೆ ಒಪ್ಪುವಂತೆ ಟಿಪ್ಪಣಿಸುವುದು, ಕೋಷ್ಟಕಗಳು, ಫ್ಲೋ ನಕ್ಷೆಗಳು ಮತ್ತು ರೇಖಾನಕ್ಷೆಗಳ ಮೂಲಕವು ಲಿಖಿತ ಸಂವಹನ ಆಗಬೇಕು. ಇಲ್ಲಿ ವಿಷಯದ ವ್ಯಾಪ್ತಿ ಲಕ್ಷಣಗಳಿಗೆ ಒಪ್ಪುವ ರೀತಿ ಬರಹದ ರೂಪುರೇಷೆಯನ್ನು ಸಿದ್ಧಪಡಿಸಿಕೊಳ್ಳಬೇಕು. ಶಿಕ್ಷಕರು ಬೋಧನಾ ಸಂದರ್ಭದಲ್ಲಿ ಕಪ್ಪುಹಲಗೆ ಅಥವಾ ಚಾರ್ಟ್‌ಗಳ ಮೇಲೆ ಪರಿಣಾಮಕಾರಿಯಾಗಿ ಅರ್ಥ ಹೊರಹೊಮ್ಮುವ ರೀತಿ ಬರೆಯುವುದನ್ನು ಅಭ್ಯಾಸ ಮಾಡಿಕೊಂಡಿರಬೇಕು. ಮಕ್ಕಳಿಗೂ ಸಹ ಅರ್ಥಬದ್ಧವಾದ ಸಂಕ್ಷಿಪ್ತ ಬರಹದಲ್ಲಿ ಸೂಕ್ತ ತಿಳುವಳಿಕೆ ಹಾಗೂ ಅಭ್ಯಾಸಗಳನ್ನು ಮಾಡಿಸಬೇಕು. ಹೆಚ್ಚು ಸಂಕ್ಷಿಪ್ತ, ವ್ಯಾಕರಣಬದ್ಧವಾಗಿರುವ ಲಿಖಿತ ಸಂವಹನ ಕ್ರಿಯೆಯು ಪತ್ರಬರಹ, ಟಿಪ್ಪಣಿಸುವಿಕೆ, ವರದಿ ಬರೆಯುವುದು, ಪ್ರಶ್ನೋತ್ತರಗಳು, ಸೂಚನೆಗಳು ಇತ್ಯಾದಿ ರೂಪಗಳಲ್ಲಿ ನಡೆಯಬಹುದು.

**ಅಶಾಬ್ದಿಕ ಸಂವಹನ**

ಸಂಜ್ಞೆಗಳು, ಸಂಕೇತಗಳು, ದೈಹಿಕ ಹಾವಭಾವಗಳು, ಮುಖಭಾವಗಳು, ರೇಖಾಚಿತ್ರಗಳು, ನಕ್ಷೆಗಳು, ಚಾರ್ಟುಗಳು ಇಂತಹ ಶಾಬ್ದಿಕವಲ್ಲದ ತಂತ್ರಗಳಿಂದ ನಡೆಯುವ ಸಂವಹನವನ್ನು ಅಶಾಬ್ದಿಕ ಸಂವಹನ ಎನ್ನಬಹುದು. ಈ ಅಶಾಬ್ದಿಕ ಸಂಕೇತಗಳು ಮತ್ತು ತಂತ್ರಗಳನ್ನು ಮೌಖಿಕ ಮತ್ತು ಲಿಖಿತ ಎರಡೂ ಸಂವಹನ ಕ್ರಿಯೆಗಳಲ್ಲಿ ಬಳಸಲಾಗುತ್ತದೆ. ಎಷ್ಟೋ ಸಂದರ್ಭಗಳಲ್ಲಿ ಮಾತಿನ ಮೂಲಕ ಸಂವಹಿಸಲಾರದ ಮಾಹಿತಿ, ಭಾವನೆ ಮತ್ತು ವಿಚಾರಗಳನ್ನು ಅಶಾಬ್ದಿಕ ತಂತ್ರಗಳು ಸಮರ್ಥವಾಗಿ ಸಂವಹಿಸುತ್ತವೆ. ಅದೆಷ್ಟೋ ಮಾತು, ವಿವರಣೆಗಳು ಅರ್ಥಮಾಡಿಸಲಾಗದ ಭಾವನೆಗಳು, ವಿಷಯಾಂಶಗಳನ್ನು ಒಂದೇ ಒಂದು ಸಂಜ್ಞೆ, ಚಿತ್ರ, ಮುಖಭಾವವು ಪರಿಣಾಮಕಾರಿಯಾಗಿ ಸಂವಹಿಸಲು ಸಾಧ್ಯ. ಇಂತಹ ಅಶಾಬ್ದಿಕ ಸಂವಹನ ಮಾದರಿಗಳು, ತಂತ್ರಗಳು ಶಾಬ್ದಿಕ ಸಂವಹನದಲ್ಲಿ ಅನ್ಯೋನ್ಯವಾಗಿ ಸೇರಿ ಸಂವಹನ ಕ್ರಿಯೆಯನ್ನು ಪರಿಣಾಮಕಾರಿಗೊಳಿಸುತ್ತವೆ. ಅಶಾಬ್ದಿಕ ಸಂವಹನ ತಂತ್ರಗಳಲ್ಲಿ ಶಿಕ್ಷಕರ ದೈಹಿಕ ಚಲನವಲನಗಳು, ಹಾವ ಭಾವಗಳು (body language) ಅವರ ಸಂವಹನ ಶಕ್ತಿಯನ್ನು ಉತ್ತಮಗೊಳಿಸುತ್ತವೆ.

- ಚೈತನ್ಯ, ನಗುಮುಖ, ಕಳಕಳಿ
- ಭಾವಾಭಿನಯ ಸಂಜ್ಞೆಗಳು
- ತಲೆಯ ಚಾಲನೆಗೊಳಿಸುವಿಕೆ
- ನಿಲ್ಲುವ ಹಾಗೂ ಓಡಾಡುವ ಭಂಗಿ ಅಂಗ ವಿನ್ಯಾಸ
- ದೈಹಿಕ ಸ್ಥಿರತೆ, ಚಲನಶೀಲತೆ
- ಯೋಗ್ಯ ರೀತಿಯ ಉಡುಪು

- ದೈಹಿಕ ಸ್ವಚ್ಛತೆ, ಮುಖಚರ್ಯೆ, ಉತ್ಸಾಹಶೀಲತೆ
- ವಿದ್ಯಾರ್ಥಿಗಳನ್ನು ಕಣ್ಣೋಟದಿಂದ ಗಮನಿಸುವುದು
- ಧ್ವನಿಯ ಸ್ಪಷ್ಟತೆ ಮತ್ತು ಅರ್ಥಕ್ಕನುಗುಣವಾಗಿ ಧ್ವನಿ ಏರಿಳಿತಗಳು
- ಮುಖಭಾವ ಮತ್ತು ದೈಹಿಕ ಸಂಜ್ಞೆಗಳು
- ಉಡುಪು ಮತ್ತು ಅಂಗ ವಿನ್ಯಾಸ : ಮಾತನಾಡುವ ಶೈಲಿ ಮತ್ತು ಭಂಗಿ
- ಸ್ಪಷ್ಟ ಮತ್ತು ಉಚ್ಚಸ್ವರಭಾರಗಳು ಇತ್ಯಾದಿ .....

ಒಟ್ಟಾರೆ ಶಿಕ್ಷಕರ ವ್ಯಕ್ತಿತ್ವವು ತರಗತಿಯಲ್ಲಿ ಸೌಜನ್ಯವಾಗಿ, ಗಂಭೀರವಾಗಿ, ಪ್ರೇರಕವಾಗಿ, ವಿಶ್ವಾಸಪೂರ್ವಕವಾಗಿ, ಪ್ರಭಾವಿತವಾಗಿ ರೂಪುಗೊಳ್ಳಲು ಅವರ ಭಾಷೆ, ಧ್ವನಿ ಹಾಗೂ ದೈಹಿಕ ಚಲನವಲನಗಳು ಅವರ ಸಂವಹನ ಕ್ರಿಯೆಯನ್ನು ಪರಿಣಾಮಕಾರಿಗೊಳಿಸುತ್ತವೆ. ಶಿಕ್ಷಕರ ಪೂರ್ಣ ವ್ಯಕ್ತಿತ್ವವೇ ಸಂವಹನ ಕ್ರಿಯೆಯಲ್ಲಿ ಲೀನವಾಗಬೇಕು. ಈ ಉದ್ದೇಶಕ್ಕಾಗಿ ಶಿಕ್ಷಕರು ಮೌಖಿಕ, ಲಿಖಿತ ಹಾಗೂ ಶಾರೀರಿಕ ಸಂಜ್ಞೆಗಳನ್ನು, ವರ್ತನೆಗಳನ್ನು ಸಮರ್ಥ ರೀತಿಯಲ್ಲಿ ರೂಢಿಸಿಕೊಳ್ಳಬೇಕು. ದೃಶ್ಯ ಸಾಧನಗಳು, ಚಿತ್ರಪಟಗಳು, ಚಾರ್ಟ್‌ಗಳು, ಬಣ್ಣಗಳ ಸಂಕೇತಗಳು, ಗೋಡೆ ಪತ್ರಗಳು, ಗ್ರಾಫ್‌ಗಳು, ಕೋಷ್ಟಕಗಳು, ರೇಖಾನಕ್ಷೆಗಳು, ಭೂಪಟಗಳು, ರೇಖಾ ಸಂಕೇತಗಳು, ಧ್ವನಿಯ ಸಂಕೇತಗಳು ಇತ್ಯಾದಿಗಳ ಮೂಲಕ ಅಶಾಬ್ದಿಕ ಸಂವಹನ ನಡೆಯುತ್ತದೆ.

ಮೌಖಿಕ, ಲಿಖಿತ ಹಾಗೂ ಅಶಾಬ್ದಿಕ ಸಂವಹನ ಕ್ರಿಯೆಗಳು ಪ್ರತ್ಯೇಕ (isolated) ಅಲ್ಲ. ಯಾವುದೇ ಒಂದೇ ವಿಧದ ಸಂವಹನವು ಪರಿಣಾಮಕಾರಿ ಎನಿಸುವುದಿಲ್ಲ. ಅಗತ್ಯಕ್ಕನುಗುಣವಾಗಿ ಮೌಖಿಕ, ಲಿಖಿತ ಹಾಗೂ ಅಶಾಬ್ದಿಕ ಸಂವಹನಗಳು ಸಮನ್ವಯಗೊಂಡು ಬಳಕೆಯಾಗುವುದರಿಂದ ಪರಿಣಾಮಕಾರಿ ಸಂವಹನ ಸಾಧ್ಯ. ವಿವರಣೆಯಲ್ಲಿ ಅಗತ್ಯ ಬರಹ, ದೈಹಿಕ ಚಲನವಲನಗಳು, ಮುಖಭಾವಗಳು, ಅಗತ್ಯ ಚಿತ್ರಪಟಗಳು, ಸಾಧನ ಸಲಕರಣೆಗಳು ಬಳಸಿಕೊಳ್ಳಬೇಕಾದ ಅಗತ್ಯವನ್ನು ಅರ್ಥಮಾಡಿಕೊಳ್ಳಬೇಕು.

## ಪರಿಣಾಮಕಾರಿ ಸಂವಹನ ಕೌಶಲದ ಲಕ್ಷಣಗಳು

ಶಿಕ್ಷಕರ ಮಾತು, ಧ್ವನಿ, ಬರವಣಿಗೆಯ ವಿಶಿಷ್ಟತೆ, ಸೂಚನೆ, ಸಂಕೇತಗಳು, ಶಾರೀರಕ ಭಂಗಿ ಹಾವಭಾವಗಳು, ಭಾಷಾಶೈಲಿ ಹಾಗೂ ತರಗತಿಯ ವಾತಾವರಣ ಮುಂತಾದ ಅಂಶಗಳ ಅನ್ಯೋನ್ಯ ಸಂಬಂಧದಿಂದ ಸಂವಹನ ಕ್ರಿಯೆ ಪರಿಣಾಮಕಾರಿಯಾಗಿ ರೂಪುಗೊಳ್ಳುತ್ತದೆ.

ಸಂವಹನ ಕ್ರಿಯೆಯಲ್ಲಿ ಪಠ್ಯವಿಷಯದ ಸುಸಂಬದ್ಧತೆ, ವಿಷಯವನ್ನು ಅಡಕಮಾಡುವ ಜಾಣ್ಮೆ, ವಿಷಯ ನಿರೂಪಿಸುವ ಭಾಷೆ, ನಿರೂಪಿಸುವ ಕ್ರಮ, ಬಳಸುವ ಸಂಕೇತಗಳು, ಸಲಕರಣೆಗಳು, ಶಾರೀರಿಕ ಚಲನವಲನ ಸಹಜವಾಗಿ ಸಮನ್ವಯಗೊಂಡಾಗ ಸಂವಹನ ಜೀವ ಪಡೆಯುತ್ತದೆ.

ಭಾಷೆಯಲ್ಲಿ .... ಪದಪ್ರಯೋಗ, ವಾಕ್ಯರಚನೆ, ವ್ಯಾಕರಣ ಬದ್ಧ ರಚನೆ, ಸ್ಪಷ್ಟ ಹಾಗೂ ನಿರರ್ಗಳ ಉಚ್ಚಾರ, ಧ್ವನಿಯ ಸ್ಪಷ್ಟತೆ, ಅರ್ಥ, ಭಾವಕ್ಕನುಗುಣ ಧ್ವನಿಯ ಏರಿಳಿತಗಳು, ಅರ್ಥ

ಸ್ಪಷ್ಟತೆ, ನಿಲುಗಡೆ ಸ್ಥಳಗಳನ್ನು ಅನುಸರಿಸುವುದು, ವಿಷಯಾಂಶಗಳ ತರ್ಕಬದ್ಧ ರಚನೆ ಹಾಗೂ ನಿರೂಪಣೆ ಸರಳ, ನೇರ ಮತ್ತು ಸಂಕ್ಷಿಪ್ತ ನಿರೂಪಣೆ, ಭಾವಪೂರ್ಣ ಅಭಿವ್ಯಕ್ತಿ, ಆಕರ್ಷಕ ಭಾಷಾಶೈಲಿ ಪ್ರಭಾವಕಾರಿಯಾದ ಶಾಬ್ದಿಕ ಸಂವಹನ ಕ್ರಿಯೆಯಲ್ಲಿ ಒಳಗೊಳ್ಳಬೇಕಾದ ಅಂಶಗಳು. ಆಯಾ ವಿಷಯ ವಸ್ತುವಿನ ಸ್ವರೂಪಕ್ಕೆ ಅನುಗುಣ ಪದಸಂಪತ್ತು, ಉಚ್ಚಾರ ಕ್ರಮ ಹಾಗೂ ಭಾಷಾಶೈಲಿಯನ್ನು ರೂಢಿಸಿಕೊಳ್ಳುವುದು ಅಪೇಕ್ಷಣೀಯ.

ಭಾಷೆಯ ಜೊತೆಗೆ ಪರಿಣಾಮಕಾರಿಯದ ಸಂಕೇತಗಳು, ಚಾರ್ಟುಗಳು, ರೇಖಾನಕ್ಷೆಗಳನ್ನು ಬಳಸಬೇಕು. ಶಿಕ್ಷಕರ ದೈಹಿಕ ಚಲನವಲನಗಳು (body language) ವೈಜ್ಞಾನಿಕ ರೀತಿಯಲ್ಲಿ ಹೊರಹೊಮ್ಮಿದರೆ ಸಂವಹನ ಕ್ರಿಯೆ ಪರಿಣಾಮಕಾರಿಯಾಗುತ್ತದೆ.

ಸಂವಹನಗಾರರ ಮುಖಚರ್ಯೆ, ಭಾಷೆಯ ಮೇಲಿನ ಹಿಡಿತ, ಪ್ರೇರಣೆಗೊಳಿಸುವ ಗುಣ, ಜ್ಞಾನ, ಆತ್ಮವಿಶ್ವಾಸ, ಒಟ್ಟಾರೆ ವ್ಯಕ್ತಿತ್ವವು ಸಂವಹನ ಕ್ರಿಯೆಯನ್ನು ಪ್ರಭಾವಿಸುತ್ತದೆ. ಇದರ ಜೊತೆಗೆ ತರಗತಿಯ ವಾತಾವರಣ, ಮಕ್ಕಳ ಶಿಸ್ತು, ಸಂವೇದನೆ ಸಕಾರಾತ್ಮಕವಾಗಿರುವುದು ಅಪೇಕ್ಷಣೀಯ.

ಸಂವಹನವು ಉದ್ದೇಶಪೂರ್ವಕವಾಗಿ ಸಹಜ ಮತ್ತು ಸಂಕ್ಷಿಪ್ತವಾಗಿರಬೇಕು. ಸಂವಹನಗಾರರಿಗೆ ವಿಷಯದ ಬಗ್ಗೆ ಪೂರ್ಣ ಜ್ಞಾನ ಇರಬೇಕು. ನಿರಂತರ ಶ್ರೋತೃಗಳ ಸಂಪರ್ಕ ಹೊಂದಿದ್ದು ದ್ವಿಮುಖ ಸಂವಹನಕ್ಕೆ ಅವಕಾಶ ನೀಡಬೇಕು. ಪ್ರಶ್ನೋತ್ತರ, ಸಂಭಾಷಣೆ, ವಿವರಣೆ, ನಿರೂಪಣೆಗಳು ಅಗತ್ಯಕ್ಕನುಗುಣವಾಗಿ ಇರಲಿ. ಆತ್ಮವಿಶ್ವಾಸದಿಂದ ಸಂವಹನ ಮಾಡಬೇಕು. ಒಟ್ಟಾರೆ ವ್ಯಕ್ತಿಯ ವ್ಯಕ್ತಿತ್ವವೇ ಸಂವಹನ ಕ್ರಿಯೆಯಲ್ಲಿ ಸಮನ್ವಯಗೊಳ್ಳಬೇಕು.

## ಸಂವಹನದಲ್ಲಿ ಅಡತಡೆಗಳು (Barries to Communication)

- ಆಸಕ್ತಿ, ಉತ್ಸಾಹ, ಸಿದ್ಧತೆ, ಪ್ರೇರಣೆಯಲ್ಲಿನ ಕೊರತೆಗಳು
- ವೈಯಕ್ತಿಕ ದೋರಣೆಗಳು, ಅಹಂ ಕೇಂದ್ರಿತಭಾವನೆ
- ಅರ್ಥಗ್ರಹಿಕೆಯಲ್ಲಿನ ತೊಂದರೆಗಳು
- ಜ್ಞಾನ ಮತ್ತು ಅನುಭವದ ಮಟ್ಟ
- ಆರೋಗ್ಯದ ಸಮಸ್ಯೆಗಳು
- ರಸಭಾವಗಳ ಪ್ರಭಾವ
- ಪರಿಸರದ ಅಡಚಣೆಗಳು
- ಸಂವಹನಗಾರರ ಅನಾರೋಗ್ಯ, ದೈಹಿಕ ಆಯಾಸ
- ಧ್ವನಿಯ ಗಾತ್ರ

- ಆತ್ಮವಿಶ್ವಾಸ ಮತ್ತು ಧೈರ್ಯ
- ಭಾಷೆ : ಪದ, ವಾಕ್ಯ ರಚನೆ ಮತ್ತು ಪ್ರಯೋಗ
  ವ್ಯಾಕರಣಬದ್ಧ ಭಾಷೆ, ವಿಷಯದ ಸ್ವರೂಪಕ್ಕೆ ಅಗತ್ಯ ಭಾಷೆ,
  ಸಾಂಸ್ಕೃತಿಕ ಹಿನ್ನೆಲೆಯ ಭಾಷೆ; ಸಾಂಸ್ಕೃತಿಕ ಹಿನ್ನೆಲೆ ಜ್ಞಾನದ ಕೊರತೆ.
- ಅನಪೇಕ್ಷಿತ/ಅಸಂಬದ್ಧ ಶಾರೀರಿಕ ಹಾವಭಾವಗಳು
- ವಿಷಯದ ಅನುಕ್ರಮಣಿಕೆ, ತರ್ಕಬದ್ಧ ರಚನೆ
- ಮಾಹಿತಿಯ ನಿಖರತೆ ಮತ್ತು ಸಂವಹನಗಾರರ ವ್ಯಕ್ತಿತ್ವ

ಸಂವಹನದ ಸಂದರ್ಭಗಳಲ್ಲಿ ಈ ಅಂಶಗಳು ನಕಾರಾತ್ಮಕವಾಗಿದ್ದರೆ ಸಂವಹನದಲ್ಲಿ ಅಡಚಣೆಯುಂಟಾಗುತ್ತದೆ. ಈ ಅಂಶಗಳನ್ನು ಸಕಾರಾತ್ಮಕವಾಗಿ ರೂಪಿಸಿಕೊಳ್ಳುವ ಮೂಲಕ ಸಂವಹನ ಕ್ರಿಯೆ ಪರಿಣಾಮಕಾರಿಯಾಗುತ್ತದೆ.

## ತರಗತಿಯಲ್ಲಿ ಸಂವಹನ ಕ್ರಿಯೆ

ಶಿಕ್ಷಕರು ಸಂವಹನ ಕೌಶಲಗಳಲ್ಲಿ ಹೊಂದಿರವ ಪರಿಣತಿಯು ತರಗತಿಯ ಬೋಧನೆ–ಕಲಿಕೆಯ ಅಂತರಕ್ರಿಯೆಯನ್ನು ಪ್ರಭಾವಿಸುತ್ತದೆ. ತರಗತಿಯ ವಾತಾವರಣವು ಜೀವಂತವಾಗಿದ್ದು ಚಟುವಟಿಕೆ ಪ್ರಧಾನವಾಗಿ ಕಲಿಕೆ ರೂಪುಗೊಳ್ಳಲು ಶಿಕ್ಷಕರ ವಿಶಿಷ್ಟ ಸಂವಹನ ಶಕ್ತಿ ಅಗತ್ಯ. ಬೋಧನೆ–ಕಲಿಕಾ ಪ್ರಕ್ರಿಯೆಯು ವಿವಿಧ ರೀತಿಯ ಸಂವಹನ ಕೌಶಲಗಳ ಅನ್ಯೋನ್ಯ ಸಮನ್ವಯವಾಗಿದ್ದು ಸಂವಹನ ಕೌಶಲಗಳು ಬೋಧನೆ ಮತ್ತು ಕಲಿಕೆಯ ತಂತ್ರ ಸಾಧನಗಳಾಗಿ ಪ್ರಭಾವಿಸುತ್ತವೆ. ಕಲಿಕಾ ವಾತಾವರಣ ಸೃಷ್ಟಿಸಲು, ಮಕ್ಕಳನ್ನು ಕಲಿಕೆಗೆ ಸಿದ್ಧಗೊಳಿಸಿ ಅವರ ಆಸಕ್ತಿ, ಕುತೂಹಲವನ್ನು ಪ್ರೇರಣೆಗೊಳಿಸಲು, ಯೋಚನಾಶಕ್ತಿಯನ್ನು ಪ್ರೇರೇಪಿಸಿ ಅಭಿವ್ಯಕ್ತಿಯನ್ನು ಉತ್ತಮಪಡಿಸಲು, ಚಟುವಟಿಕೆಗಳನ್ನು ರೂಪಿಸಲು ಸಂವಹನ ಕೌಶಲಗಳು ಅಗತ್ಯ. ವಿದ್ಯಾರ್ಥಿ ಶಿಕ್ಷಕರ ನಡುವೆ ಮತ್ತು ವಿದ್ಯಾರ್ಥಿಗಳ ನಡುವೆ ಅನನ್ಯ ಸಂವಹನ ಇರುವಂತೆ ನೋಡಬೇಕು. ತರಗತಿಯಲ್ಲಿ ದ್ವಿಮುಖ, ಬಹುಮುಖಿ ಸಂವಹನ, ಅಂತರ ಸಂವಹನ ಇರಬೇಕು. ವಾತಾವರಣವು ಮಕ್ಕಳ ಸಂವಹನ ಶಕ್ತಿಯನ್ನು ಬೆಳೆಸಲು ಪೂರಕವಾಗಿರಬೇಕು. ಕಲಿಕೆಯುದ್ದಕ್ಕು ಮಕ್ಕಳು ಪ್ರಶ್ನೆ ಕೇಳಲು, ಅನಿಸಿಕೆ, ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಹಾಗೂ ಚರ್ಚೆಯಲ್ಲಿ ಪಾಲ್ಗೊಳ್ಳುವ ಅವಕಾಶಗಳನ್ನು ಕಲ್ಪಿಸಬೇಕು. ಶಿಕ್ಷಕರು ಮಕ್ಕಳ ಸಂವಹನ ಕೌಶಲಗಳು ಹೊರಹೊಮ್ಮಿ ಬೆಳೆಯಲು ಸೂಕ್ತ ಚಟುವಟಿಕೆಗಳನ್ನು ರೂಪಿಸಬೇಕು. ಶಿಕ್ಷಕರು ಸಂವಹನ ಕೌಶಲಗಳಲ್ಲಿ ಪರಿಣಿತಿ ಹೊಂದಿದ್ದು ಪರಿಣಾಮಕಾರಿಯಾಗಿ ಪ್ರಯೋಗಿಸಬೇಕು. ತರಗತಿಯಲ್ಲಿ ಮೌಖಿಕ, ಲಿಖಿತ ಸಂವಹದ ಜೊತೆಗೆ ರೇಡಿಯೋ, ದೂರದರ್ಶನ, ಚಿತ್ರಪಟಗಳು, ರೇಖಾನಕ್ಷೆಗಳು ಇತ್ಯಾದಿ ಸಂವಹನದ ಇದರ ಸಾಧನಗಳನ್ನು ಬಳಸಬೇಕು.

* ಉತ್ತಮ ಭಾಷಣ, ಚರ್ಚೆ, ಸಂಭಾಷಣೆಗಳನ್ನು ಕೇಳಿಸುವುದು ಮತ್ತು ಇಂತಹ ಕ್ರಿಯೆಗಳಲ್ಲಿ ಮಕ್ಕಳು ಪಾಲ್ಗೊಳ್ಳಲು ತರಬೇತಿಗೊಳಿಸುವುದು.

* ರೇಡಿಯೋ, ದೂರದರ್ಶನದಲ್ಲಿ ಪ್ರಸಾರವಗುವ ಉತ್ತಮ ಮಟ್ಟದ ಸಂವಹನಗಳನ್ನು ನೋಡುವ, ಕೇಳುವ ಅವಕಾಶ ಕಲ್ಪಿಸುವುದು.
* ತರಗತಿಯಲ್ಲಿ ಸಂವಹನಕ್ಕೆ ಅವಕಾಶ ಕಲ್ಪಿಸುವುದು.
* ವಿದ್ಯಾರ್ಥಿಗಳ ಸಂವಹನದಲ್ಲಿ ಕಂಡುಬರುವ ದೋಷಗಳನ್ನು ಆಯಾ ಸಂದರ್ಭದಲ್ಲಿಯೇ ತಿದ್ದಿ ಸರಿಪಡಿಸುವುದು
* ಪ್ರಶ್ನೋತ್ತರ, ಗುಂಪಿನ ಚರ್ಚೆ, ಸಂಭಾಷಣೆ, ಮಾತುಕತೆಗಳಿಗೆ ಮುಕ್ತ ಅವಕಾಶ ನೀಡುವುದು.
* ಮೌಖಿಕ ಮತ್ತು ಲಿಖಿತ ಸಂವಹನ ಕೌಶಲಗಳಲ್ಲಿ ಸೂಕ್ತ ತರಬೇತಿ ನೀಡುವುದು.
* ಸಂವಹನದ ಜೊತೆ ಸಹಜವಾಗಿ ಯೋಗ್ಯ ಹಾಗೂ ಅಪೇಕ್ಷಿತ ರೀತಿಯಲ್ಲಿ ಶಾರೀರಿಕ ಹಾವಭಾವಗಳನ್ನು ಬಳಸುವ ಬಗ್ಗೆ ತಿಳುವಳಿಕೆ ನೀಡುವುದು.
* ಕಥನ, ಸಂವಾದ, ಅಭಿನಯ, ನಿರೂಪಣೆ, ವಿವರಣೆ ಮತ್ತು ವಾಚನ ಕೌಶಲಗಳಲ್ಲಿ ತರಬೇತಿ ನೀಡುವುದು.
* ಉಪಾಧ್ಯಾಯರು ಅರ್ಥಪೂರ್ಣವಾದ ಮಾದರಿ ಸಂವಹನ ಕೌಶಲಗಳ ಸಮರ್ಥಗಳಿಸಿಕೊಂಡು ವಿದ್ಯಾರ್ಥಿಗಳು ಅನುಕರಣೆಗೆ ಯೋಗ್ಯರಾಗಿ ಸಂವಹನ ನಡೆಸುವುದು.

## ಭಾಷಾ ಕಲಿಕೆಯಲ್ಲಿ ಓದು–ಬರೆಹ ಕೌಶಲಗಳ ಅಭಿವೃದ್ಧಿ

ಭಾಷಾ ಶಿಕ್ಷಣದಲ್ಲಿ ಓದು–ಬರಹಗಳ ಕಲಿಕೆಗೆ ಮಹತ್ವದ ಸ್ಥಾನವಿದೆ. ಓದು ಬರಹಗಳು ಮಕ್ಕಳಲ್ಲಿ ಭಾಷಾ ಸಾಮರ್ಥ್ಯವನ್ನು ಬೆಳೆಸಲು ಆಧಾರವಾಗುವ ಜೊತೆಗೆ ಚಿಂತನೆ, ಜ್ಞಾನಾರ್ಜನೆ, ಅಭ್ಯಾಸ ಕೌಶಲಗಳು, ಸಾಮರ್ಥ್ಯ ಬೆಳವಣಿಗೆ, ಸಂವೇದನೆ ಹಾಗೂ ಒಟ್ಟು ವ್ಯಕ್ತಿತ್ವ ರೂಪುಗೊಳ್ಳಲು ನೆರವಾಗುತ್ತವೆ. ಆದರೂ ಸಹ ಶಾಲಾ ವ್ಯವಸ್ಥೆಯಲ್ಲಿ ಈ ಕೌಶಲಗಳಿಗೆ ನೀಡಬೇಕಾಗಿರುವ ಪ್ರಾಮುಖ್ಯತೆ ಲಭ್ಯವಾಗುತ್ತಿಲ್ಲ. ಕಲಿಕಾ ಮಾನಕಗಳ ಹಿನ್ನೆಲೆಯಲ್ಲಿ ಭಾಷಾ ಪಠ್ಯಕ್ರಮದಲ್ಲಿ ರಚನಾತ್ಮಕ ರೀತಿಯಲ್ಲಿ ಓದು–ಬರಹಗಳ ಮತ್ತು ಕಲಿಕೆ ಮತ್ತು ಬಳಕೆಗೆ ಸೂಕ್ತ ಅವಕಾಶಗಳನ್ನು ರೂಪಿಸಬೇಕು. ಭಾಷೆಯ ಹಲವು ಕೌಶಲಗಳು ಒಂದು ಸಾವಯವ ವ್ಯವಸ್ಥೆಯಾಗಿದ್ದು ಇದರ ಕಲಿಕೆಯು ಬಹು ಆಯಾಮಗಳ ನೆಲೆಯಲ್ಲಿ ಸಾಗಬೇಕು. ಅರ್ಥಗ್ರಹಿಕೆಯೊಂದಿಗೆ ಓದು ಮತ್ತು ಬರಹವನ್ನು ಕಲಿಯಬೇಕೆಂಬುದು ಭಾಷಾ ಬೋಧನೆಯ ಅಪೇಕ್ಷೆ. ಇದು ಹಲವು ಕೌಶಲಗಳ ಸಂಗಮವಾಗಿ ಚಿಂತನೆಯನ್ನು ರೂಪಿಸುವ ಸಾಧನವಾಗಿ ಮತ್ತು ವ್ಯಕ್ತಿತ್ವದ ಸಂಕೇತವಾಗಿ ಶಾಲೆಯ ಹಲವು ವಿಷಯಗಳಲ್ಲಿ ವ್ಯಾಪಿಸುತ್ತದೆ. ಓದು–ಬರಹ ಕಲಿಕೆ ಹಾಗೂ ಬಳಕೆಯು ಭಾಷಾ ತರಗತಿಗೆ ಮಾತ್ರ ಸೀಮಿತಗೊಳ್ಳದೆ ಶಾಲೆಯ ಎಲ್ಲ ವಿಷಯ ಬೋಧನೆಗಳ ಅಂತರಕ್ರಿಯೆ ಹಾಗೂ ಶಾಲೆಯ ಶೈಕ್ಷಣಿಕ ಚಟುವಟಿಕೆಗಳ ಒಟ್ಟು ಸಂದರ್ಭಗಳಲ್ಲಿ ಕಲಿಕೆಯಾಗುತ್ತದೆ. ಇದಲ್ಲದೇ ಓದು–ಬರಹ ಕೌಶಲಗಳು ಕೇವಲ ಪ್ರಾಥಮಿಕ ಹಂತಕ್ಕೆ ಕೊನೆಗೊಳ್ಳದೆ ಕಲಿಯುವ ಸಂದರ್ಭಗಳಲ್ಲಿ

ಹೊರಹೊಮ್ಮುವ ಹೊಸ ಹೊಸ ಅಗತ್ಯಗಳಿಗೆ ಅನುಗುಣವಾಗಿ ಮಾಧ್ಯಮಿಕ ಹಾಗೂ ಸೆಕೆಂಡರಿ ಹಂತದ ತರಗತಿಗಳಿಗೂ ವಿಸ್ತರಿಸುತ್ತವೆ.

**ಮಕ್ಕಳು ಓದುವುದನ್ನು ಏಕೆ ಸರಿಯಾಗಿ ಕಲಿಯುತ್ತಿಲ್ಲ?**

* ಮಕ್ಕಳಿಗೆ ಓದುವ ಕೌಶಲವನ್ನು ಪರಿಣಾಮಕಾರಿಯಾಗಿ ಕಲಿಸುವ ಬಗ್ಗೆ ಭಾಷಾ ಶಿಕ್ಷಣದಲ್ಲಿ ಅಗತ್ಯ ಆದ್ಯತೆ ನೀಡುತ್ತಿಲ್ಲ.

* ಪ್ರಸ್ತುತ ಮಕ್ಕಳ ಓದುವ ಕೌಶಲಗಳಲ್ಲಿನ ಸಾಮರ್ಥ್ಯವು ತುಂಬಾ ಕೆಳಮಟ್ಟದಲ್ಲಿದೆ. ಇದಕ್ಕೆ ಕಾರಣ ಓದುವ ಕೌಶಲ ಮತ್ತು ಕ್ರಮಗಳಲ್ಲಿ ಸೂಕ್ತವಾದ ತರಬೇತಿ ನೀಡುತ್ತಿಲ್ಲ. ಓದುವ ಬಗೆಗೆ ಸೂಕ್ತ ಚಟುವಟಿಕೆಗಳನ್ನು ರಚನಾತ್ಮಕ ರೀತಿಯಲ್ಲಿ ಕಲಿಯುವ ಸಾಧನ ಸಾಮಗ್ರಿಗಳನ್ನು ಬಳಸುತ್ತಿಲ್ಲ.

* ಮಕ್ಕಳ ಓದುವಿಕೆಯಲ್ಲಿನ ದೋಷಗಳನ್ನಷ್ಟೇ ಗುರುತಿಸಿದೇ ಓದು ಕಲಿಯಲು ಅಗತ್ಯ ಚಟುವಟಿಕೆಗಳನ್ನು, ಅಭ್ಯಾಸಗಳನ್ನು ಒದಗಿಸುತ್ತಿಲ್ಲ. ಶಿಕ್ಷಕ ನಿರ್ದೇಶಿತ ಸಂದರ್ಭಗಳಲ್ಲಿ ಸೂಕ್ತ ಚಟುವಟಿಕೆಗಳು ಹಾಗೂ ಯೋಗ್ಯ ಸಾಧನ ಸಾಮಗ್ರಿಗಳ ಮೂಲಕ ಓದು ಕಲಿಸಲು ಸೂಕ್ತ ಒತ್ತು ನೀಡುತ್ತಿಲ್ಲ.

* ಭಾಷಾ ಶಿಕ್ಷಕರು ಓದುವ ಕೌಶಲಗಳನ್ನು ಕಲಿಸುವ ಬಗ್ಗೆ ಹಾಗೂ ಬೋಧನೆಯ ಉಪಕ್ರಮಗಳಲ್ಲಿ ಅಗತ್ಯ ಸಾಮರ್ಥ್ಯ ಹೊಂದಿರುವುದಿಲ್ಲ. ಅಕ್ಷರ, ಪದಗಳನ್ನು ಗುರ್ತಿಸುವುದು. ಕಣ್ಣೋಟ, ಕಣ್ಚಾಲನೆ, ಅಕ್ಷರ ಮತ್ತು ಪದಗಳಿಗೆ ಧ್ವನಿ ಜೋಡಣೆ, ಧ್ವನಿ ಏರಿಳಿತ, ಸುಸ್ಪಷ್ಟ ಉಚ್ಚಾರ, ಚಿಹ್ನೆಗಳನ್ನು ಅಳವಡಿಸಿ ಓದುವ ಕ್ರಮ, ಅಕ್ಷರ ಮತ್ತು ಪದಗಳನ್ನು ಸಂಯೋಜಿಸಿ ಓದುವುದು, ಸಂಯುಕ್ತ ಪದಗಳನ್ನು ಓದುವುದು, ವ್ಯಾಕರಣ ಬದ್ಧವಾಗಿ ನಿರರ್ಗಳವಾಗಿ ಓದುವುದು, ಓದುವಾಗ ಅಗತ್ಯ ಮುಖ ಭಾವಗಳನ್ನು ಪ್ರಕಟಿಸುವುದು. ಮುಂತಾದ ಕೌಶಲಗಳ ಕಲಿಕೆಯ ಬಗ್ಗೆ ಸೂಕ್ತ ರೀತಿಯ ಅಭ್ಯಾಸಗಳನ್ನು ಅನುಸರಿಸುತ್ತಿಲ್ಲ.

* ಸೇವಾ ಪೂರ್ವ ಶಿಕ್ಷಕರ ತರಬೇತಿಯಲ್ಲಿ ಓದು–ಬರಹ ಕಲಿಸುವ ತಾಂತ್ರಿಕ ಮತ್ತು ರಚನಾತ್ಮಕ ಉಪಕ್ರಮಗಳು/ಚಟುವಟಿಕೆಗಳ ಬಗ್ಗೆ ತರಬೇತಿ ಲಭ್ಯವಿಲ್ಲ.

* ತರಗತಿಗಳಲ್ಲಿ ಓದನ್ನು ಕಲಿಸಲು ಸೂಕ್ತವಾದ ಸಾಹಿತ್ಯ ಸಾಮಗ್ರಿಗಳು ಮತ್ತು ಆಕರ್ಷಕ ಪಠ್ಯ ಪುಸ್ತಕಗಳು ಮತ್ತು ಗ್ರಂಥಾಲಯಗಳ ಬಳಕೆ ಆಗುತ್ತಿಲ್ಲ.

* ಅವಕಾಶ ವಂಚಿತ ಕುಟುಂಬದ ಮಕ್ಕಳು, ಶಿಕ್ಷಣದಲ್ಲಿ ಮೊದಲನೇ ಜನಾಂಗದ ಮಕ್ಕಳು ಓದು ಕಲಿಯುವ ಸಂದರ್ಭಗಳಲ್ಲಿ ಶಿಕ್ಷಕ ನಿರ್ದೇಶಿತ ಕಲಿಕೆಯ ಅವಕಾಶಗಳಿಂದ ದೂರ ಉಳಿದಿದ್ದಾರೆ ಹಾಗೂ ಸೂಕ್ತವಾದ ಓದುವ ಪಠ್ಯ ಸಾಮಗ್ರಿಗಳ ಲಭ್ಯತೆಯಿಂದಲೂ ಉಳಿದಿದ್ದಾರೆ.

**ಮಕ್ಕಳಿಗೆ ಓದನ್ನು ಕಲಿಸುವ ರಚನಾತ್ಮಕ ಉಪಕ್ರಮಗಳು :**

* ಮಕ್ಕಳ ಮನೆಯ ಭಾಷಾ, ಪರಿಸರದಲ್ಲಿ ಪರಿಚಯವಿರುವ ಭಾಷೆಗಳಲ್ಲಿ ಮಕ್ಕಳು ಹೊಂದಿರುವ ಭಾಷಾ ಸಾಮರ್ಥ್ಯದ ಹಿನ್ನೆಲೆಯಿಂದ ಶಾಲೆಯಲ್ಲಿ ಭಾಷಾ ಬೋಧನೆ ಆರಂಭಗೊಳ್ಳಬೇಕು.
* ಭಾಷಾ ಬೋಧನಾ ಕೊಠಡಿಯು ಉತ್ತಮವಾದ, ಆಕರ್ಷಕವಾದ ಓದುವ ಸಾಮಗ್ರಿ, ಸಾಹಿತ್ಯ ಮತ್ತು ಓದುವ ಪರಿಕರಗಳಿಂದ ಕೂಡಿರಬೇಕು. ಓದುವ ಕಾರ್ಡುಗಳು, ನೋಡಿ ಓದುವ ಸಚಿತ್ರ ಚಾರ್ಟುಗಳು, ಓದಲು ಸೂಚನೆಗಳನ್ನು ಹೊಂದಿರುವ ಚಾರ್ಟುಗಳು, ಚಿಹ್ನೆಗಳಿಂದ ಕೂಡಿದ ಓದುವ ಸಲಕರಣೆಗಳು, ಅಕ್ಷರ ಮತ್ತು ಪದಗಳಿಗೆ ಧ್ವನಿ ಸಂಯೋಜನೆ ಮಾಡಿ ಓದುವ ಸಾಮಗ್ರಿಗಳು ಮಕ್ಕಳಿಗೆ ಲಭ್ಯವಿರಬೇಕು. ವಿವಿಧ ಚಿತ್ರಗಳು, ಅಕ್ಷರಗಳ ರೂಪ ವಿನ್ಯಾಸ ಮತ್ತು ಸೂಕ್ತ ಧ್ವನಿ ಏರಿಳಿತ ಹಾಗೂ ಮುಖ ಭಾವಗಳ ಅಭಿನಯ ಇತ್ಯಾದಿಗಳ ಬಗ್ಗೆ ಪ್ರಾತ್ಯಕ್ಷಿಕವಾಗಿ ಓದು ಕಲಿಯಲು ಅವಕಾಶಗಳಿರಬೇಕು.
* ಓದು ಕಲಿಯಲು ಮತ್ತು ಅಭ್ಯಾಸ ಮಾಡಲು ನೆರವಾಗುವ ಪೂರಕ ಸಾಮಗ್ರಿಗಳಾದ ಕಥೆ ಪುಸ್ತಕಗಳು, ಕವನಗಳು, ಆಕರ್ಷಕ ಚಾರ್ಟುಗಳು, ಪಠ್ಯಗಳು ಮತ್ತು ವರ್ಣರಂಜಿತ ಕಾರ್ಡುಗಳು ಲಭ್ಯವಿರಬೇಕು.
* ಓದು, ಬರಹದಲ್ಲಿ ಮೊದಲ ಜನಾಂಗದ ಮಕ್ಕಳಿಗೆ ಆಕರ್ಷಕ ಎನಿಸುವ ಓದುವ ಸಾಮಗ್ರಿಗಳನ್ನು ಮುಕ್ತವಾಗಿ ಆಯ್ಕೆಮಾಡಿಕೊಂಡು ಓದುವ ಅವಕಾಶಗಳು ಲಭ್ಯವಿರಬೇಕು.

ಪ್ರಾಥಮಿಕ ಹಂತದ ಭಾಷಾ ಶಿಕ್ಷಣದಲ್ಲಿ ಭಾಷೆ ಶುದ್ಧತೆಗೆ ಹೆಚ್ಚು ಒತ್ತು ನೀಡದೇ ಸಂವಹನ, ಅಭಿವ್ಯಕ್ತಿ ಮತ್ತು ಪಾಲ್ಗೊಂಡು ಭಾಷೆಯನ್ನು ಬಳಸುವ ಕ್ರಿಯೆಗೆ ಒತ್ತು ನೀಡಬೇಕು. ಕಟ್ಟುನಿಟ್ಟಾಗಿ ಭಾಷಾ ಶುದ್ಧತೆಯನ್ನು ನಿರೀಕ್ಷಿಸಿದರೆ ಮಕ್ಕಳು ಭಾಷೆಯನ್ನು ಬಳಸುವ ಪ್ರಯತ್ನ ಮಾಡದೇ ನಿಷ್ಕ್ರಿಯರಾಗುತ್ತಾರೆ. ಆದುದರಿಂದ ವಿವಿಧ ಸಂದರ್ಭಗಳಲ್ಲಿ ಮುಕ್ತ ಸಂವಹನ ಮತ್ತು ಅಂತರ ಸಂಪರ್ಕ ಕ್ರಿಯೆಗಳಲ್ಲಿ ಮಕ್ಕಳನ್ನು ಪ್ರೋತ್ಸಾಹಿಸಬೇಕು. ಗುಂಪಿನ ಚರ್ಚೆಗಳು, ಅನಿಸಿಕೆ–ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸಂದರ್ಭಗಳು, ಓದಿ ಗ್ರಹಿಸುವ ಅಭ್ಯಾಸಗಳು, ಸಂವಹನ ಮತ್ತು ಕಥೆ ಹೇಳುವುದು ಮುಂತಾದ ಚಟುವಟಿಕೆಗಳನ್ನು ಸೃಷ್ಟಿಸಿಕೊಳ್ಳಬೇಕು.

**ಭಾಷಾ ಕಲಿಕೆಗೆ ಅಗತ್ಯ ಸಾಧನ ಸಲಕರಣೆಗಳು :**

ಮಕ್ಕಳು ಸಹಜವಾದ, ಆಕರ್ಷಕ ಹಾಗೂ ಜೀವಂತ ಸಂದರ್ಭಗಳಲ್ಲಿ ಚಟುವಟಿಕೆಗಳ ಮೂಲಕ ಭಾಷೆಯನ್ನು ಹೆಚ್ಚು ರಚನಾತ್ಮಕವಾಗಿ ಕಲಿಯಬಲ್ಲರು. ಆದುದರಿಂದ ಭಾಷಾ ಕಲಿಕೆಯ ಹಿನ್ನಲೆಯಲ್ಲಿ ರಚಿಸಲ್ಪಟ್ಟಿರುವ ಸಾಧನ ಸಾಮಗ್ರಿಗಳನ್ನು ಮಕ್ಕಳಿಗೆ ಒದಗಿಸಬೇಕು. ವಿವಿಧ ರೀತಿಯ ದೃಕ್–ಶ್ರವ್ಯ ಉಪಕರಣಗಳು, ಆಧುನಿಕ ತಾಂತ್ರಿಕ ಪರಿಕರಗಳು; ಆಕರ್ಷಕ ಪಠ್ಯ ಪುಸ್ತಕಗಳು; ಅಭ್ಯಾಸ ಪುಸ್ತಕಗಳು; ಚಿತ್ರ ಪುಸ್ತಕಗಳು; ಓದುವ ಕಾರ್ಡುಗಳು; ಗೋಡೆ ಪತ್ರಗಳು; ಕಥೆ ಪುಸ್ತಕ; ಸಾಕ್ಷ್ಯ ಚಿತ್ರಗಳು; ಸ್ವಯಂ ಕಲಿಕಾ ಸಾಮಗ್ರಿಗಳು; ಕಾಮಿಕ್ ಪುಸ್ತಕಗಳು; ಸಚಿತ್ರ

ಕಥಾಪುಸ್ತಕಗಳು ಮುಂತಾದವುಗಳನ್ನು ಮಕ್ಕಳು ಬಳಸುವ ಅವಕಾಶಗಳಿರಬೇಕು. ಇದರೊಂದಿಗೆ ಸಂವಹನ, ಕಥನ, ಗಾಯನ, ಅಭಿನಯ, ನೃತ್ಯ, ಜಾನಪದ ಆಚರಣೆಗಳು ಹಾಗೂ ಮಕ್ಕಳ ನಡುವಿನ ಅಂತರ ಸಂಬಂಧಗಳನ್ನು ಸೂಕ್ತವಾಗಿ ಬಳಸಬೇಕು. ಭಾಷಾ ಕಲಿಕೆಗಾಗಿ ಸ್ವತಂತ್ರವಾಗಿ ಭಾಷೆಯ ಬಳಕೆ, ಸೃಜನಶೀಲತೆ, ರಸಾನುಭವ, ಸೌಂದರ್ಯ ಪ್ರಜ್ಞೆ, ಬಹುಮುಖಿ ಚಿಂತನೆಗೆ ಪ್ರೇರಕವಾಗುವ ಸಾಧನಗಳನ್ನು ಬಳಸಬೇಕು. ಇಂತಹ ಸಾಧನ–ಸಲಕರಣೆಗಳನ್ನು ಅನುಭವಿಗಳು ಮತ್ತು ಪರಿಣಿತರು ಸಿದ್ಧಗೊಳಿಸಿ ಇವುಗಳನ್ನು ಕಾರ್ಯಾರ್ಥ ಪರೀಕ್ಷೆಗೆ ಒಳಪಡಿಸಿ ಪರಿಷ್ಕರಿಸಿ ಬಳಸಬೇಕು.

ಭಾಷಾ ತರಗತಿಯ ಕೊಠಡಿಯು ವೈವಿಧ್ಯ ರೀತಿಯ ಆಕರ್ಷಕವಾದ ನೋಡಿ ಕಲಿಯುವ ಸಾಧನ ಸಲಕರಣೆಗಳಿಂದ ವ್ಯವಸ್ಥೆ ಹೊಂದಿರಬೇಕು. ಚಾರ್ಟುಗಳು, ಗೋಡೆ ಪತ್ರಗಳು, ಚಿತ್ರಪಟಗಳು, ಪದ, ವಾಕ್ಯ, ಲೇಖನಚಿಹ್ನೆ, ಕಾಗುಣಿತಸಹಿತ ಓದುವ ಚಾರ್ಟುಗಳು, ಬರಹದ ಚಾರ್ಟುಗಳು, ಕಥೆ ಪುಸ್ತಕಗಳು, ಸ್ವಯಂ ಕಲಿಕಾ, ಸಾಧನಗಳು ಮಕ್ಕಳಿಗೆ ಲಭ್ಯವಾಗುವಂತೆ ಆಕರ್ಷಕವಾಗಿ ರೂಪುಗೊಳಿಸಿರಬೇಕು.

**ವರ್ಕ್ ಶೀಟ್–**

**ಜ್ಞಾನ ಕಟ್ಟಿಕೊಳ್ಳಲು ಇರುವ ಅವಕಾಶಗಳು**

(ಸಿರಿಗನ್ನಡ ಪ್ರ. ಭಾ. ಪಠ್ಯಪುಸ್ತಕಕ್ಕೆ ಸಂಬಂಧಿಸಿ)

| ಕ್ರ ಸಂ. | ಗದ್ಯ / ಪದ್ಯ ಪಾಠ | ಜ್ಞಾನವನ್ನು ಕಟ್ಟಿಕೊಳ್ಳಲು ಇರುವ ಅವಕಾಶಗಳು | ಇಲ್ಲದಿದ್ದರೆ ಹೇಗೆ ಅವಕಾಶ ಕಲ್ಪಿಸುವಿರಿ. |
|---|---|---|---|
| | | | |

# ಪಾಠ ಯೋಜನೆ ರಚನೆಗೆ ಮಾರ್ಗಸೂಚಿ

| ಕ್ರ. ಸಂ. | ಪಾಠ/ಪದ್ಯದ ಹೆಸರು | ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಕಲಿಕಾ ಸಾಧನಗಳು | ಸಿ.ಸಿ.ಇ. (ತಂತ್ರಗಳು) |
|---|---|---|---|---|---|
| ೧. | ಗದ್ಯಪಾಠ–೧ ಪಂಥಾಹ್ವಾನ | * ಹಳಗನ್ನಡ ಸಾಹಿತ್ಯವನ್ನು ಪರಿಚಯಿಸುವುದು | * ಹಳಗನ್ನಡ ಪದಗಳ ಕಾರ್ಡುಗಳನ್ನು ತಯಾರಿಸಿ, ಸಮಾನ ಅರ್ಥ ನೀಡುವ ಹೊಸ ಪದಗಳ ಕಾರ್ಡುಗಳನ್ನು ತಯಾರಿಸಿಕೊಳ್ಳುವುದು.<br>ಎರಡು ಗುಂಪುಗಳನ್ನಾಗಿ ಮಾಡಿ ಒಂದು ಗುಂಪಿಗೆ ಹಳಗನ್ನಡ ಪದಗಳ ಕಾರ್ಡ್‌ಗಳನ್ನು ಇನ್ನೊಂದು ಗುಂಪಿಗೆ ಹೊಸ ಕನ್ನಡ ಪದಗಳ ಕಾರ್ಡ್‌ಗಳನ್ನು ಕೊಟ್ಟು ಸಮಾನಾರ್ಥಕ ಪದಗಳ ಜೋಡಣೆ ಮಾಡಿಸುವುದು. | * ಕಾರ್ಡುಗಳು<br>* ಗುಂಪುಗಳು | * ಹೊಂದಿಸಿ ಬರೆಯಿರಿ.<br>* ಸಮಾನಾರ್ಥಕ ಪದಗಳನ್ನು ಬರೆಯಿರಿ.<br>* ತಪಶೀಲು ಪಟ್ಟಿ |
| | | | * ನಾಟಕಾಭಿನಯ:– ಪಾತ್ರಗಳ, ಹಂಚಿಕೆ ಮಾಡಿಕೊಂಡು ಅಭಿನಯಿಸುವುದು. | ವೇಷ ಭೂಷಣ | * ಪಾತ್ರಧಾರಿಗಳ ಧ್ವನಿ ಏರಿಳಿತಗಳನ್ನು ಹೇಳಿಸುವುದು |
| | ಕಲಿಕಾ ವಿಧಾನಗಳು<br>* ಕಥನ ವಿಧಾನ<br>* ಚರ್ಚಾ ವಿಧಾನ<br>* ನಾಟಕಾಭಿನಯ | | * ವಡ್ಡಾರಾಧನೆಯ ೧೯ ಕಥೆಗಳನ್ನು ಮಕ್ಕಳಿಗೆ ಪರಿಚಯಿಸುವುದು. | ಹೆಸರುಗಳನ್ನು ಬರೆದ ಕಾರ್ಡುಗಳು, ಕಥೆಗಳ ಹೆಸರುಗಳನ್ನು ಬರೆದ ಕಾರ್ಡುಗಳು | * ವಡ್ಡಾರಾಧನೆಯ ಕಥೆಗಳ ಹೆಸರು ಗಳನ್ನು ಹೇಳಿರಿ |

| ಕ್ರ. ಸಂ. | ಪಾಠ/ಪದ್ಯದ ಹಸರು | ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಕಲಿಕಾ ಸಾಧನಗಳು | ಸಿ.ಸಿ.ಇ. (ತಂತ್ರಗಳು) |
|---|---|---|---|---|---|
| ೨. | ಗದ್ಯಪಾಠ–೨ ಪ್ರಾಮಾಣಿಕತೆ (ಆಧುನಿಕ ಸಣ್ಣಕಥೆ) | * ಕಲಿಕಾರ್ಥಿಗಳು ಪ್ರಾಮಾಣಿಕತೆ ಮೌಲ್ಯಗಳನ್ನು ಬೆಳೆಸಿಕೊಳ್ಳುವರು<br>* ಸಾಮಾಜಿಕ ಮೌಲ್ಯಗಳನ್ನು ತಿಳಿಸುವುದು<br>* ಓದುವ ಸಾಮರ್ಥ್ಯ ಬೆಳೆಸುವುದು | * ರಾಮಾಯಣ, ಸತ್ಯಹರಿಶ್ಚಂದ್ರರ ಕಥೆಗಳನ್ನು ಸಂಗ್ರಹಿಸಿ ಓದುವುದು.<br>* ಸಾಮಾಜಿಕ ಸೇವೆ ಮಾಡಿದ ವ್ಯಕ್ತಿಗಳ ಪ್ರಾಮಾಣಿಕ ಕಾರ್ಯಗಳ ಬಗ್ಗೆ ದಿನಪತ್ರಿಕೆ, ವಾರಪತ್ರಿಕೆಯಿಂದ ಸಂಗ್ರಹಿಸುವುದು. | * ದಿನಪತ್ರಿಕೆಗಳು<br>* ವಾರಪತ್ರಿಕೆಗಳು<br>* ಮಾಸಪತ್ರಿಕೆಗಳು | * ಸ್ಪಷ್ಟವಾಗಿ ಓದಿಸುವುದು ತಪಶೀಲು ಪಟ್ಟಿ<br>* ಸಾಮಾಜಿಕ ಸೇವೆಗಳನ್ನು ವಿವರಿಸಿರಿ |
| | | | * ಪ್ರಾಮಾಣಿಕತೆ ಬಿಂಬಿಸುವ ಕಥೆ ಬರೆಯಲು ಕಲಿಕಾರ್ಥಿಗಳಿಗೆ ಪ್ರೇರೇಪಿಸುವುದು, ಬರೆದ ಕಥೆಗಳ ಅಲ್ಬಮ್ ತಯಾರಿಸುವುದು | * ಅಲ್ಬಮ್ ತಯಾರಿಕೆ | * ಕಥೆಯ ಮಧ್ಯದಲ್ಲಿ ಪ್ರಶ್ನೆಗಳನ್ನು ಕೇಳುವುದು |
| | | | * ‘ದುರಾಸೆಯ ಫಲ’ ಎಂಬ ಮೀನುಗಾರನ ನಾಟಕ ಮಾಡಿಸುವುದು. | * ರಟ್ಟಿನಿಂದ ತಯಾರಿಸಿದ ಮೀನುಗಳು, ಬಲೆ.<br>* ವೇಷಭೂಷಣ | * ಧ್ವನಿಯ ಏರಿಳಿತದಿಂದ ಸಂಭಾಷಣೆ ಹೇಳಿಸುವುದು |
| | ಕಲಿಕಾ ವಿಧಾನಗಳು<br>* ಚರ್ಚಾ ವಿಧಾನ<br>* ಕಥನ ಪದ್ಧತಿ<br>* ನಾಟಕಾಭಿನಯ | | * ಗ್ರಂಥಾಲಯದಲ್ಲಿಯ ಕಥಾಪುಸ್ತಕಗಳನ್ನು ಓದಲು ಕಲಿಕಾರ್ಥಿಗಳಿಗೆ ನೀಡುವುದು. ಓದಿದ ಕಥೆಗಳನ್ನು ಕಥಾರೂಪದಲ್ಲಿ ಹೇಳುವುದು. | * ಪುಸ್ತಕಗಳು | * ಕಥೆ ಹೇಳುವುದರ ಮೂಲಕ ಮೌ.ಮಾ. ಮಾಡುವುದು. |

| ಕ್ರ. ಸಂ. | ಪಾಠ/ಪದ್ಯದ ಹಸರು | ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಕಲಿಕಾ ಸಾಧನಗಳು | ಸಿ.ಸಿ.ಇ. (ತಂತ್ರಗಳು) |
|---|---|---|---|---|---|
| ೩. | ಗದ್ಯಪಾಠ–೩ ಬೆಡಗಿನ ತಾಣ ಜಯಪುರ (ಪ್ರವಾಸ ಸಾಹಿತ್ಯ) | * ಪ್ರವಾಸದ ಸ್ಥಳಕ್ಕೆ ಸಂಬಂಧಿಸಿದ ಪುಸ್ತಕ ಓದುವುದು’<br>* ಶೈಕ್ಷಣಿಕ ಪ್ರವಾಸ ಕೈಗೊಂಡು ಚರ್ಚಿಸಿ ದಾಖಲಿಸುವುದು | * ಪ್ರೇಕ್ಷಣೀಯ ಸ್ಥಳಗಳ ಚಿತ್ರಪಟಗಳನ್ನು ಸಂಗ್ರಹಿಸುವುದು, ಗುಂಪುಗಳನ್ನಾಗಿ ಮಾಡಿ ಪ್ರತಿ ಗುಂಪಿಗೆ ಒಂದೊಂದು ಚಿತ್ರಪಟವನ್ನು ನೀಡಿ ಕಲಿಕಾರ್ಥಿಗಳು ಪ್ರಬಂಧ ಬರೆಯುವುದು<br>* ಶೈಕ್ಷಣಿಕ ಪ್ರವಾಸ ಕೈಗೊಂಡು ತಾನು ನೋಡಿದ ಸ್ಥಳಗಳ ಬಗ್ಗೆ ಪ್ರವಾಸ ಕಥನ ಬರೆಯುವುದು | * ಚಿತ್ರಪಟ<br>* ಪ್ರವಾಸ | * ಪ್ರವಾಸ ಕಥನ ಎಂದರೇನು ?<br>* ಪ್ರವಾಸಕ್ಕೆ ಹೋಗಲು ತೆಗೆದು ಕೊಂಡು ಹೋಗ ಬೇಕಾದ ವಸ್ತುಗಳ ಪಟ್ಟಿ ಮಾಡಿ. |
| | | | * ಗ್ರಂಥಾಲಯದಲ್ಲಿಯ ಪ್ರವಾಸ ಕಥನದ ಪುಸ್ತಕಗಳನ್ನು ಓದುವುದು | * ಪುಸ್ತಕಗಳು | * ಓದಿದ ಪ್ರವಾಸ ಕಥನ ಗುಂಪಿನಲ್ಲಿ ಚರ್ಚಿಸುವುದು, ಗಮನಿಸುವುದು. |
| | ಕಲಿಕಾ ವಿಧಾನಗಳು<br>* ವಿವರಣಾತ್ಮಕ ವಿಧಾನ<br>* ಪ್ರಬಂಧ ಲೇಖನ<br>* ಕ್ಷೇತ್ರ ಭೇಟಿ<br>* ಯೋಜನಾ ವಿಧಾನ | | * ಪ್ರೇಕ್ಷಣೀಯ ಸ್ಥಳಗಳ ಚಿತ್ರಗಳನ್ನು ಸಂಗ್ರಹಿಸಿ ಬಿಳಿ ಹಾಳೆಗೆ ಅಂಟಿಸಿ ಕೆಳಗೆ ಅದರ ವಿವರ ಬರೆದು ಅಲ್ಬಮ್ ತಯಾರಿಸುವುದು.<br>* ಪ್ರೇಕ್ಷಣಿಯ ಸ್ಥಳಗಳ ಸಿ.ಡಿ.ಗಳನ್ನು ಬಳಸಿ ಚಿತ್ರಗಳನ್ನು ಟಿ.ವಿ.ನಲ್ಲಿ ತೋರಿಸುವುದು, ವಿವರಿಸುವುದು. | * ಚಿತ್ರಗಳು<br>* ಶೈಕ್ಷಣಿಕ ಸ್ಥಳಗಳ ಸಿ.ಡಿ.ಗಳು | * ಯೋಜನಾ ಕಾರ್ಯ<br>* ಪ್ರಶ್ನೆಗಳ ಮೂಲಕ ಚರ್ಚೆ. |

| ಕ್ರ. ಸಂ. | ಪಾಠ/ಪದ್ಯದ ಹಸರು | ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಕಲಿಕಾ ಸಾಧನಗಳು | ಸಿ.ಸಿ.ಇ. (ತಂತ್ರಗಳು) |
|---|---|---|---|---|---|
| ೪. | ಗದ್ಯಪಾಠ–೪ ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣ (ವ್ಯಕ್ತಿ ಚಿತ್ರ) | * ಮಹಾನ್ ವ್ಯಕ್ತಿಗಳ ಆದರ್ಶಗಳನ್ನು ತಿಳಿಯುವುದು | * ರವಿವಾರದಂದು ಸಾಪ್ತಾಹಿಕ ಸೌರಭದಲ್ಲಿ ಬರುವ ವ್ಯಕ್ತಿ ಚಿತ್ರಣಗಳನ್ನು ಸಂಗ್ರಹಿಸುವುದು. ಅವುಗಳನ್ನು ತರಗತಿ ಕೋಣೆಯಲ್ಲಿ ಚರ್ಚಿಸುವುದು. | * ಸಾಪ್ತಾಹಿಕ ಸೌರಭ, ಸುಧಾ, ತರಂಗ. | * ತಾವು ಸಂಗ್ರಹಿಸಿದ ಮಹಾನ್ ವ್ಯಕ್ತಿಗಳ ಹೆಸರು ಪಟ್ಟಿಮಾಡಿ |
| | | * ಪ್ರಮುಖ ವ್ಯಕ್ತಿಗಳ ಜೀವನ ಚರಿತ್ರೆ ತಿಳಿಯುವುದು | * ಶಾಲಾ ಗ್ರಂಥಾಲಯದಲ್ಲಿರುವ ಮಹಾನ್ ವ್ಯಕ್ತಿಗಳ ಸ್ವಾತಂತ್ರ್ಯ ಯೋಧರ ಹೋರಾಟಗಾರರ ಜೀವನ ಚರಿತ್ರೆಯ ಪುಸ್ತಕಗಳನ್ನು ಕಲಿಕಾರ್ಥಿಗಳಿಗೆ ಓದಲು ಕೊಟ್ಟು ಗುಂಪಿನಲ್ಲಿ ಚರ್ಚಿಸಿ ಅವರ ಬಗ್ಗೆ ಪ್ರಬಂಧ ಲೇಖನ ಬರೆಯುವುದು. ಭಾಷಣ ಸ್ಪರ್ಧೆ ಏರ್ಪಡಿಸುವುದು. | * ಪುಸ್ತಕಗಳು<br>* ಬಹುಮಾನಗಳು | * ತಾವು ಓದಿದ ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆ ಬರೆಯಿರಿ.<br>* ದರ್ಜಾ ಮಾಪನ |
| | ಬೋಧನಾ ವಿಧಾನಗಳು<br>* ವಿವರಣಾತ್ಮಕ ವಿಧಾನ<br>* ಚರ್ಚಾ ವಿಧಾನ<br>* ಯೋಜನಾ ವಿಧಾನ<br>* ಏಕ ಪಾತ್ರಾಭಿನಯ | | * ವಿದ್ಯಾರ್ಥಿಗಳ ಮನೆಯಲ್ಲಿ, ಸಂಬಂಧಿಕ ರಲ್ಲಿ ಊರಿನಲ್ಲಿ ತಮಗೆ ಗೊತ್ತಿರುವ ಪ್ರಮುಖ ವ್ಯಕ್ತಿಗಳ, ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ವ್ಯಕ್ತಿ ಚಿತ್ರಣ ಬರೆದು ಯೋಜನೆ ತಯಾರಿಸುವುದು. | * ಯೋಜನೆ | * ಮಹಾನ್ ವ್ಯಕ್ತಿಗಳ ಭಾವಚಿತ್ರ ಅಂಟಿಸಿ ವಿವರಣೆ ಬರೆಯಿರಿ. |
| | | | * ಮಹಾನ್ ವ್ಯಕ್ತಿಗಳ ವೇಷಧಾರಿಗಳಾಗಿ ಏಕ ಪಾತ್ರಾಭಿನಯದಲ್ಲಿ ಅವರ ಜೀವನ ಮೌಲ್ಯಗಳನ್ನು ಹೇಳುವುದು. | * ವೇಷಭೂಷಣ | * ಏಕ ಪಾತ್ರಾಭಿನಯ ಮಾಡಿರಿ. |

| ಕ್ರ. ಸಂ. | ಪಾಠ/ಪದ್ಯದ ಹೆಸರು | ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಕಲಿಕಾ ಸಾಧನಗಳು | ಸಿ.ಸಿ.ಇ. (ತಂತ್ರಗಳು) |
|---|---|---|---|---|---|
| ೫. | ಗದ್ಯಪಾಠ–೫<br>ಸಮಾಗಮ (ನಾಟಕ)<br><br>ಬೋಧನಾ ವಿಧಾನಗಳು<br>* ನಾಟಕಾಭಿನಯ ವಿಧಾನ<br>* ಚರ್ಚಾ ವಿಧಾನ<br>* ಕಥನ ವಿಧಾನ | * ಸಹಜ ಸನ್ನಿವೇಶಗಳಲ್ಲಿ ಹಾವಭಾವಗಳೊಂದಿಗೆ ಮಾತನಾಡುವುದು<br>* ಘಟನೆಯ ಮುಖ್ಯಾಂಶ ಗಳನ್ನು ತನ್ನ ಮಾತುಗಳಲ್ಲಿ ವ್ಯಕ್ತಪಡಿಸುವುದು<br>* ಪ್ರಾದೇಶಿಕ ಕಲೆಗಳನ್ನು ಅರ್ಥ ಮಾಡಿಕೊಳ್ಳುವುದು<br>* ಸಂವಾದ/ಚರ್ಚೆ/ ನಾಟಕಗಳನ್ನು ಆಲಿಸು ವುದರ ಜೊತೆಗೆ ಅರ್ಥ ಮಾಡಿಕೊಳ್ಳುವುದು<br>* ಅಪರಿಚಿತ ಸನ್ನಿವೇಶದ ಘಟನೆಯನ್ನು ಆಲಿಸಿ ಸಂದರ್ಭೋಚಿತವಾಗಿ ಅಭಿನಯಿಸುವುದು<br>* ಪೌರಾಣಿಕ ನಾಟಕ ದಲ್ಲಿನ ಸಂಭಾಷಣೆಯನ್ನು ಅರ್ಥಮಾಡಿಕೊಳ್ಳುವುದು. | * ಪೌರಾಣಿಕ ನಾಟಕ ಅಥವಾ ಚಲನಚಿತ್ರದ ಧ್ವನಿಸುರುಳಿಯನ್ನು ಕೇಳಿಸುವುದು/ಊರು ಭಂಗ ನಾಟಕ ಓದಿಸುವುದು. ಉದಾ. ಬಬ್ರುವಾಹನ.<br>* ನಾಲ್ಕು ಉಪಘಟಕಗಳಲ್ಲಿ – ೪ ಗುಂಪಿಗೆ ಹಂಚಿ ನಾಟಕ ಪ್ರದರ್ಶನ ನೀಡಲು ತಿಳಿಸುವುದು.<br>* ಸಮಾಗಮ ನಾಟಕವನ್ನು ಗದ್ಯರೂಪಕ್ಕೆ ರೂಪಾಂತರಿಸುವುದು. | * ಮಹಾಭಾರತದ ಪಾಂಡವರ ಹಿಡಿಂಬೆ, ಘಟೋತ್ಕಚ ಕಾಲ್ಪನಿಕ ಚಿತ್ರಗಳು<br>* ಪೌರಾಣಿಕ ನಾಟಕಗಳ ಉಡುಪು. | * ಮೌಖಿಕಕ್ಕೆ ಪ್ರಶ್ನೆಗಳು<br>* ತಪಶೀಲು ಪಟ್ಟಿ<br>* ದರ್ಜಾ ಮಾಪನ |

| ಕ್ರ. ಸಂ. | ಪಾಠ/ಪದ್ಯದ ಹಸರು | ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಕಲಿಕಾ ಸಾಧನಗಳು | ಸಿ.ಸಿ.ಇ. (ತಂತ್ರಗಳು) |
|---|---|---|---|---|---|
| ೬. | ಗದ್ಯಪಾಠ–೬ ಹರಲೀಲೆ | * ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಅರಿಯುವುದು.<br>* ನಡುಗನ್ನಡ ಶೈಲಿಯನ್ನು ಅರ್ಥ ಮಾಡಿಕೊಳ್ಳುವುದು.<br>* ವರ್ಣಿಸುವ ಬಗೆ ತಿಳಿಯುವುದು. | * ಹರಲೀಲೆ ಗದ್ಯಭಾಗವನ್ನು ನಾಟಕವಾಗಿ ರೂಪಾಂತರಿಸಿ ಅಭಿನಯಿಸುವುದು. | * ಸರಳ ಮಿಂಚು ಪಟ್ಟಿಗಳು.<br>* ಪದ ವಿಂಗಡಿಸಿರುವ ಬಿಡಿಸಿರುವ ಪದಗಳು ಇರುವವು. | * ಮೌಖಿಕ ಪ್ರಶ್ನೆಗಳು.<br>* ತಪಶೀಲು ಪಟ್ಟಿ |
| ೭. | ಗದ್ಯಪಾಠ–೭ 'ಇತಿಹಾಸದ ಚಕ್ಕಡಿ' | * ನಿರರ್ಗಳವಾಗಿ ತನ್ನ ಭಾವನೆಗಳನ್ನು ಮಾತಿನಲ್ಲಿ ಅಥವಾ ಬರವಣಿಗೆಯಲ್ಲಿ ವ್ಯಕ್ತಪಡಿಸುವುದು.<br>* ಆಲಿಸಿದ ಘಟನೆ, ಓದಿದ ಘಟನೆಗಳನ್ನು ಅರ್ಥೈಸಿಕೊಳ್ಳುವುದು.<br>* ಸಮಾಜದ ವ್ಯಕ್ತಿಗಳೊಂದಿಗೆ ಸಾಂದರ್ಭಿಕವಾಗಿ ವ್ಯವಹಾರಿಕವಾಗಿ ಮಾತನಾಡುವುದನ್ನು ಕಲಿಯುವುದು. | * ವಿದ್ಯಾರ್ಥಿಗಳು ತಮ್ಮ ಅನುಭವಗಳನ್ನು ದಾಖಲಿಸುವುದು.<br>* ಕಲಿಕಾರ್ಥಿಗಳು ತಮ್ಮ ಮನೆಯ ಹಿರಿಯರ ಅನುಭವಗಳನ್ನು ಆಲಿಸಿ ದಾಖಲಿಸುವುದು.<br>* ೮ನೇ ತರಗತಿಗೆ ದಾಖಲಾಗಿ ತರಗತಿಗೆ ಹಾಜರಾದ ಮೊದಲ ದಿನದ ಅನುಭವಗಳನ್ನು ಹಂಚಿಕೊಳ್ಳಲು ಅವಕಾಶ ಕಲ್ಪಿಸುವುದು.<br>* ವಿದ್ಯಾರ್ಥಿ ತನ್ನ ಯಶಸ್ಸಿನ ಹಾದಿಯನ್ನು ತಿಳಿಸಲು ಅವಕಾಶ ಮಾಡಿಕೊಡುವುದು. (ಅನಿಸಿಕೆ ವ್ಯಕ್ತಪಡಿಸುವುದು) | * ಅರವಿಂದ ಮಾಲಗತ್ತಿಯವರ ಭಾವಚಿತ್ರ<br>* ದೃಶ್ಯಾವಳಿ, ಧ್ವನಿಸುರುಳಿ.<br>* ಆತ್ಮಕಥೆ (ಗಾಂಧೀಜಿ) (ನನ್ನ ಸತ್ಯಾನ್ವೇಷಣೆ)<br>* ಪ್ರಸಿದ್ಧ ವ್ಯಕ್ತಿಗಳು ತಮ್ಮ ಅನುಭವಗಳನ್ನು ಹೇಳುವ ದೃಶ್ಯಾವಳಿ (ಸಿ.ಡಿ.) | * ವೀಕ್ಷಿಸಿದ ದೃಶ್ಯಾವಳಿ ಬಗ್ಗೆ ವಿದ್ಯಾರ್ಥಿಗಳ ಅನುಭವ ಪಡೆಯುವುದು.<br>* ತಪಶೀಲು ಪಟ್ಟಿ. |

| ಕ್ರ. ಸಂ. | ಪಾಠ/ಪದ್ಯದ ಹಸರು | ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಕಲಿಕಾ ಸಾಧನಗಳು | ಸಿ.ಸಿ.ಇ. (ತಂತ್ರಗಳು) |
|---|---|---|---|---|---|
| | ಕಲಿಕಾ ವಿಧಾನಗಳು | * ಮಕ್ಕಳ ದಿನಾಚರಣೆ, ವಾರ್ಷಿಕೋತ್ಸವ ಮುಂತಾದ ಸಮಾರಂಭಗಳನ್ನು ನಿರ್ಭಯವಾಗಿ ವ್ಯಕ್ತಪಡಿಸುವುದು.<br>* ಕನ್ನಡದಲ್ಲಿನ ಪ್ರಖ್ಯಾತ ವ್ಯಕ್ತಿಗಳ ಆತ್ಮಚರಿತ್ರೆಗಳನ್ನು ಓದುವುದು. | | * ಪ್ರಸಿದ್ಧ ವ್ಯಕ್ತಿಗಳ ಜೀವನ ಚರಿತ್ರೆಗೆ ಸಂಬಂಧಪಟ್ಟ ವಿವಿಧ ಚಿತ್ರಗಳು, ಬಾಲ್ಯ ಶಿಕ್ಷಣ ವೃತ್ತಿ, ಸಾಧನೆ ಇತ್ಯಾದಿ (ವಿಶ್ವೇಶ್ವರಯ್ಯ) | |
| ೮. | ಗದ್ಯಪಾಠ–೮<br>ಅಚ್ಚರಿಯ ಜೀವಿ<br>'ಇಂಬಳ' | * ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳುವುದು<br>* ವೈಜ್ಞಾನಿಕ ಲೇಖನಗಳನ್ನು ಓದಿ ತನ್ನ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಲು ಸಮರ್ಥವಾಗುವುದು. | * ಉಪಕಾರಿ ಜೀವಿಗಳ ಬಗ್ಗೆ ಪ್ರಬಂಧ ರಚನೆ ಸ್ಪರ್ಧೆ. ಉದಾ:– ಎರೆಹುಳು.<br>* ಕೀಟ, ಹಾವು ಮುಂತಾದವುಗಳ ಕೂಡ ಮಾನವನಿಗೆ ಸಹಕಾರಿ ಎಂಬುದರ ಕುರಿತು ಮತ್ತು ಇತರ ಜೀವಿಗಳ ವಿಸ್ಮಯ ಜೀವನ ಕುರಿತು ಉಪನ್ಯಾಸ ಕಾರ್ಯಕ್ರಮ.<br>* ಎರೆಗೊಬ್ಬರ ತಯಾರಿಕಾ ಘಟಕಕ್ಕೆ ಭೇಟಿ.<br>* ಪರಿಸರ ಮಾಲಿನ್ಯ/ಸಮತೋಲನ ನೀರಿನ ಸಂರಕ್ಷಣೆ ಬಗೆಗಿನ & ಸಾಕ್ಷ್ಯಚಿತ್ರಗಳನ್ನು ಪ್ರದರ್ಶನ ಏರ್ಪಡಿಸುವುದು & ಭಾಷಣ ಸ್ಪರ್ಧೆಗಳನ್ನು ಏರ್ಪಡಿಸುವುದು. | * ಇಂಬಳದ ಚಿತ್ರ<br>* ಲೇಖಕರ ಭಾವಚಿತ್ರ<br>* ನಾರು ಹುಣ್ಣಿನ ಚಿತ್ರ<br>* ಚಾರಣ ಹೊರಟವರ ಚಿತ್ರ<br>* ಮಲೆನಾಡಿನ ಪ್ರಾಕೃತಿಕ ಚಿತ್ರ<br>* ಜಿಗಣಿ ದೃಶ್ಯಾವಳಿ (ಚಲಿಸುವ ಜಿಗಣಿಗಳು) | * ಪ್ರಶ್ನೆಗಳು ತಪಶೀಲು ಪಟ್ಟಿ<br>* ಪ್ರಬಂಧ ಸ್ಪರ್ಧೆ<br>* ಭಾಷಣ ಸ್ಪರ್ಧೆ |

| ಕ್ರ. ಸಂ. | ಪಾಠ/ಪದ್ಯದ ಹಸರು | ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಕಲಿಕಾ ಸಾಧನಗಳು | ಸಿ.ಸಿ.ಇ. (ತಂತ್ರಗಳು) |
|---|---|---|---|---|---|
| | ಕಲಿಕಾ ವಿಧಾನಗಳು<br>* ವಿವಿರಣಾತ್ಮಕ ವಿಧಾನ<br>* ಚರ್ಚಾ ವಿಧಾನ<br>* ಪ್ರಶ್ನೋತ್ತರ ವಿಧಾನ. | * ಹೊಸ ವಿಷಯಗಳನ್ನು ಆಲಿಸಿ ಅರ್ಥೈಸಿಕೊಂಡು ಏಕೆ? ಹೇಗೆ? ಹಾಗಾಗದಿದ್ದರೆ ಎಂಬ ಪ್ರಶ್ನೆಗಳಿಗೆ ಉತ್ತರಿಸಲು ಸಮರ್ಥವಾಗುವುದು. | | | |
| ೯. | ಗದ್ಯಪಾಠ–೯ ಜನಪದ ಕಲೆಗಳ ವೈಭವ (ಜಾನಪದ) | * ಸಾಹಿತ್ಯದ ವಿವಿಧ ಪ್ರಕಾರಗಳನ್ನು ತಿಳಿಯುವುದು.<br>* ಪದಗಳ ಧ್ವನಿಸಾಮ್ಯತೆ ಮತ್ತು ಧ್ವನಿ ವ್ಯತ್ಯಾಸಗಳನ್ನು ಅರ್ಥಮಾಡಿಕೊಳ್ಳುವುದು. | * ಮನರಂಜನಾ ಮಾಧ್ಯಮಗಳನ್ನು ಪಟ್ಟಿ ಮಾಡಿಸುವುದು.<br>* ಚಿತ್ರಪಟವನ್ನು ತೋರಿಸುತ್ತ ಪೂರ್ವ ಕಥೆಯನ್ನು ವಿವರಿಸುವುದು.<br>* ಶಾಲೆಯಲ್ಲಿ ಜಾನಪದ ನೃತ್ಯ, ಕೋಲಾಟ, ನಾಟಕ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮೂಡಿಸುವುದು. | * ಮಿಂಚುಪಟ್ಟಿ<br>* ಚಿತ್ರಪಟ<br>* ಕೋಲು, ಗೆಜ್ಜೆ, ವೇಷಭೂಷಣ. | * ಪ್ರಶ್ನೆಗಳು, ತಪಶೀಲು ಪಟ್ಟಿ<br>* ಸವಾಲು–ಜವಾಬು (ಒಗಟು ಬಿಡುಸುವುದು) |

| ಕ್ರ. ಸಂ. | ಪಾಠ/ಪದ್ಯದ ಹಸರು | ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಕಲಿಕಾ ಸಾಧನಗಳು | ಸಿ.ಸಿ.ಇ. (ತಂತ್ರಗಳು) |
|---|---|---|---|---|---|
| | ಕಲಿಕಾ ವಿಧಾನಗಳು<br>* ವಿವರಣಾತ್ಮಕ ವಿಧಾನ<br>* ಅಭಿನಯ ವಿಧಾನ | * ಜನಪದ ಕಲೆಗಳ ಬಗ್ಗೆ ಅರಿವು ಮೂಡಿಸುವುದು. | * ಜನಪದ ತ್ರಿಪದಿಗಳ ಗಾಯನ<br>* ರೇಡಿಯೋದಲ್ಲಿ ಪ್ರಸಾರವಾಗುವ ಜಾನಪದದ ಹಾಡುಗಳು, ಸೋಬಾನ ಪದ/ಬೀಸುವ ಪದಗಳನ್ನು ಕೇಳಿಸುವುದು, ಪಾರಿಜಾತದಂತ ಬೈಲಾಟಗಳನ್ನು ಕೇಳಿಸುವುದು. | * ರೇಡಿಯೋ | * ಮಕ್ಕಳಿಂದ ಜಾನಪದ ಪದ್ಯಗಳನ್ನು ಹಾಡಿಸುವುದು. |
| ೧೦. | ಪದ್ಯಪಾಠ–೧<br>ಬಲಿಯ–ನಿತ್ತೊಡೆ<br>ಮುನಿವೆಂ ಹಳಗನ್ನಡ<br>(ಕಂದ) | * ಹಳಗನ್ನಡ ಸಾಹಿತ್ಯವನ್ನು ವಿಶೇಷವಾಗಿ ಪರಿಚಯಸುವುದು.<br>* ಪ್ರಸ್ತುತ ಪದ್ಯಭಾಗವನ್ನು ಪದ ವಿಭಾಗದೊಂದಿಗೆ ತರ್ಕಬದ್ಧವಾಗಿ ವಾಚಿಸುವುದು. | * ವಿಂಗಡಿಸಿ ಬರೆದ ಪದ್ಯಗಳನ್ನು ಹಾಗೂ ಸಮಾನಾರ್ಥಕ ಪದಗಳ ಕಾರ್ಡಗಳನ್ನು ತಯಾರಿಸಿಟ್ಟು ಕೊಳ್ಳುವುದು<br>* ಎರಡು ಗುಂಪುಗಳನ್ನಾಗಿ ವಿಭಾಗ ಮಾಡಿ ಒಂದು ಗುಂಪಿಗೆ ವಿಂಗಡಿಸಿ ಬರೆದ ಪದ್ಯ ಹಾಗೂ ಇನ್ನೊಂದು ಗುಂಪಿಗೆ ಹೊಸಗನ್ನಡ ಪದಗಳ ಕಾರ್ಡುಗಳನ್ನು ಕೊಟ್ಟು ಪದಗಳ ಜೋಡಣೆ ಮಾಡಿಸುವುದು. | * ಕಾರ್ಡುಗಳು<br>* ವೇಷಭೂಷಣ<br>* ಜನ್ನನ ಭಾವಚಿತ್ರ<br>* ಯಶೋಧರ ಚರಿತ್ರೆ ಪುಸ್ತಕ<br>* ಹಳೆಬೀಡು ಬೇಲೂರಿನ ಚಿತ್ರಗಳು | * ಬಹುಆಯ್ಕೆ ಪ್ರಶ್ನೆಗಳು<br>* ಹೊಂದಿಸಿ ಬರೆಯುವ ಪ್ರಶ್ನೆಗಳು<br>* ಸಮಾನಾರ್ಥಕ ಪದಗಳು<br>* ವ್ಯಕ್ತಿಗಳ ಪರಿಚಯ<br>* ಸ್ವಂತ ವಾಕ್ಯಗಳು<br>* ಸರಳ ಕಥೆ ರಚನೆ |

| ಕ್ರ. ಸಂ. | ಪಾಠ/ಪದ್ಯದ ಹಸರು | ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಕಲಿಕಾ ಸಾಧನಗಳು | ಸಿ.ಸಿ.ಇ. (ತಂತ್ರಗಳು) |
|---|---|---|---|---|---|
| | ಕಲಿಕಾ ವಿಧಾನಗಳು<br>* ಕಥನ ವಿಧಾನ<br>* ಮುಕ್ತ ಚರ್ಚಾ ವಿಧಾನ<br>* ನಾಟಕಾಭಿನಯ ವಿಧಾನ<br>* ಕಥೆ ಬರೆಯುವ ವಿಧಾನ | * ಧ್ವನಿ ಏರಿಳಿತಗಳೊಂದಿಗೆ ಗಾಯನ ಮಾಡುವುದು. | * ನಾಟಕಾಭಿನಯ:–<br>ಹಳಗನ್ನಡ ಪದ್ಯವನ್ನು ಹೊಸಗನ್ನಡಕ್ಕೆ ಅನುವಾದಿಸಿ ಪಾತ್ರಗಳನ್ನು ಹಂಚಿಕೊಂಡು ಅಭಿನಯಿಸುವುದು.<br>* ಅಹಿಂಸೆಯ ಮಹತ್ವ ಹಾಗೂ ಮಾರಿದತ್ತನ ಮನಃ ಪರಿವರ್ತಣೆಯನ್ನು ಮಕ್ಕಳಿಗೆ ವಿಶೇಷವಾಗಿ ತಿಳಿಸುವುದು. | * ಕೇಶಿರಾಜನ ಶಬ್ದಮಣಿ ದರ್ಪಣ | * ಛಂದಸ್ಸಿನ ಪರಿಚಯ |
| ೧೧. | ಪದ್ಯಪಾಠ–೨<br>ರಮ್ಯ ಸೃಷ್ಟಿ (ಆಧುನಿಕ) | * ಆಧುನಿಕ ಸಾಹಿತ್ಯದ ಪರಿಚಯ<br>* ಹೊಸ ಪದ್ಯಗಳ ಪರಿಚಯ | * ಪದ್ಯಗಳನ್ನು ಕಾರ್ಡುಗಳಲ್ಲಿ ತಯಾರಿಸಿ ಸುಶ್ರಾವ್ಯವಾಗಿ ಹಾಡಿಸುವುದು.<br>* ಸರಳ ಸಾರಾಂಶವನ್ನು ಕಾರ್ಡುಗಳಲ್ಲಿ ತಯಾರಿಸಿಟ್ಟು ಕೊಳ್ಳುವುದು, ಹೇಳಿಸುವುದು.<br>* ಹೊಸ ಪದಗಳ ಪರಿಚಯ, ಕಾರ್ಡುಗಳ ಮೂಲಕ. ೩ ಗುಂಪು ಮಾಡಿ ವಿತರಿಸಿ ಚಟುವಟಿಕೆ ಮಾಡಿಸುವುದು. | * ಕಾರ್ಡುಗಳು<br>* ಪ್ರಕೃತಿ ಚಿತ್ರಗಳು<br>* ಮಧುರ ಚೆನ್ನರ ಭಾವಚಿತ್ರ<br>* ನನ್ನ ನಲ್ಲ ಕವನ ಸಂಕಲನ. | * ಪಠ್ಯದ ಪೋಷಕ ಅಭ್ಯಾಸದ ಅಳವಡಿಕೆ.<br>* ಸೈದ್ಧಾಂತಿಕ ಭಾಷಾಭ್ಯಾಸದಲ್ಲಿ ಅಲಂಕಾರಗಳ ಅಳವಡಿಕೆ. |

| ಕ್ರ. ಸಂ. | ಪಾಠ/ಪದ್ಯದ ಹಸರು | ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಕಲಿಕಾ ಸಾಧನಗಳು | ಸಿ.ಸಿ.ಇ. (ತಂತ್ರಗಳು) |
|---|---|---|---|---|---|
| | ಕಲಿಕಾ ವಿಧಾನಗಳು<br>* ಪದ್ಯವನ್ನು ಭಾವಪೂರ್ಣವಾಗಿ–ಸುಶ್ರಾವ್ಯವಾಗಿ ಹಾಡಿಸುವುದು<br>* ವಿವಿರಣಾತ್ಮಕ ವಿಧಾನ. | | * ಪ್ರಕೃತಿಯ ರಮ್ಯ ಚಿತ್ರಗಳನ್ನು ರಚಿಸುವ ಹಾಗೆ–ಸಂಗ್ರಹಿಸುವಂತೆ ಹೇಳುವುದು. ಆ ಚಿತ್ರ ನೋಡಿ ಗೀತೆ ರಚಿಸುವಂತೆ ಪ್ರೋತ್ಸಾಹಿಸುವುದು.<br>* ನಿಸರ್ಗ ಮಾನವನಿಗೆ ಏನೇನನ್ನು ಉಚಿತವಾಗಿ ಕೊಟ್ಟಿದೆ ? ಎನ್ನುವುದನ್ನು ಪಟ್ಟಿ ಮಾಡಿಸುವುದು.<br>– ಪಂಚಭೂತಗಳ ಪರಿಚಯ ಪದ್ಯಗಳ ಮಹತ್ವವನ್ನು ಪರಿಚಯಿಸುವುದು. | | |
| ೧೨. | ಪದ್ಯಪಾಠ–೩<br>ಹೊಸ ಹಾಡು<br>(ನವೋದಯ) | * ಆಧುನಿಕ ಸಾಹಿತ್ಯದ ಪರಿಚಯ<br>* ಹೊಸ ಪದ್ಯಗಳ ಪರಿಚಯ | * ಪದ್ಯದ ಸಾಲುಗಳನ್ನು ಕಾರ್ಡ್‌ಗಳಲ್ಲಿ ತಯಾರಿಸಿಟ್ಟು ಕೊಳ್ಳುವುದು ಹಾಗೂ ಪದ್ಯದ ಸರಳ ಸಾರಾಂಶ ಇನ್ನೊಂದು ಕಾರ್ಡಿನಲ್ಲಿ ಬರೆದಿಟ್ಟುಕೊಂಡು ಎರಡು ಗುಂಪುಗಳಲ್ಲಿ ವಿತರಿಸಿ (ಒಂದು ಗುಂಪಿಗೆ ಪದ್ಯ ಇನ್ನೊಂದು ಗುಂಪಿಗೆ ತಾತ್ಪರ್ಯ ಹೇಳುವ ಹಾಗೆ ಮಾಡಿಸುವುದು. | * ಕಾರ್ಡುಗಳು<br>* ಗುಂಪುಗಳು<br>* ಇತಿಹಾಸದ ಘಟನಾವಳಿಗಳ ಚಿತ್ರಗಳು<br>* ಲೇಖಕರ ಭಾವಚಿತ್ರ | * ಪೋಷಕ ಅಭ್ಯಾಸ<br>* ಪ್ರೇರಣ ಅಭ್ಯಾಸ<br>* ಭಾಷಾಭ್ಯಾಸ ಮಾಡಿಸುವುದು. |

| ಕ್ರ. ಸಂ. | ಪಾಠ/ಪದ್ಯದ ಹಸರು | ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಕಲಿಕಾ ಸಾಧನಗಳು | ಸಿ.ಸಿ.ಇ. (ತಂತ್ರಗಳು) |
|---|---|---|---|---|---|
| | ಕಲಿಕಾ ವಿಧಾನಗಳು<br>* ಹಾಡುಗಾರಿಕೆ<br>* ವಿವರಣಾತ್ಮಕ ವಿಧಾನ<br>* ಅವಲೋಕನ ಪದ್ಧತಿ. | | * ದೇಶಭಕ್ತಿಗೀತೆಗಳನ್ನು ಸಮೂಹಗಾನದಲ್ಲಿ ಪದ್ಯವನ್ನು ಹಾಡುವ ಹಾಗೆ ಮಾಡಿಸುವುದು.<br>* ಭಾರತದ ಸ್ಥಿತಿಗತಿಗಳನ್ನು ಚಿತ್ರಗಳ ಮೂಲಕ ಪರಿಚಯಿಸುವುದು. | * ಶತಮಾನದ ಗಾನಕೃತಿ ಪರಿಚಯ | |
| ೧೩. | ಪದ್ಯಪಾಠ–೪<br>ಸಿರಿಯನಿನ್ನೇನ ಬಣ್ಣಿಪೆನು (ನಡುಗನ್ನಡ ಸಾಂಗತ್ಯ) | ನಡುಗನ್ನಡ ಸಾಹಿತ್ಯ ಹಾಗೂ ಸಾಂಗತ್ಯದ ಪ್ರಕಾರವನ್ನು ಪರಿಚಯಿಸುವುದು. | * ಗಮಕವಾಚನ ಶೈಲಿಯಲ್ಲಿ ಪದ್ಯ ಮತ್ತು ತಾತ್ಪರ್ಯದ ಅಡಕ ಮುದ್ರಿಕೆಗಳನ್ನು ತಯಾರಿಸಿಕೊಳ್ಳುವುದು.<br>* ಭರತ ಬಾಹುಬಲಿಯರ ವೇಷಭೂಷಣ ಹಾಕಿಸಿ ಅಭಿನಯ ಮಾಡಿಸುವುದು.<br>* ಸರಳ ಶೈಲಿಯಲ್ಲಿ ಕಥೆಯನ್ನು ಬರೆಸುವುದು ಹಾಗೂ ಹೇಳಿಸುವುದು.<br>* ಆದಿನಾಥನ ಕಥೆಯನ್ನು ಪರಿಚಯಿಸುವುದು. | * ಸಾಂಗತ್ಯ ಪದ್ಯಗಳನ್ನು ಹಾಡಿದ ಅಡಕ ಮುದ್ರಿಕೆ.<br>* ವೇಷ ಭೂಷಣ<br>* ರತ್ನಾಕರ ವರ್ಣಿಯ ಭಾವಚಿತ್ರ.<br>* ಭರತೇಶ ವೈಭವ ಕೃತಿ.<br>* ೨೪ ತೀರ್ಥಂಕರರ ಭಾವಚಿತ್ರಗಳು. | * ಖಾಲಿ ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿರಿ.<br>* ಪದಗಳ ಅರ್ಥ<br>* ವ್ಯಾಕರಣಾಂಶ<br>* ವೃತ್ತಗಳ ಪರಿಚಯ |

| ಕ್ರ. ಸಂ. | ಪಾಠ/ಪದ್ಯದ ಹಸರು | ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಕಲಿಕಾ ಸಾಧನಗಳು | ಸಿ.ಸಿ.ಇ. (ತಂತ್ರಗಳು) |
|---|---|---|---|---|---|
| ೧೪. | ಪದ್ಯಪಾಠ–೫<br>ಸಾರ್ಥಕ ರಕ್ಷಣೆ–೧<br>(ಸುಳಾದಿ)<br><br>ಕಲಿಕಾ ವಿಧಾನ<br>* ವಿವರಣಾತ್ಮಕ ವಿಧಾನ<br>* ಪ್ರಶ್ನೋತ್ತರ ವಿಧಾನ<br><br>ಸಾರ್ಥಕ ರಕ್ಷಣೆ–೨<br>ತತ್ವಪದ | * ಭಾರತೀಯ ಸನಾತನ ಕಾವ್ಯ–ಪುರಾಣಗಳನ್ನು ತಿಳಿಯುವುದು.<br>* ಪದ್ಯಭಾಗದಲ್ಲಿ ಆದಿಪ್ರಾಸವನ್ನು ಗುರುತಿಸಿ ತಿಳಿಯುವುದು. ವಾಚನ/ ಗಾಯನ ಸಾಮರ್ಥ್ಯಗಳಿಸುವುದು.<br>* ಪದ್ಯದ ಸಾರಾಂಶ ಬರೆಯುವುದು.<br><br>* ಬಿದಿರಿನ ವಿವಿಧ ಉಪಯೋಗಗಳನ್ನು ಆಲಿಸಿ ಅರಿಯುವುದು.<br>* ಇತರೆ ಸಸ್ಯ ಸಂಪತ್ತು ಮತ್ತು ಅದರ ಮಹತ್ವ ತಿಳಿಯುವುದು. | * ಸುಳಾದಿಯಲ್ಲಿ ಬರುವ ಪ್ರಸಂಗ/ಸನ್ನಿವೇಶಗಳ ಅಭಿನಯ ಮಾಡಿಸುವುದು.<br>* ದಾಸ ಸಾಹಿತ್ಯವನ್ನು ಪರಿಚಯಿಸುವುದು. ಹಾಡುಗಳನ್ನು ರಾಗಬದ್ಧವಾಗಿ ಹಾಡಿಸುವುದು.<br>* ದಾಸರ ವೇಷ ಭೂಷಣ ಸ್ಪರ್ಧೆ ನಡೆಸುವುದು.<br>* ವಾದಿರಾಜರ ಹಾಡುಗಳ ಧ್ವನಿಸುರುಳಿಗಳಿಂದ ಹಾಡುಗಳನ್ನು ಕೇಳಿಸಿ ಮಕ್ಕಳಿಗೆ ಹಾಡಿಸುವುದು.<br>* ಮಾವು, ತೆಂಗು, ಹುಣಸೆ ಮರಗಳಿಂದಾಗುವ ಉಪಯೋಗಗಳನ್ನು ಪಟ್ಟಿ ಮಾಡಿಸುವುದು. | * ಸಾಂದರ್ಭಿಕ ವರ್ಣ ಚಿತ್ರಗಳು<br>* ಹಾಡುಗಳ ಪುಸ್ತಕ ಸಂಗ್ರಹ<br>* ವೇಷಭೂಷಣ<br>* ಧ್ವನಿಸುರುಳಿ<br>* ಮರಗಳ ಚಿತ್ರಪಟಗಳು | * ಸಂದೇಶ ಗುರುತಿಸುವುದು.<br>* ಆದಿವಾಸ ಗುರುತಿಸುವುದು.<br>* ಗಾಯನ ಸಾರಾಂಶ ಬರೆಯುವುದು.<br>* ಪದಗಳ ಅರ್ಥ ತಿಳಿದು ವಾಕ್ಯದಲ್ಲಿ ಬಳಸುವುದು. |

| ಕ್ರ. ಸಂ. | ಪಾಠ/ಪದ್ಯದ ಹಸರು | ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಕಲಿಕಾ ಸಾಧನಗಳು | ಸಿ.ಸಿ.ಇ. (ತಂತ್ರಗಳು) |
|---|---|---|---|---|---|
| | | * ಜೀವನಾವಶ್ಯಕ ಮತ್ತು ಜೀವನಾಧಾರಿತವಾದ ಇತರೆ ಸಸ್ಯ ಸಾಧನಗಳ ಕುರಿತು ಚಿಂತಿಸುವುದು.<br>* ಪ್ರಬಂಧ ರಚಿಸುವುದು. | * ಪದ್ಯವನ್ನು ಮಕ್ಕಳಿಂದ ಹಾಡಿಸುತ್ತ ಎಲ್.ಸಿ.ಡಿ. ಪ್ರೊಜೆಕ್ಟರ್‌ನಲ್ಲಿ ಸಾಂದರ್ಭಿಕ ಚಿತ್ರಗಳನ್ನು ಮೂಡಿಸುವುದು.<br>* ಹಾಡಿನ ಅಡಕ ಮುದ್ರಿಕೆ (ಸಿ.ಡಿ.)ಗಳನ್ನು ಬಳಸುವುದು.<br>* ಶಾಲಾ ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಜನಪದ ನೃತ್ಯವಾಗಿ ಹಾಡನ್ನು ಮಕ್ಕಳಿಂದ ಪ್ರದರ್ಶಿಸುವುದು.<br>* ಬಿದಿರಿನ ವಿವಿಧ ಉಪಯೋಗಗಳನ್ನು ಕುರಿತು ಪ್ರಬಂಧವನ್ನು ಮಕ್ಕಳಿಂದ ಬರೆಸುವುದು.<br>* ಬಿದಿರಿನ ಕುರಿತು ನಾಲ್ಕು ಸಾಲಿನ ಚಿಕ್ಕ ಪದ್ಯ ರಚಿಸಲು ಪ್ರೋತ್ಸಾಹಿಸುವುದು. | * ಬಿದಿರಿನ ಉಪಯೋಗಗಳ ಪಟ್ಟಿ ತಯಾರಿಕೆ ಚಿತ್ರಗಳು.<br>* ಬಿದಿರಿನ ಉಪಕರಣಗಳ ಸಂಗ್ರಹ.<br>* ಮರಗಳ ಚಿತ್ರಪಟ<br>* ಬಿದಿರು ಹುಲ್ಲು<br>* ಬಿದಿರು ಮಳೆ<br>* ಹೂಬುಟ್ಟಿ, ಊರುಗೋಲು, ಅಂಬಿಗರ ಮಿಟುಗೆ ಗೋಲು<br>* ಆಡುವ ಕೋಲು<br>* ಚಕ್ಕಡಿ ನಂದಿಕೋಲು<br>* ಶರೀಫರ ಭಾವಚಿತ್ರ | * ಬಿದಿರಿನಿಂದಾಗುವ ಉಪಯೋಗಗಳ ಪಟ್ಟಿ ತಯಾರಿಸಿರಿ.<br>* ಬಿದಿರಿನ ಗುಣ, ಸ್ವಭಾವ ಗುರುತಿಸುವಿಕೆ.<br>* ಬಿದಿರಿನ ಬಗ್ಗೆ ಪ್ರಬಂಧ.<br>* ಬೆತ್ತ–ಬಿದಿರಿಗೆ ಹೋಲಿಕೆ. |
| ೧೫. | ಪದ್ಯಪಾಠ–೬ ಕಾವ್ಯ ಸಂಗಮ (ಹರಿಶ್ಚಂದ್ರ ಕಾವ್ಯ) (ವಾರ್ಧಕ ಷಟ್ಪದಿ) | * ಸತ್ಯ ಸಂಧತೆ ಅಳವಡಿಸಿಕೊಳ್ಳುವುದು.<br>* ಷಟ್ಪದಿಗಳ ಸ್ವರೂಪ ಲಕ್ಷಣ ತಿಳಿಯುವುದು. | * ಗಮಕ ವಾಚನ ಚಟುವಟಿಕೆ ಸಿ.ಡಿ.ಗಳ ಬಳಕೆ.<br>* ಪ್ರಸ್ತುತ ಪದ್ಯವನ್ನು ಗದ್ಯರೂಪದಲ್ಲಿ ಬರೆದು ತರಗತಿಯಲ್ಲಿ ಅಭಿವ್ಯಕ್ತಿ ಗೊಳಿಸುವುದು. | * ಗಮನ ಸಿ.ಡಿ.ಗಳು<br>* ಹರಿಶ್ಚಂದ್ರ ಕಾವ್ಯ ಗ್ರಂಥ.<br>* ಗ್ರಂಥಾಲಯದ ಪುಸ್ತಕಗಳು. | * ಪರಾಮರ್ಶನ ಕೌಶಲ<br>* ಹಳಗನ್ನಡ ವಾಚನ ಕೌಶಲ |

| ಕ್ರ. ಸಂ. | ಪಾಠ/ಪದ್ಯದ ಹಸರು | ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಕಲಿಕಾ ಸಾಧನಗಳು | ಸಿ.ಸಿ.ಇ. (ತಂತ್ರಗಳು) |
|---|---|---|---|---|---|
| | ಕಲಿಕಾ ವಿಧಾನ<br>* ವಿವರಣಾತ್ಮಕ ವಿಧಾನ<br>* ಗುಂಪು ಚರ್ಚಾ ವಿಧಾನ | | * ಕನ್ನಡ ಸಂಸ್ಕೃತಿಗೆ ಸಂಬಂಧಿಸಿದಂತೆ ಚಿತ್ರಗಳನ್ನು ಸಂಗ್ರಹಿಸುವುದು.<br>* ಗಾಂಧೀಜಿಯವರ ಸತ್ಯಸಂಧತೆಯ ಕಥೆಗಳನ್ನು ಸಂಗ್ರಹಿಸಿ ಹೇಳುವುದು. | * ಪದ್ಯ ಪುಸ್ತಕ<br>* ಚಲನಚಿತ್ರ ಡಿ.ವಿ.ಡಿ. | * ಪಠ್ಯದ ಪದ ವಿಂಗಡಿಸಿ ಓದುವ ಕೌಶಲ್ಯ.<br>* ಚಲನಚಿತ್ರ ಪ್ರದರ್ಶನ. |

## ಪಠ್ಯಪೋಷಕ ಅಧ್ಯಯನ (ವಿದ್ಯಾರ್ಥಿ ಸ್ವಯಂ ಓದು–(ಗ್ರಹಿಕಾ–ಅಭಿವ್ಯಕ್ತಿ ಕೌಶಲ)

| ಕ್ರ. ಸಂ. | ಗದ್ಯ/ಪದ್ಯ | ಸಾಮರ್ಥ್ಯ | ವಿದ್ಯಾರ್ಥಿ ಓದಿ ಅರ್ಥಮಾಡಿಕೊಳ್ಳಲು ನೆರವಾಗುವ ಚಟುವಟಿಕೆ | ಅರ್ಥಮಾಡಿಕೊಳ್ಳಲು ಸಹಾಯಕ ಸಾಧನಗಳು |
|---|---|---|---|---|
| ೧. | ಪ್ರಜಾನಿಷ್ಠೆ (ಕಾದಂಬರಿ) | * ಪ್ರಾಮಾಣಿಕತೆ<br>* ದುಡಿದುದ್ದಕ್ಕೆ ಮಾತ್ರ ಪ್ರತಿಫಲ ಬಯಸುವ ಗುಣ ವರ್ಧನೆ.<br>* ಅನೇಕ ಏಳ್ಗೆಯಲ್ಲಿ ನಮ್ಮ ಏಳ್ಗೆ ಇದೆ ಎಂಬ ಭಾವನೆ. | * ನಾಟಕ ರೂಪಾಂತರವನ್ನು ಮಕ್ಕಳು ನಟಿಸಬಹುದು.<br>* ಕಥನ ಕಲೆ (ಕಥೆ ಹೇಳುವುದು) ಕೌಶಲ್ಯ ಬೆಳೆಸುವ ಚಟುವಟಿಕೆಯನ್ನು ಹಮ್ಮಿಕೊಳ್ಳುವುದು.<br>* ನನಗೆ 'ಒಂದು ಸಾವಿರ ರೂಪಾಯಿ ದಾರಿಯಲ್ಲಿ ಸಿಕ್ಕರೆ' ಎಂಬ ವಿಷಯ ನೀಡಿ ಹತ್ತು ವಾಕ್ಯಗಳನ್ನು ಬರೆಯುವಂತೆ ತಿಳಿಸುವುದು. | * ಹೂವ ತಂದವರು ಕೃತಿ.<br>* ಸಾ.ಶಿ. ಮರುಳಯ್ಯನವರ ಭಾವಚಿತ್ರ.<br>* ಸಾಂದರ್ಭಿಕ ಚಿತ್ರಗಳು<br>* ಶಾಂತಲೇಶ್ವರ ಹೊಯ್ಸಳೇಶ್ವರ ದೇವಾಲಯದ ಚಿತ್ರಗಳು |
| ೨. | ಭೂಮಿಗಿಳಿದ ಬೃಹಸ್ಪತಿ (ನಾಟಕ) | * ತರ್ಕಬದ್ಧ, ಸೌಮ್ಯ ಮಾತುಗಾರಿಕೆ ಕಲಿಯುವುದು.<br>* ಲಿಖಿತ ಮಾಹಿತಿಯನ್ನು ತರ್ಕಬದ್ಧವಾಗಿ ಅರ್ಥೈಸುವ ಬಗೆ ತಿಳಿಯುವುದು.<br>* ಸಂಭಾಷಣೆಯಲ್ಲಿ ಧ್ವನಿಯ ಏರಿಳಿತ ತಿಳಿಯುವುದು.<br>* ಸ್ಪಷ್ಟ ಉಚ್ಚಾರದೊಂದಿಗೆ ಓದುವುದು. | * ವಿದ್ಯಾರ್ಥಿಗಳಿಗೆ ಪತ್ರಗಳನ್ನು ಹಂಚಿ ನಾಟಕ ಪ್ರದರ್ಶಿಸುವಂತೆ ಹೇಳುವುದು.<br>* ಒಬ್ಬೊಬ್ಬರಿಂದ ಒಂದೊಂದು ಪಾತ್ರದ ಸಂಭಾಷಣೆ ಓದಿಸುವುದು.<br>* ನಾಟಕವನ್ನು ಕಥೆ ರೂಪದಲ್ಲಿ ಒಂದೊಂದು ವಾಕ್ಯವನ್ನು ಒಬ್ಬೊಬ್ಬ ವಿದ್ಯಾರ್ಥಿಯಿಂದ ಹೇಳಿಸುವುದು. | * ಷೇಕ್ಸ್‌ಪಿಯರ್ ಭಾವಚಿತ್ರ.<br>* ಮರ್ಚಂಟ್ಸ್ ಆಫ್ ವೆನಿಸ್ ನಾಟಕ ಕೃತಿ.<br>* ಶಿಬಿಯ ಚಿತ್ರ. |
| ೩. | ಪ್ರಜ್ಞಾಪತಿ (ಭಾವಗೀತೆ) | * ಪದಗಳ ಅರ್ಥ ತಿಳಿಯುವುದು. | * ಪದ್ಯವನ್ನು ರಾಗವಾಗಿ ಹಾಡಿಸುವುದು.<br>* ಪದ್ಯಕ್ಕೆ ಗದ್ಯರೂಪದ ಸಾರಾಂಶ ಬರೆಯುವುದು. | * ಬಿ.ಎಸ್. ಸನದಿಯವರ ಭಾವಚಿತ್ರ<br>* ಗೀತ ಕುಂಜನ ಕವನ ಸಂಕಲನ. |

| ಕ್ರ. ಸಂ. | ಗದ್ಯ/ಪದ್ಯ | ಸಾಮರ್ಥ್ಯ | ವಿದ್ಯಾರ್ಥಿ ಓದಿ ಅರ್ಥಮಾಡಿಕೊಳ್ಳಲು ನೆರವಾಗುವ ಚಟುವಟಿಕೆ | ಅರ್ಥಮಾಡಿಕೊಳ್ಳಲು ಸಹಾಯಕ ಸಾಧನಗಳು |
|---|---|---|---|---|
| | | * ವಾಕ್ಯಬಂಧಗಳನ್ನು ಚರಣಗಳನ್ನು ಗ್ರಹಿಸುವುದು.<br>* ಗ್ರಹಿಸಿದ ವಿಷಯವನ್ನು ಸರಳ ಪದ ವಾಕ್ಯಗಳ ಮೂಲಕ ಅಭಿವ್ಯಕ್ತಿಸುವುದು.<br>* ವೈಚಾರಿಕ/ಸಮಕಾಲೀನ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸಿಕೊಳ್ಳುವುದು. | | |
| ೪. | ಮಹಿಳೆ ಮತ್ತು ಶಿಕ್ಷಣ | * ಸ್ತ್ರೀ/ಪುರುಷ ಸಮಾನತೆಯ ಭಾವ ಹೊಂದುವುದು.<br>* ಜೀವನದಲ್ಲಿ ಸ್ತ್ರೀಯರಿಗೆ ಅವಕಾಶ ಕಲ್ಪಿಸುವ ಧೋರಣೆ ಹೊಂದುವುದು. | * ಮಹಿಳೆಯ ಶೋಷಣೆಯನ್ನು ವಿರೋಧಿಸುವ ಸಣ್ಣ ನಾಟಕಗಳ ಪ್ರದರ್ಶನ.<br>* ಸರಕಾರವು ಮಹಿಳೆಯರ ಅಭಿವೃದ್ಧಿಗಾಗಿ ಕೈಗೊಂಡಿರುವ ಉಪಕ್ರಮಗಳ ಬಗ್ಗೆ ವಿವಿಧ ಮೌಲ್ಯಗಳಿಂದ ಮಾಹಿತಿ ಸಂಗ್ರಹ ಪುಟ್ಟ ಪ್ರಬಂಧ ರಚನೆ. | * ಸಬಿಹಾ ಭೂಮಿಗೌಡರ ಭಾವಚಿತ್ರ.<br>* ಹೆಣ್ಣು ಮಕ್ಕಳ ಸ್ಥಿತಿಗತಿ ಬಿಂಬಿಸುವ ರೇಖಾಚಿತ್ರ ಛಾಯಾಚಿತ್ರಗಳು.<br>* ವೃತ್ತಿ ನಿರತ ಹೆಣ್ಣು ಮಕ್ಕಳ ಚಿತ್ರಗಳು. ಉದಾ– ಪೋಲಿಸ್ ಪೈಲೆಟ್, ಡಾಕ್ಟರ್, ಇಂಜಿನಿಯರ್ ಇತ್ಯಾದಿ. |
| ೫. | ಪುಟ್ಟಹಕ್ಕಿ | * ಸರಳ ಪದ್ಯಗಳ ವಾಚನ, ಗಾಯನ.<br>* ಪುಟ್ಟ ಹಕ್ಕಿಯ ಬದಕುವ ಛಲ. | * ಹಕ್ಕಿಗಳನ್ನು ಕುರಿತು ವಿವಿಧ ಪುಸ್ತಕ ಓದಿ ಟಿಪ್ಪಣಿ ಮಾಡಿಕೊಳ್ಳುವುದು.<br>ಉದಾ:– ತೇಜಸ್ವಿಯವರ 'ಪರಿಸರದ ಗೀತೆಗಳು' 'ಸಲೀಂ ಅಲಿ' ಪಕ್ಷಿ ಪ್ರಪಂಚ ಇತ್ಯಾದಿ | * ವಿವಿಧ ಹಕ್ಕಿಗಳ ಭಾವಚಿತ್ರ<br>* ಜಂಬಣ್ಣ ಭಾವಚಿತ್ರ. |

# ರಚನಾ ವಾದದ ಹಿನ್ನೆಲೆಯಲ್ಲಿ
# ಗದ್ಯ /  ಪದ್ಯ ಕಲಿಕೆಗೆ ಮಾರ್ಗಸೂಚಿ

1. **ಪಠ್ಯದ ಶೀರ್ಷಿಕೆ :** ______________________________

   ಉಪಘಟಕ : ______________________________

2. **ಗಳಿಸಿಕೊಳ್ಳತಕ್ಕ ಪಠ್ಯಾಂಶಗಳು ಹಾಗೂ ಭಾಷಾ ಸಾಮರ್ಥ್ಯಗಳು:**

   (ಪಠ್ಯದ ಮುಖ್ಯಾಂಶಗಳು, ಆಶಯ, ಪರಿಕಲ್ಪನೆಗಳು, ಸಾಹಿತ್ಯ ಪ್ರಕಾರಗಳು, ಭಾಷಾ ಕೌಶಲಗಳ ಕಲಿಕೆ, ಅಭ್ಯಾಸ ಮತ್ತು ಪ್ರಯೋಗ, ಪದಸಂಪತ್ತು, ವಾಕ್ಯರಚನೆ, ಓದು – ಬರಹ.)

   ಕವಿ, ಕಾವ್ಯ, ಸಾಹಿತ್ಯ, ಸ್ವಯಂ ಅಭಿವ್ಯಕ್ತಿ, ನಿರೂಪಣೆ ಇತ್ಯಾದಿಗಳನ್ನು ಕುರಿತಂತೆ.

3. **ಪೂರಕ ಆಕರಗಳು ಮತ್ತು ಕಲಿಕೋಪಕರಣಗಳು**

   ಆಕರಗಳು, ಕಲಿಕೋಪಕರಣಗಳು, ತಾಂತ್ರಿಕ ಪರಿಕರಗಳು – ಸಿ.ಡಿ., ಡಿವಿಡಿ, ಎಲ್.ಸಿ.ಡಿ., ಇತ್ಯಾದಿಗಳ ಪಟ್ಟಿ.

   ಚಿತ್ರಪಟಗಳು.

4. **ಕಲಿಕೆಯನ್ನು ಅನುಕೂಲಿಸುವ ವಿಧಾನಗಳು / ಚಟುವಟಿಕೆಗಳು**

   (ನಿಗದಿತ ಪಠ್ಯಕ್ಕೆ ಸಂಬಂಧಿಸಿದಂತೆ ಸೂಕ್ತ ಎನಿಸುವ ವಿಧಾನಗಳು, ತಂತ್ರಗಳು ಮತ್ತು ಚುಟುವಟಿಕೆಗಳ ಆಯ್ಕೆ)

5. **ಗದ್ಯ / ಪದ್ಯ ಕಲಿಕಾ ಪ್ರಕ್ರಿಯೆಯ ಹಂತಗಳು**

   ಹಂತ–1 – ಪ್ರೇರಣಾ ಚಟುವಟಿಕೆಗಳು –

   ಪೂರ್ವಜ್ಞಾನ ಆಧಾರದಲ್ಲಿ ಚಟುವಟಿಕೆಗಳನ್ನು ಸಿಸಿಇ ಸಹಿತ ನಮೂದಿಸುವುದು

   ಹಂತ–2 – ಕಲಿಕಾ ಚಟುವಟಿಕೆಗಳು – ಉಪಘಟಕವಾರು

   ಅ) ವಿಷಯ ಪರಿಚಯದ ವಿವರಣೆಯನ್ನು ನಿರೂಪಿಸುವುದು
      (ವಿಷಯ ಮತ್ತು ಭಾಷಾ ಕೌಶಲಗಳು ಅಭ್ಯಾಸಗಳು ರಚನಾತ್ಮಕವಾಗಿರಲಿ)

   ಆ) ಲೇಖಕರ/ಕವಿಗಳ ಪರಿಚಯ, ಹೊಸ ಪದಗಳು ಮತ್ತು ನುಡಿಗಟ್ಟುಗಳು ಪರಿಚಯ

   ಇ) ಮೌನವಾಚನಕ್ಕೆ ಅವಕಾಶ ಕಲ್ಪಿಸುವುದು.
      (ಸೂಕ್ತ ಉದ್ದೇಶಗಳನ್ನು ನೀಡಿ) – (ಪ್ರಶ್ನೆಗಳನ್ನು ನೀಡಿ) – ಅನುಬಂಧದಲ್ಲಿ ನೀಡಲಾಗಿದೆ.

(ಪಠ್ಯದ ಮೌನವಾಚನವು ಯಾಂತ್ರಿಕ ಪುನರುಚ್ಚಾರಕ್ಕೆ ಸೀಮಿತವಾಗದೇ ರಚನಾತ್ಮಕ ಚಟುವಟಿಕೆಗಳಾಗಬೇಕು).

ಈ) ಶಿಕ್ಷಕರ ಮಾದರಿ ವಾಚನ – ಸೂಕ್ತ ಸ್ವರಭಾರ, ಭಾವಪೂರ್ಣವಾದ, ಪರಿಣಾಮಕಾರಿ ವಾಚನ.

ಉ) ಮಕ್ಕಳ ಗಟ್ಟಿವಾಚನಕ್ಕೆ ಅವಕಾಶ.

ಊ) ಪಠ್ಯ ವಿವರಣೆಗೆ ಅವಕಾಶ : ನಿರೂಪಣೆ, ಪ್ರಶ್ನೋತ್ತರ, ಚರ್ಚೆಗಳ ಮೂಲಕ.

ಹಂತ–3 – ಪುನರಾವರ್ತನೆ ಅಭ್ಯಾಸ / ಅನ್ವಯ ಚಟುವಟಿಕೆ –

ಪಠ್ಯದ ಒಟ್ಟು ಸಾರಾಂಶ ಕೇಳುವುದು, ಸಾಹಿತ್ಯ, ಭಾಷೆ, ಅಭಿವ್ಯಕ್ತಿ, ಅನ್ವಯ, ಎಲ್.ಎಸ್.ಆರ್.ಡಬ್ಲ್ಯೂ.ಗಳು ಅಭ್ಯಾಸ ಮತ್ತು ಪ್ರಯೋಗ ಆಗಬೇಕು.

ಸಿ.ಸಿ.ಇ. ಆಧಾರದ ಹಿನ್ನೆಲೆ ಮತ್ತು ರಚನಾವಾದದ ಹಿನ್ನೆಲೆಯಲ್ಲಿ.

**6. ಅನುಪಾಲನಾ / ರಚನಾತ್ಮಕ ಚಟುವಟಿಕೆಗಳು :**

ಬೋಧಿಸಿದ ಪಠ್ಯದ ಆಶಯಗಳು ಈಡೇರುವಂತೆ ಅಭ್ಯಾಸಗಳು ಮತ್ತು ಚಟುವಟಿಕೆಗಳಿರಲಿ. ಓದು, ಬರಹ ಮತ್ತು ನಿರೂಪಣೆಗೆ ಸೂಕ್ತ ಚಟುವಟಿಕೆಗಳಿರಲಿ.

# ಮಾದರಿ ಪಾಠ ಯೋಜನೆ
## ಗದ್ಯ ಪ್ರಾತ್ಯಕ್ಷಿಕೆ – ಜನಪದ ಕಲೆಗಳ ವೈಭವ

| ಘಟಕದ ಹೆಸರು | ಸಾಮರ್ಥ್ಯ | ಕಲಿಕಾ ಚಟುವಟಿಕೆ | ಪೂರಕ ಆಕರಗಳು / ಕಲಿಕಾ ಸಾಧನಗಳು | ಸಿ.ಸಿ.ಇ. (ತಂತ್ರಗಳು |
|---|---|---|---|---|
| ಜನಪದ ಕಲೆಗಳ ವೈಭವ | ಅ) ಸಾಹಿತ್ಯದ ವಿವಿಧ ಪ್ರಕಾರಗಳನ್ನು ತಿಳಿಯುವುದು.<br><br>ಆ) ನೋಡಿದ, ಕೇಳಿದ ಘಟನೆಗಳ ಬಗ್ಗೆ ಮಾತಿನಲ್ಲಿ ಮತ್ತು ಬರೆಹ ರೂಪದಲ್ಲಿ ನಿರ್ರ್ಗಳವಾಗಿ ಅಭಿವ್ಯಕ್ತಗೊಳಿಸುವುದು.<br><br>ಇ) ಜನಪದ ಕಲೆಗಳಾದ ವೀರಗಾಸೆ, ಕಂಸಾಳೆ, ಡೊಳ್ಳುಕುಣಿತ, ಯಕ್ಷಗಾನ ಇವುಗಳ ಬಗ್ಗೆ ಅರಿವು ಮೂಡಿಸಿಕೊಳ್ಳುವುದು. | ಜನಪದ ಗೀತೆಯೊಂದನ್ನು ಹಾಡಿ ಈ ಗೀತೆ ಯಾವ ಪ್ರಕಾರದ ಸಾಹಿತ್ಯ ಎಂದು ಪ್ರಶ್ನಿಸುತ್ತಾ ಸಾಹಿತ್ಯದಲ್ಲಿರುವ ವಿವಿಧ ಪ್ರಕಾರದ ಸಾಹಿತ್ಯವನ್ನು ಪಟ್ಟಿ ಮಾಡಿಸುವುದು.<br><br>**ಪ್ರೇರಣಾ ಚಟುವಟಿಕೆ**<br>* ಎಲ್ಲಾ ವಿದ್ಯಾರ್ಥಿಗಳನ್ನು ಐದು ಗುಂಪು ಮಾಡಿ.<br>* ವಿದ್ಯಾರ್ಥಿಗಳು ನೋಡಿರುವ ಯಾವುದಾದರು ಒಂದು ಜನಪದ ನೃತ್ಯದ ಬಗ್ಗೆ ಒಂದು ವಾಕ್ಯ ಗುಚ್ಛವನ್ನು ರಚಿಸುವಂತೆ ಪ್ರೇರೇಪಿಸುವುದು.<br>(ನಾಟಕ, ಜನಪದಗೀತೆ, ಕೋಲಾಟ, ಕೀಲುಕುದುರೆ, ಗಾರಡಿ ಗೊಂಬೆಗಳು)<br><br>ಪ್ರತಿ ಗುಂಪಿನಿಂದ ಓದಿಸುವುದು – ಪ್ರಶಂಶೆ ವ್ಯಕ್ತಪಡಿಸುವುದು. | ಪೂರಕ ಆಕರಗಳು<br>1) ಕನ್ನಡ – ಕನ್ನಡ ನಿಘಂಟು<br>2) ಕನ್ನಡ ವಿಶ್ವಕೋಶ<br>3) ಜಾನಪದ ವಿಶ್ವಕೋಶ<br>4) ಆರ್.ಎಂ.ಎಸ್.ಎ. ವಿಷಯ ಸಂಪಧೀಕರಣ (ಕನ್ನಡ).<br>5) ಅಂತರ್ಜಾಲ ತಾಣ – ಕಣಜ. | ನೀವು ನೋಡಿರುವ ಜನಪದ ಪ್ರದರ್ಶನಗಳನ್ನು ತಿಳಿಸಿ.<br><br>ಜನಪದ ಕಲೆಗಳ ಲಕ್ಷಣಗಳನ್ನು ತಿಳಿಸಿ.<br><br>ಜನಪದ ಗೀತೆಯೊಂದನ್ನು ಗಾಯನ ಮಾಡಿರಿ. |

| ಘಟಕದ ಹೆಸರು | ಸಾಮರ್ಥ್ಯ | ಕಲಿಕಾ ಚಟುವಟಿಕೆ | ಪೂರಕ ಆಕರಗಳು / ಕಲಿಕಾ ಸಾಧನಗಳು | ಸಿ.ಸಿ.ಇ. (ತಂತ್ರಗಳು |
|---|---|---|---|---|
| ಉಪ ಘಟಕಗಳು<br><br>1. ವೀರಗಾಸೆ<br>2. ಕಂಸಾಳೆ<br>3. ಡೊಳ್ಳು ಕುಣಿತ<br>4. ಯಕ್ಷಗಾನ | ಈ) ಜನಪದ ಪರಿಕರಗಳನ್ನು ಸಂಗ್ರಹ ಮಾಡುವ ಮನೋಭಾವ ಹೊಂದುವುದು.<br><br>ಉ) ಜಾನಪದ ಕಲೆಗಳನ್ನು ನೋಡಿ, ಕೇಳಿ ಆನಂದಿಸಿ ತಾವೂ ಭಾಗವಹಿಸುವುದು. | * ಕಲಿಕಾಂಶ ಚಟುವಟಿಕೆ<br>ವೀರಭದ್ರನ ಅವತಾರದ ಚಿತ್ರ ತೋರಿಸುತ್ತಾ ಪೂರ್ವ ಕಥೆಯನ್ನು ಹೇಳುವುದು.<br>* ಲೇಖಕರ ಪರಿಚಯ<br>* ಅರ್ಥೈಸಿ ಓದಿ ಪದಗಳ ಪಟ್ಟಿಯನ್ನು ಪ್ರತಿ ಗುಂಪಿಗೆ ನೀಡಿ ಓದಿಸುವುದು –<br>* ವೀರಗಾಸೆ ದೃಶ್ಯಾವಳಿ ವೀಕ್ಷಿಸುತ್ತಾ ಮುಖ್ಯಾಂಶಗಳನ್ನು ದಾಖಲಿಸಲು ತಿಳಿಸುವುದು.<br>* ಉಪಘಟಕ ಒಂದನ್ನು ವಿದ್ಯಾರ್ಥಿಗಳು ಮೌನವಾಗಿ ಓದಲು ತಿಳಿಸಿ, ಅರ್ಥಗ್ರಹಿಕೆಗಾಗಿ 5 ಪ್ರಶ್ನೆಗಳನ್ನು ನೀಡುವುದು.<br>ಅನುಬಂಧ 1 ರಲ್ಲಿ ನೀಡಿದೆ. | **ಕಲಿಕಾ ಸಾಧನಗಳು**<br>1) ವೀರಗಾಸೆ, ಕಂಸಾಳೆ, ಡೊಳ್ಳುಕುಣಿತ, ಯಕ್ಷಗಾನ ಮುಂತಾದವುಗಳ ಚಿತ್ರಗಳು.<br>2) ಧ್ವನಿ ಹಾಗೂ ದೃಶ್ಯಾವಳಿ ಇರುವ ಸಿ.ಡಿ.<br>3) ಇತರ ಜಾನಪದ ಸಂಗೀತ ವಾದ್ಯಗಳು ಅಥವಾ ಚಿತ್ರಗಳು.<br>4) ವಿವಿಧ ಬುಡಕಟ್ಟು ಜನಾಂಗದ ಚಿತ್ರಗಳು.<br>5) ಜನಪದ ಗೀತೆಗಳು<br>6) ಪ್ರಸಿದ್ಧ ಜಾನಪದ ಗಾಯಕರ, ಕಲಾವಿದರ ಭಾವಚಿತ್ರಗಳು. | * ಕಲಿಕಾ ಚಟುವಟಿಕೆಯ ಅರ್ಥಗ್ರಹಿಕೆಗಾಗಿ ಉಪಘಟಕ ವೀರಗಾಸೆಯ ಮೇಲೆ ಮೌಖಿಕ ಪ್ರಶ್ನೆಗಳ – ಕಾರ್ಡು ಅನುಬಂಧ 1 ರಲ್ಲಿ ನೀಡಿದೆ.<br><br>* ಮೌಲ್ಯಮಾಪನಕ್ಕಾಗಿ ತಪಶೀಲು ಪಟ್ಟಿ. |

| ಘಟಕದ ಹೆಸರು | ಸಾಮರ್ಥ್ಯ | ಕಲಿಕಾ ಚಟುವಟಿಕೆ | ಪೂರಕ ಆಕರಗಳು / ಕಲಿಕಾ ಸಾಧನಗಳು | ಸಿ.ಸಿ.ಇ. (ತಂತ್ರಗಳು |
|---|---|---|---|---|
| | | ಮೌಖಿಕವಾಗಿ ಉತ್ತರಿಸಲು ಪ್ರತಿ ಗುಂಪಿಗೆ ಪ್ರಶ್ನೆಗಳ ಕಾರ್ಡು ನೀಡುವುದು.<br>* ಶಿಕ್ಷಕರು ಉಪಘಟಕ ಒಂದನ್ನು ಸ್ವರಭಾರದೊಂದಿಗೆ ವಾಚನ ಮಾಡುವುದು<br>* ವಿದ್ಯಾರ್ಥಿಗಳ ಮೌನ ಓದಿನ ಅರ್ಥಗ್ರಹಿಕೆಗಾಗಿ ನೀಡಿದ ಪ್ರಶ್ನೆಗಳಿಗೆ ಉತ್ತರ ಪಡೆಯುವುದು. ಹೀಗೆಯೇ ಉಳಿದ ಮೂರು ಉಪ ಘಟಕಗಳನ್ನು ನಿರ್ವಹಿಸುವುದು.<br>* ಅನ್ವಯ ಚಟುವಟಿಕೆಗಳನ್ನು ಮಾಡಿಸುವುದು.<br>**ಅನುಬಂಧದಲ್ಲಿ ನೀಡಿದೆ**<br><br>* ಪಠ್ಯಪುಸ್ತಕದ ಅಭ್ಯಾಸಗಳನ್ನು ಮತ್ತು ನಿಗದಿತ ವ್ಯಾಕರಣಾಂಶಗಳನ್ನು ಪೂರೈಸುವುದು.<br>ಘಟಕ ಮೌಲ್ಯಮಾಪನ ಮಾಡುವುದು. | | * ಅನ್ವಯ ಚಟುವಟಿಕೆಗಳ ಮೌಲ್ಯಮಾಪನಕ್ಕಾಗಿ ವಿದ್ಯಾರ್ಥಿಗಳ ಸ್ವ–ಅವಲೋಕನ ಚೆಕ್ ಲಿಸ್ಟ್ – 4 ಅಂಶ<br><br>* ಅನ್ವಯ ಚಟುವಟಿಕೆಗಳ ಮೌಲ್ಯಮಾನಕ್ಕಾಗಿ ಶಿಕ್ಷಕರ ಅವಲೋಕನದ ತಪಶೀಲು ಪಟ್ಟಿ–6 ಅಂಶ. |

# ಪದ್ಯ ಪಾಠದ ಮಾದರಿ ಪಾಠ ಯೋಜನೆ

| ಘಟಕದ ಹೆಸರು | ಸಾಮರ್ಥ್ಯ | ಕಲಿಕಾ ಚಟುವಟಿಕೆ | ಪೂರಕ ಆಕರಗಳು / ಕಲಿಕಾ ಸಾಧನಗಳು | ಸಿ.ಸಿ.ಇ. (ತಂತ್ರಗಳು |
|---|---|---|---|---|
| "ರಮ್ಯ ಸೃಷ್ಟಿ" (ಕವನ) | * ಆಧುನಿಕ ಸಾಹಿತ್ಯದಲ್ಲಿ ಕಾವ್ಯ ಸಾಹಿತ್ಯದ ಲಕ್ಷಣಗಳನ್ನು ತಿಳಿಯುವುದು.<br>* ಸಾಹಿತ್ಯ ರಸಸ್ವಾದನೆ, ಭಾವ ಹಾಗೂ ರಸ ಪ್ರಧಾನ ತಿಳಿಯುವುದು.<br>* ನಿಸರ್ಗದ ಸೌಂದರ್ಯತೆಯನ್ನು ಪದ್ಯ ರೂಪದಲ್ಲಿ ನಿರರ್ಗಳವಾಗಿ ಅಭಿವ್ಯಕ್ತಗೊಳಿಸುವುದು.<br>* ಪದ್ಯವನ್ನು ರಾಗ ಬದ್ಧವಾಗಿ ಹಾಡುವುದು, ಪದ್ಯ ರಚನೆಯ ಮಹದಾಸೆ ಹೊಂದುವುದು.<br>* ಪ್ರಾಸ ಪದಗಳನ್ನು ಬಳಕೆ ಮಾಡಿ ಕವನಗಳನ್ನು ರಚಿಸುವುದು<br>* ಗಾಯನ ಕಲೆಯಲ್ಲಿ ಸಾಮರ್ಥ್ಯ ಗಳಿಸಿ ಕೊಳ್ಳುವುದು. | ಮುಂಗೋಳಿ ಕೂಗ್ಯಾವ/ಮೂಡು ಕೆಂಪೇರ್ಯಾವ<br>ಸ್ವಾಮಿ ನನ್ನಯ್ಯ ರಥವೇರಿ/ಬರುವಾಗ<br>ನಾನೆದ್ದು ಕೈ ಮುಗಿದೇವ ॥<br>ಬೆಳಗಾಗಿ ನಾನೆದ್ದು ಯಾರ್‍ಯಾರ ನೆನೆಯಲಿ ।<br>ಎಳ್ಳು ಜೀರಿಗೆ ಬೆಳೆಯೋಳ ।<br>ಭೂಮಿತಾಯಿ ಎದ್ದೊಂದು ಗಳಿಗೆ ನೆನೆದೇನ ॥<br>ಎಂಬ ಜನಪದ ಗೀತೆಯೊಂದನ್ನು ಹಾಡಿ ಜನಪದ ಸಾಹಿತ್ಯದಲ್ಲಿ ಇರುವ ಸೌಂದರ್ಯತೆ ಹಾಗೂ ಆಧುನಿಕ ಸಾಹಿತ್ಯದ ಸೌಂದರ್ಯತೆಯ ಲಕ್ಷಣಗಳನ್ನು ಚರ್ಚಿಸುವುದು.<br>**ಪ್ರೇರಣಾ ಚಟುವಟಿಕೆ**<br>* ವಿದ್ಯಾರ್ಥಿಗಳ ನಾಲ್ಕು ಗುಂಪುಗಳನ್ನು ಮಾಡಿ ಪ್ರಾಸ ಪದಗಳನ್ನು ಬರೆದ ಕಾರ್ಡುಗಳನ್ನು ಮಕ್ಕಳಿಗೆ ನೀಡುವುದು. ಆದಿಪ್ರಾಸ, ಮಧ್ಯಪ್ರಾಸ, ಅಂತ್ಯಪ್ರಾಸದ ಕಾರ್ಡುಗಳ ಬಳಕೆ ಮಾಡಿ ಕವನದ ಸಾಲುಗಳನ್ನು ಬರೆಯುವಂತೆ ಪ್ರೇರೇಪಿಸುವುದು.<br>ಪ್ರತಿ ಗುಂಪಿನಿಂದ ಬರೆದ ಪದ್ಯದ ಸಾಲುಗಳನ್ನು ಓದಿಸಿ ಪ್ರಶಂಸೆ ವ್ಯಕ್ತಪಡಿಸುವುದು. | **ಕಲಿಕಾ ಆಕರಗಳು**<br>* ಕನ್ನಡ ಕನ್ನಡ ನಿಘಂಟು<br>* ಜನಪದ ಗೀತೆಗಳ ಪುಸ್ತಕ<br>* ಆಧುನಿಕ ಸಾಹಿತ್ಯದ ಕವನ ಸಂಕಲನಗಳು.<br>* ಅಂತರ್ಜಾಲ | |

| ಘಟಕದ ಹೆಸರು | ಸಾಮರ್ಥ್ಯ | ಕಲಿಕಾ ಚಟುವಟಿಕೆ | ಪೂರಕ ಆಕರಗಳು / ಕಲಿಕಾ ಸಾಧನಗಳು | ಸಿ.ಸಿ.ಇ. (ತಂತ್ರಗಳು |
|---|---|---|---|---|
| | | * ನಿಸರ್ಗದ ಸೌಂದರ್ಯವನ್ನು ಬಿಂಬಿಸುವ ಚಿತ್ರವನ್ನು ತೋರಿಸುತ್ತ ಪದ್ಯದ ಭಾವಾರ್ಥ ವನ್ನು ವಿವರಿಸುವುದು.<br>* ಕೆಲವು ಮೌಖಿಕ ಪ್ರಶ್ನೆಗಳನ್ನು ಕೇಳುವುದು.<br>* ಹೊಸ ಪದಗಳ ಅರ್ಥ ವಿವರಿಸುವುದು ಚಾರ್ಟ್ ತಯಾರಿಸುವುದು.<br>* ರಮ್ಯ ಸೃಷ್ಟಿ ಪದ್ಯದ ಭಾವಾರ್ಥವನ್ನು ಆಲಿಸುತ್ತ ಪದ್ಯದ ಮುಖ್ಯಾಂಶಗಳನ್ನು ದಾಖಲಿಸಿ ಕೊಳ್ಳುವುದು.<br>* ಮಕ್ಕಳಿಗೆ ರಾಗ ಬದ್ಧವಾಗಿ ಹಾಡಲು ಪ್ರೇರೇಪಿಸುವುದು.<br>* ಎಲ್ಲಾ ಮಕ್ಕಳಿಗೂ ಕವನದ ಸಾಲುಗಳನ್ನು ಮೌನವಾಗಿ ಸಾಲುಗಳನ್ನು ವಾಚನ ಮಾಡಲು ಹೇಳುವುದು. | **ಕಲಿಕಾ ಸಾಧನಗಳು**<br>* ಪ್ರಾಸ ಪದಗಳ ಕಾರ್ಡುಗಳು.<br>* ನಿಸರ್ಗ ಸೌಂದರ್ಯತೆ ಚಿತ್ರಪಟ.<br>* ಕವಿ ಮಧುರ ಚನ್ನರ ಭಾವಚಿತ್ರ.<br>* ಹೊಸ ಪದಗಳ ಅರ್ಥ ವಿವರದ ಚಾರ್ಟ್.<br>* ಹಾಡಿನ ಧ್ವನಿಸುರುಳಿಗಳು.<br>* ಸೌಂದರ್ಯತೆಯ ದೃಶ್ಯಾವಳಿಗಳ ಸಿ.ಡಿಗಳು.<br>* ಪ್ರಸಿದ್ಧ ಕವಿಗಳ ಗಾಯಕರ ಭಾವಚಿತ್ರಗಳು. | * ರಮ್ಯ ಸೃಷ್ಟಿಯ ಭಾವಾರ್ಥ ವಿವರಣೆಗಳಿಗೆ ಸಂಬಂಧಿಸಿದಂತೆ ಮೌಖಿಕ ಪ್ರಶ್ನೆಗಳ ಚಾರ್ಟ್.<br>ಸಾಧನ<br>* ತಪಶೀಲು ಪಟ್ಟಿ.<br>* ಅನ್ವಯ ಚಟುವಟಿಕೆಗಳ ಮೌಲ್ಯ ಮಾಪನಕ್ಕಾಗಿ ವಿದ್ಯಾರ್ಥಿಗಳ ಸ್ವ–ಅವಲೋಕನ ಚೆಕ್ ಲಿಸ್ಟ್–ರ ಅಂಶ.<br>* ಅನ್ವಯ ಚಟುವಟಿಕೆಗಳ ಮೌಲ್ಯ ಮಾಪನಕ್ಕಾಗಿ ಶಿಕ್ಷಕರ ಅವಲೋಕನದ ತಪಶೀಲು ಪಟ್ಟಿ–6 ಅಂಶ. |

| ಘಟಕದ ಹೆಸರು | ಸಾಮರ್ಥ್ಯ | ಕಲಿಕಾ ಚಟುವಟಿಕೆ | ಪೂರಕ ಆಕರಗಳು / ಕಲಿಕಾ ಸಾಧನಗಳು | ಸಿ.ಸಿ.ಇ. (ತಂತ್ರಗಳು |
|---|---|---|---|---|
| | | * ವಿದ್ಯಾರ್ಥಿಗಳ ಮೌನ ಓದಿನ ಗುಂಪಿನಲ್ಲಿ ಪ್ರಶ್ನೆಗಳ ಕಾರ್ಡುಗಳನ್ನು ಕೊಡುವುದು. ಗುಂಪಿನಲ್ಲಿ ಚರ್ಚಿಸಿ ಪ್ರಶ್ನೆಗಳಿಗೆ ಉತ್ತರ ಪಡೆಯುವುದು.<br>* ಅನ್ವಯ ಚಟುವಟಿಕೆಗಳಲ್ಲಿ ಪರಿಸರದ ರಮ್ಯತೆ, ನಿಸರ್ಗದ ಸೌಂದರ್ಯತೆ ಹೊಂದಿದಂತಹ 4 ಚಿತ್ರಪಟಗಳನ್ನು 4 ಗುಂಪುಗಳಿಗೆ ತಲಾ ಒಂದರಂತೆ ನೀಡುವುದು. ಗುಂಪಿನ ಸದಸ್ಯರೆಲ್ಲರು ಸೇರಿ ಚಿತ್ರ ನೋಡಿ ಕವಿತೆಯ ಸಾಲುಗಳನ್ನು ಬರೆಯುವಂತೆ ಪ್ರೇರೇಪಿಸುವುದು.<br>ಪ್ರತಿ ಗುಂಪಿನವರು ತಾವು ಬರೆದ ಹಾಡನ್ನು ರಾಗಬದ್ಧವಗಿ ಹಾಡಲು ಪ್ರಯತ್ನಿಸುವುದು.<br>* ಪಠ್ಯ ಪುಸ್ತಕದ ಅಭ್ಯಾಸವನ್ನು ಮತ್ತು ನಿಗದಿತ ವ್ಯಾಕರಣಾಂಶವನ್ನು ಪೂರೈಸುವುದು.<br>* ಘಟಕದ ಮೌಲ್ಯಮಾಪನ ಮಾಡುವುದು. | * ಪ್ರಶ್ನೆಗಳನ್ನು ಬರೆದ ಕಾರ್ಡುಗಳು.<br>* ನಿಸರ್ಗ ಸೌಂದರ್ಯವನ್ನು ಬಿಂಬಿಸುವ ಚಿತ್ರ ಪಟಗಳು. | |

## ಪದ್ಯ ಪ್ರಾತ್ಯಕ್ಷಿಕೆಯ

## ಪದ್ಯ – ರಮ್ಯ ಸೃಷ್ಟಿ

### ಪ್ರೇರಣಾ ಚಟುವಟಿಕೆಯ ಮೌಲ್ಯ ಮಾಪನ – 1 – ತಪಶೀಲು

1. ಗುಂಪಿನಲ್ಲಿ ನೀಡಿದ ಕಾರ್ಯ ವಿಷಯಕ್ಕೆ ಪೂರಕವೇ ಹೌದು/ಇಲ್ಲ
2. ಗುಂಪಿನಲ್ಲಿ ಎಲ್ಲ ವಿದ್ಯಾರ್ಥಿಗಳು ಆಸಕ್ತಿಯಿಂದ ಭಾಗವಹಿಸಿದರೇ? ಹೌದು/ಇಲ್ಲ
3. ಸ್ಪಷ್ಟ ಉಚ್ಚಾರದೊಂದಿಗೆ ಭಾವಪೂರ್ಣವಾಗಿ ಹಾಡಿದರೆ? ಹೌದು/ಇಲ್ಲ
4. ವಿದ್ಯಾರ್ಥಿಗಳು ರಚಿಸಿದ ಕವನಗಳು ಸಮಂಜಸವಾಗಿವೆಯೇ? ಹೌದು/ಇಲ್ಲ
5. ಪ್ರತಿಯೊಬ್ಬ ವಿದ್ಯಾರ್ಥಿಯು ಕವನದ ಸಾಲುಗಳನ್ನು ಬರೆದಿದ್ದಾನೆಯೇ? ಹೌದು/ಇಲ್ಲ

### ಕಲಿಕಾ ಚಟುವಟಿಕೆಯ ಅರ್ಥಗ್ರಹಿಕೆಗಾಗಿ ಮೌಖಿಕ ಪ್ರಶ್ನೆಗಳು

1. ರಮ್ಯಸೃಷ್ಟಿ ಕವನದಲ್ಲಿ ಪ್ರಭಾಕರ ಎಂದರೆ ಯಾರು?
2. ಸೂರ್ಯ ಎಲ್ಲಿ ವಿರಾಜಿಸಿದ್ದಾನೆ?
3. ರಮ್ಯಸೃಷ್ಟಿ ಕವನ ಬರೆದ ಕವಿ ಯಾರು?
4. ರಮ್ಯಸೃಷ್ಟಿ ಕವನವನ್ನು ರಾಗ ಬದ್ಧವಾಗಿ ಹಾಡಿರಿ.
5. ರಮ್ಯಸೃಷ್ಟಿ ಕವನದ ಮೊದಲ ಚರಣದ ಭಾವಾರ್ಥ ಹೇಳಿರಿ.

### ಮೌಲ್ಯಮಾಪನಕ್ಕಾಗಿ ತಪಶೀಲು ಪಟ್ಟಿ

1. ಪ್ರಭಾಕರ ಎಂದರೆ ಯಾರು ಎಂಬುದನ್ನು ಅರಿತರು. ಹೌದು/ಇಲ್ಲ
2. ಸೂರ್ಯ ವಿರಾಜಿಸಿದ ಸ್ಥಳ ತಿಳಿದರು. ಹೌದು/ಇಲ್ಲ
3. ರಮ್ಯಸೃಷ್ಟಿ ಕವನ ಬರೆದಕವಿಯ ಪರಿಚಯ ಹೇಳಿದರು ಹೌದು/ಇಲ್ಲ

4) ರಮ್ಯಸೃಷ್ಟಿ ಕವನವನ್ನು ರಾಗಬದ್ಧವಾಗಿ ಹಾಡಿದರು. ಹೌದು/ಇಲ್ಲ

5. ರಮ್ಯಸೃಷ್ಟಿ ಕವನದ ಮೊದಲ ಚರಣದ ಭಾವಾರ್ಥ ಹೇಳಿದರು. ಹೌದು/ಇಲ್ಲ

## ಅನ್ವಯ ಚಟುವಟಿಕೆ / ಜ್ಞಾನ ಪುರರಚನೆಗಾಗಿ ಕೆಲವು ಚಟುವಟಿಕೆಗಳು

* ಎಲ್ಲಾ ವಿದ್ಯಾರ್ಥಿಗಳಿಗೆ ಭಾಗಹಿಸುವಂತೆ ಹೇಳಿ, ಹಲವಾರು ವಸ್ತುಗಳನ್ನು ಒಂದು ಟೇಬಲಿನ ಮೇಲೆ ಜೋಡಿಸಿ ಇಡುವುದು. ಕೇವಲ ಒಂದು ನಿಮಿಷ ಮಾತ್ರ ಸರದಿಯಂತೆ ಮಕ್ಕಳು ವಸ್ತುಗಳನ್ನು ನೋಡಲಿ, ನೋಡಿದ ವಸ್ತುಗಳನ್ನು ನೆನಪಿನಲ್ಲಿ ಇಟ್ಟುಕೊಂಡು ಅಲ್ಲಿರುವ ವಸ್ತುಗಳ ಹೆಸರುಗಳನ್ನು ಪಟ್ಟಿ ಮಾಡಲಿ, ಯಾವ ವಿದ್ಯಾರ್ಥಿ ಹೆಚ್ಚು ವಸ್ತುಗಳ ಹೆಸರುಗಳನ್ನು ಪಟ್ಟಿ ಮಾಡಿದ್ದಾರೆ ಎಂಬುದನ್ನು ವೀಕ್ಷಿಸುವುದು.
* ಮಕ್ಕಳ ನಾಲ್ಕು ಗುಂಪುಗಳನ್ನಾಗಿ ಮಾಡಿ ಪ್ರತಿ ಗುಂಪಿಗೆ ಈ ಕೆಳಗಿನ ಚಟುವಟಿಕೆಗಳನ್ನು ನೀಡಿ ಪ್ರದರ್ಶನ ಏರ್ಪಡಿಸುವುದು.
  * ಆಧುನಿಕ ಕಾವ್ಯಗಳ ಸಂಗ್ರಹ ಮತ್ತು ಗಾಯನ.
  * ಆಧುನಿಕ ಕಾವ್ಯಗಳ ನೃತ್ಯ ಪ್ರದರ್ಶನ.
  * ಆಧುನಿಕ ಕವಿಗಳ ಭಾವಚಿತ್ರಗಳ ಆಲ್ಬಂ ತಯಾರಿಸಿ ಧ್ವನಿ ಸುರುಳಿಗಳ ಸಂಗ್ರಹಣೆ ಮಾಡುವುದು.
  * ಶಬ್ದಗಳ ಕಾರ್ಡುಗಳನ್ನು ಕೊಟ್ಟು ಶಬ್ದಗಳನ್ನು ಜೋಡಿಸಿ ಕಥೆ ಬರೆಯುವುದು.

ಸೂಚನೆ : ಯಾವುದಾದರೊಂದು ಅವಧಿಯಲ್ಲಿ ಪ್ರತಿ ಗುಂಪಿಗು ಅವಕಾಶ ಕಲ್ಪಿಸುವುದು.

### ಅನ್ವಯ ಚಟುವಟಿಕೆಗಳ ಮೌಲ್ಯ ಮಾಪನಕ್ಕಾಗಿ ವಿದ್ಯಾರ್ಥಿಗಳ ಸ್ವ ಅವಲೋಕನ ಚೆಕ್ ಲಿಸ್ಟ್ – 4 ಅಂಶ

1. ಆಧುನಿಕ ಕಾವ್ಯ ಸಾಹಿತ್ಯದ ಲಕ್ಷಣಗಳನ್ನು ತಿಳಿದಿದ್ದೇನೆ. ಹೌದು/ಇಲ್ಲ
2. ಗುಂಪು ಕಾರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದೇನೆ. ಹೌದು/ಇಲ್ಲ
3. ಪ್ರದರ್ಶನದಲ್ಲಿ ಆಸಕ್ತಿಯಿಂದ ಭಾಗವಹಿಸಿದ್ದೇನೆ. ಹೌದು/ಇಲ್ಲ
4. ನಿಗದಿತ ವಿಷಯ ಸಂಗ್ರಹ ಕಾರ್ಯದಲ್ಲಿ ಸಕ್ರೀಯವಾಗಿ ಸಂಗ್ರಹಿಸಿದ್ದೇನೆ. ಹೌದು/ಇಲ್ಲ

### ಅಂಶ

1. ಪ್ರದರ್ಶನದಲ್ಲಿ ಕಾವ್ಯ ಗಾಯನ ಪೂರಕವಾಗಿದೆಯೇ ಹೌದು/ಇಲ್ಲ
2. ಆಧುನಿಕ ಕಾವ್ಯ ಗಾಯನದ ನೃತ್ಯ ಪ್ರದರ್ಶನ ಸೂಕ್ತವಾಗಿತ್ತೇ? ಹೌದು/ಇಲ್ಲ
3. ಸಂಗ್ರಹ ಕಾರ್ಯ ಸಮಂಜಸವಾಗಿದೆಯೇ? ಹೌದು/ಇಲ್ಲ
4. ಪ್ರತಿ ವಿದ್ಯಾರ್ಥಿಯು ತನ್ನ ಸ್ವಂತಿಕೆಯನ್ನು ತೋರ್ಪಡಿಸಿದ್ದಾರೆಯೇ? ಹೌದು/ಇಲ್ಲ
5. ಜ್ಞಾಪಕ ಶಕ್ತಿಯ ಚಟುವಟಿಕೆಯಲ್ಲಿ ವಸ್ತುಗಳ ಹೆಸರಿನ ಪಟ್ಟಿ ತಯಾರಿಸಿದರೇ? ಹೌದು/ಇಲ್ಲ
6. ಮಕ್ಕಳ ಬರೆದ ಕಥೆ ಕವನಗಳು ಸಮಂಜಸವಾಗಿವೆಯೇ? ಹೌದು/ಇಲ್ಲ

## ಸಿರಿ ಕನ್ನಡ–9 ವಾರ್ಷಿಕ ಕಾರ್ಯಸೂಚಿ

| ಕ್ರ ಸಂ. | ತಿಂಗಳು | ಲಭ್ಯ ಅವಧಿಗಳು | ಘಟಕದ ಹೆಸರು (ಉಪ ಘಟಕಗಳ ಸಹಿತ) | ಬೋಧನೆಗೆ ಬೇಕಾದ ಅವಧಿಗಳು |
|---|---|---|---|---|
| 1 | ಜೂನ್ 2013 | 25 | **ಪರಿಹಾರ ಬೋಧನೆ**<br>1. ನೈದಾನಿಕ ಪರೀಕ್ಷೆ<br>2. ಪರಿಹಾರ ಬೋಧನೆ<br>3. ಸಾಫಲ್ಯ ಪರೀಕ್ಷೆ | 13 |
| 2 | ಜೂನ್ 2013 | 27 | **ಗದ್ಯ ಪಾಠ – 1. ಪಂಥಾಹ್ವಾನ ಘಟಕ – 1**<br>1.1 ಮುನ್ನಯಾರಿ, ಲೇಖಕರ ಪರಿಚಯ, ಪಠ್ಯಾಧಾರ ಟಿಪ್ಪಣಿ.<br>1.2 ವಿದ್ಯುಚ್ಚೋರ ರಿಸಿಯ ಸಂಕ್ಷಿಪ್ತ ಕಥೆ.<br>1.3 ವಿದ್ಯುಚ್ಚೋರ ಯಮದಂಡರ ಬಾಲ್ಯ, ವಿದ್ಯಾಭ್ಯಾಸ<br>1.4 ವನಕ್ರೀಡೆ, ಶಪಥ, ಉದ್ಯೋಗ ಸ್ವೀಕಾರ, ಯಮದಂಡನ ಪದತ್ಯಾಗ<br>1.5 ಯಮದಂಡನು ಮಿಥಿಳೆಯ ತಳಾರನಾದುದು, ವಿದ್ಯುಚ್ಚೋರನಿಗೆ ಮಾಹಿತಿ, ಮಿಥಿಳೆಯ ಪ್ರವೇಶ, ಕಳ್ಳತನ<br>1.6 ವೇಣಾತಟದ ದೂತರು ತಂದ ಪತ್ರ, ವಾಮರಥನಿಗೆ ನಂಬಿಕೆ ಉಂಟಾದುದು, ಯೋಗ್ಯ ಪೀಠ ನೀಡಿಕೆ.<br>1.7 ಸಮಗ್ರ ವಾಚನ ಕೌಶಲ ಚಟುವಟಿಕೆ<br>1.8 ಪೋಷಕ / ಪ್ರೇರಣಾ ಅಭ್ಯಾಸ ಚಟುವಟಿಕೆ<br>1.9 ಭಾಷಾಭ್ಯಾಸ – ಪ್ರಾಯೋಗಿಕ ಭಾಷಾ ಚಟುವಟಿಕೆ ಕನ್ನಡ ಸಂಧಿಗಳು – ನಾಮಪದ – ವಿಭಕ್ತಿ ಪ್ರತ್ಯಯಗಳು<br>1.10 ಪಠ್ಯಾಧಾರಿತ ಸೃಜನಶೀಲ ಭಾಷಾ ಬಳಕೆಯ ಪ್ರಾಯೋಗಿಕ ಅಭ್ಯಾಸ<br>1.11 ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಚಟುವಟಿಕೆ (ಮೌಖಿಕ)<br>1.12 ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಚಟುವಟಿಕೆ (ಲಿಖಿತ) | 12 |

| ಕ್ರ ಸಂ. | ತಿಂಗಳು | ಲಭ್ಯ ಅವಧಿಗಳು | ಘಟಕದ ಹೆಸರು (ಉಪ ಘಟಕಗಳ ಸಹಿತ) | ಬೋಧನೆಗೆ ಬೇಕಾದ ಅವಧಿಗಳು |
|---|---|---|---|---|
| 3 | ಜುಲೈ 2013 | | **ಪದ್ಯ ಪಾಠ – 1. ಬಲಿಯನಿತ್ತೊಡೆ ಘಟಕ – 2**<br>2.1 ಮುನ್ನ್ತಯಾರಿ, ಕವಿ ಪರಿಚಯ, ಪಠ್ಯಾಧಾರ ಟಿಪ್ಪಣಿ<br>2.2 ಪೂರ್ವಕಥೆ<br>2.3 ಅಭಯ ರುಚಿ ತನ್ನ ಕಥೆ ಹೇಳಿದ್ದು<br>2.4 ಚಂಡಮಾರಿಯು ಪ್ರತ್ಯಕ್ಷಳಾಗಿ ಜನರನ್ನು ಎಚ್ಚರಿಸಿದ್ದು<br>2.5 ಮಾರಿದತ್ತನಿಗೆ ವೈರಾಗ್ಯ ಉಂಟಾದುದು<br>2.6 ಸಮಗ್ರ ವಾಚನ ಕೌಶಲ ಚಟುವಟಿಕೆ<br>2.7 ಪೋಷಕ / ಪ್ರೇರಣಾ ಅಭ್ಯಾಸ ಚಟುವಟಿಕೆ<br>2.8 ಸೈದ್ಧಾಂತಿಕ ಛಂದೋ ಅಭ್ಯಾಸ – ಮಾತ್ರಾ ಗಣ – ಕಂದ ಪದ್ಯ<br>2.9 ಪಠ್ಯಾಧಾರಿತ ಸೃಜನಶೀಲ ಭಾಷಾ ಬಳಕೆಯ ಪ್ರಾಯೋಗಿಕ ಚಟುವಟಿಕೆ.<br>2.10 ನಿರಂತರ ಮತ್ತು ವ್ಯಾಪಾಕ ಮೌಲ್ಯಮಾಪನ ಚಟುವಟಿಕೆ (ಮೌಖಿಕ)<br>2.11 ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಚಟುವಟಿಕೆ (ಲಿಖಿತ)<br>2.12 ರಚನಾತ್ಮಕ ಭಾಷಾ ಚಟುವಟಿಕೆ – ಗಾದೆಗಳ ವಿಸ್ತರಣೆ | 13 |
| 4 | ಜುಲೈ 2013 | | **ಗದ್ಯ ಪಾಠ – 2. ಪ್ರಾಮಾಣಿಕತೆ ಘಟಕ – 3**<br>3.1 ಮುನ್ನ್ತಯಾರಿ, ಲೇಖಕರ ಪರಿಚಯ, ಪಠ್ಯಾಧಾರ ಟಿಪ್ಪಣಿ<br>3.2 ಹಮೀದನು ಸಭೆಯಲ್ಲಿ ಭಾಗವಹಿಸಿ ಹುಸೇನನ ಕೊಠಡಿಗೆ ಹೋದದ್ದು, ಕೊಠಡಿಯಲ್ಲಿ ಗೆಳೆಯರಿಬ್ಬರ ಸಂಭಾಷಣೆ.<br>3.3 ರಹೀಮನ ಕಥೆ, ನಿರ್ದೇಶಕರೊಂದಿಗೆ ಆತನ ಅವಾಂತರ<br>3.4 ಹೊಸ ನಿರ್ದೇಶಕರ ಆಗಮನ, ಅವರು ರಹೀಮನಿಗೆ ವಹಿಸಿದ ಜವಾಬ್ದಾರಿ | 12 |

| ಕ್ರ ಸಂ. | ತಿಂಗಳು | ಲಭ್ಯ ಅವಧಿಗಳು | ಘಟಕದ ಹೆಸರು (ಉಪ ಘಟಕಗಳ ಸಹಿತ) | ಬೋಧನೆಗೆ ಬೇಕಾದ ಅವಧಿಗಳು |
|---|---|---|---|---|
| | | | 3.5 ರಹೀಮನ ಜವಾಬ್ದಾರಿಯಿಂದ ತಪ್ಪಿಸಿಕೊಂಡದ್ದು ಹೊಸ ನಿರ್ದೇಶಕರೊಂದಿಗೆ ಘರ್ಷಣೆ, ಘರ್ಷಣೆಯ ಪರಿಣಾಮ<br>3.6 ಸಮಗ್ರ ವಾಚನ ಕೌಶಲ–ಚಟುವಟಿಕೆ<br>3.7 ಪೋಷಕ / ಪ್ರೇರಣಾ ಅಭ್ಯಾಸ ಚಟುವಟಿಕೆ<br>3.8 ಸೈದ್ಧಾಂತಿಕ ಭಾಷಾಭ್ಯಾಸ – ಪ್ರಾಯೋಗಿಕ ಭಾಷಾ ಚಟುವಟಿಕೆ ಕ್ರಿಯಾಪದ – ಧಾತುಗಳು – ಸಕರ್ಮಕ–ಅಕರ್ಮಕ<br>3.9 ಪಠ್ಯಾಧಾರಿತ ಸೃಜನಶೀಲ ಭಾಷಾ ಬಳಕೆಯ ಪ್ರಾಯೋಗಿಕ ಚಟುವಟಿಕೆ<br>3.10 ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಚಟುವಟಿಕೆ (ಮೌಖಿಕ)<br>3.11 ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಚಟುವಟಿಕೆ (ಲಿಖಿತ)<br>3.12 ಪಠ್ಯ ಪೋಷಕ ಅಧ್ಯಯನ– ಸ್ವಯಂ ಓದು – ಪ್ರಜಾನಿಷ್ಠೆ | |
| 5 | ಜುಲೈ 2013 | | **ಮೊದಲನೆಯ ರೂಪಣಾತ್ಮಕ ಮೌಲ್ಯ ಮಾಪನ** | 02 |
| 6 | ಆಗಸ್ಟ್ 2013 | 25 | **ಪದ್ಯ ಪಾಠ – 2. ರಮ್ಯ ಸೃಷ್ಟಿ ಘಟಕ – 4**<br>4.1 ಮುನ್ನಯಾರಿ, ಕವಿ ಪರಿಚಯ, ಪಠ್ಯಾಧಾರ ಟಿಪ್ಪಣಿ<br>4.2 ಸೂರ್ಯೋದಯ ಸಮಯದ ಆಗಸದ ಸೌಂದರ್ಯ<br>4.3 ಪ್ರಕೃತಿ, ಪರಿಸರದ ಚೆಲುವು<br>4.4 ಸಮಗ್ರ ವಾಚನ ಕೌಶಲ ಚಟುವಟಿಕೆ<br>4.5 ಪೋಷಕ / ಪ್ರೇರಣಾ ಅಭ್ಯಾಸ ಚಟುವಟಿಕೆ<br>4.6 ಸೈದ್ಧಾಂತಿಕ ಛಂದೋ ಅಭ್ಯಾಸ – ರೂಪಕಾಲಂಕಾರ, ದೃಷ್ಟಾಂತಾಲಂಕಾರ<br>4.7 ಪಠ್ಯಾಧಾರಿತ ಸೃಜನಶೀಲ ಭಾಷಾ ಬಳಕೆಯ ಪ್ರಾಯೋಗಿಕ ಅಭ್ಯಾಸ | 11 |

| ಕ್ರ ಸಂ. | ತಿಂಗಳು | ಲಭ್ಯ ಅವಧಿಗಳು | ಘಟಕದ ಹೆಸರು (ಉಪ ಘಟಕಗಳ ಸಹಿತ) | ಬೋಧನೆಗೆ ಬೇಕಾದ ಅವಧಿಗಳು |
|---|---|---|---|---|
| | | | 4.8 ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಚಟುವಟಿಕೆ (ಮೌಖಿಕ)<br>4.9 ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಚಟುವಟಿಕೆ (ಲಿಖಿತ)<br>4.10 ರಚನಾತ್ಮಕ ಭಾಷಾ ಚಟುವಟಿಕೆ – ಪತ್ರಲೇಖನ<br>4.11 ಪಠ್ಯ ಪೋಷಕ ಅಧ್ಯಯನ – ಸ್ವಯಂ ಓದು – ಭೂಮಿಗಿಳಿದ ಬೃಹಸ್ಪತಿ | |
| 7 | ಆಗಸ್ಟ್ 2013 | | **ಗದ್ಯ ಪಾಠ – 3. ಬೆಡಗಿನ ತಾಣ ಜಯಪುರ ಘಟಕ – 5**<br>5.1 ಮುನ್ನಯಾರಿ, ಲೇಖಕರ ಪರಿಚಯ, ಪಠ್ಯಾಧಾರ ಟಿಪ್ಪಣಿ<br>5.2 ಲೇಖಕರು ಗೆಳೆಯರ ಮನೆ ತಲುಪಿದ್ದು<br>5.3 ಜಯಪುರದ ಬೀದಿಗಳು, ಜನರು ಅವರ ಸ್ವಭಾವ<br>5.4 ಅಂಬೇರಾ ಬೆಟ್ಟದ ಪರಿಸರ<br>5.5 ಕೋಟೆಯ ಅರಮನೆಯ ವರ್ಣನೆ<br>5.6 ಮೀರಾಬಾಯಿಯ ದೇವಾಲಯ ವೀಕ್ಷಣೆ ಹಾಗೂ ಮನೆಗೆ ಪ್ರಯಾಣ, ಜಂತ್ರ ಮಂತ್ರ ಹಾಗೂ ಜಯಪುರದ ನೃತ್ಯ<br>5.7 ಸಮಗ್ರ ವಾಚನ ಕೌಶಲ–ಚಟುವಟಿಕೆ<br>5.8 ಪೋಷಕ / ಪ್ರೇರಣಾ ಅಭ್ಯಾಸ ಚಟುವಟಿಕೆ<br>5.9 ಅಭ್ಯಾಸ – ಅರಿವು – ಪ್ರಾಯೋಗಿಕ ಭಾಷಾ ಚಟುವಟಿಕೆ ಕರ್ತರಿ – ಕರ್ಮಣಿ ಪ್ರಯೋಗ, ಕ್ರಿಯಾಪದ – ಅರ್ಥರೂಪಗಳು<br>5.10 ಪಠ್ಯಾಧಾರಿತ ಸೃಜನಶೀಲ ಭಾಷಾ ಬಳಕೆಯ ಪ್ರಾಯೋಗಿಕ ಚಟುವಟಿಕೆ<br>5.11 ನಿರಂತರ ಮತ್ತು ವ್ಯಾಪಾಕ ಮೌಲ್ಯಮಾಪನ ಚಟುವಟಿಕೆ (ಮೌಖಿಕ)<br>5.12 ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಚಟುವಟಿಕೆ (ಲಿಖಿತ) | 12 |

| ಕ್ರ ಸಂ. | ತಿಂಗಳು | ಲಭ್ಯ ಅವಧಿಗಳು | ಘಟಕದ ಹೆಸರು (ಉಪ ಘಟಕಗಳ ಸಹಿತ) | ಬೋಧನೆಗೆ ಬೇಕಾದ ಅವಧಿಗಳು |
|---|---|---|---|---|
| 8 | ಆಗಸ್ಟ್ 2013 | 24 | **ರೂಪಣಾತ್ಮಕ ಮೌಲ್ಯಮಾಪನ** | 02 |
| 9 | ಸೆಪ್ಟೆಂಬರ್ 2013 | | **ಪದ್ಯ ಪಾಠ – 3. ಹೊಸಹಾಡು ಘಟಕ – 6**<br>6.1 ಮುನ್ನುಯಾರಿ, ಕವಿ ಪರಿಚಯ, ಪಠ್ಯಾಧಾರ ಟಿಪ್ಪಣಿ<br>6.2 ಹಿಮಾದ್ರಿಯಲ್ಲಿ ಹಾಡು ಹಾಡು ಭಯದ ಬೆನ್ನಟ್ಟುವುದು<br>6.3 ಗಂಡೆದೆಯ ಗರ್ಜನೆಗೆ ಕಂಠ ಬೆರೆಯುವುದು, ಹೊಸತು ಹಾಡು<br>6.4 ಸಮಗ್ರ ವಾಚನ ಕೌಶಲ ಚಟುವಟಿಕೆ<br>6.5 ಪೋಷಕ / ಪ್ರೇರಣಾ ಅಭ್ಯಾಸ ಚಟುವಟಿಕೆ<br>6.6 ಪಠ್ಯಾಧಾರಿತ ಸೃಜನಶೀಲ ಭಾಷಾ ಬಳಕೆಯ ಪ್ರಾಯೋಗಿಕ ಚಟುವಟಿಕೆ<br>6.7 ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಚಟುವಟಿಕೆ (ಮೌಖಿಕ)<br>6.8 ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಚಟುವಟಿಕೆ (ಲಿಖಿತ) | 08 |
| 10 | ಸೆಪ್ಟೆಂಬರ್ 2013 | 16 | **ಗದ್ಯ ಪಾಠ – 4. ಆದರ್ಶ ಶಿಕ್ಷಕ ಸರ್ವಪಲ್ಲಿ ರಾಧಾಕೃಷ್ಣ ಘಟಕ – 7**<br>7.1 ಮುನ್ನುಯಾರಿ, ಕವಿ ಪರಿಚಯ, ಪಠ್ಯಾಧಾರ ಟಿಪ್ಪಣಿ<br>7.2 ಸ್ಟಾಲಿನ್ ಮತ್ತು ರಾಧಾಕೃಷ್ಣನ್ ಮಾತುಕತೆ<br>7.3 ಬಾಲ್ಯ ಮತ್ತು ವಿದ್ಯಾಭ್ಯಾಸ, ವೃತ್ತಿ ಜೀವನ, ಶಿಕ್ಷಕರಾಗಿ ಜನಪ್ರಿಯತೆ,<br>7.4 ಭಾರತದ ಸಂಸ್ಕೃತಿಯನ್ನು ಎತ್ತಿ ಹಿಡಿದುದು, ಧರ್ಮಗಳ ಅಧ್ಯಯನ<br>7.5 ರಾಯಭಾರಿಯಾಗಿ, ಉಪರಾಷ್ಟ್ರಪತಿಯಾಗಿ ಸಾಧನೆ<br>7.6 ಸಂದ ಗೌರವಗಳು – ರಚಿಸಿದ ಕೃತಿಗಳು<br>7.7 ಸಮಗ್ರ ವಾಚನ ಕೌಶಲ–ಚಟುವಟಿಕೆ<br>7.8 ಪೋಷಕ / ಪ್ರೇರಣಾ ಅಭ್ಯಾಸ ಚಟುವಟಿಕೆ | 12 |

| ಕ್ರ ಸಂ. | ತಿಂಗಳು | ಲಭ್ಯ ಅವಧಿಗಳು | ಘಟಕದ ಹೆಸರು (ಉಪ ಘಟಕಗಳ ಸಹಿತ) | ಬೋಧನೆಗೆ ಬೇಕಾದ ಅವಧಿಗಳು |
|---|---|---|---|---|
| | | | 7.9 ಸೈದ್ಧಾಂತಿಕ ಭಾಷಾಭ್ಯಾಸ – ಪ್ರಾಯೋಗಿಕ ಭಾಷಾ ಚಟುವಟಿಕೆ ಕ್ರಿಯಾಪದಗಳು – ಕಾಲರೂಪಗಳು<br>7.10 ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಚಟುವಟಿಕೆ (ಮೌಖಿಕ)<br>7.11 ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಚಟುವಟಿಕೆ (ಲಿಖಿತ)<br>7.12 ರಚನಾತ್ಮಕ ಭಾಷಾ ಚಟುವಟಿಕೆ – ಪ್ರಬಂಧ ರಚನೆ | |
| 11 | ಸೆಪ್ಟೆಂಬರ್ 2013 | | **ಸಂಕಲನಾತ್ಮಕ ಮೌಲ್ಯಮಾಪನ** | 04 |
| 12 | ಅಕ್ಟೋಬರ್ 2013 | | **ಸಂಕಲನಾತ್ಮಕ ಮೌಲ್ಯಮಾಪನ**<br>**ಮಧ್ಯಂತರ ರಜಾ ಅವಧಿ** | 03 |
| 13 | ಅಕ್ಟೋಬರ್ 2013<br>ನವೆಂಬರ್ 2013 | 06<br>21 | **ಪದ್ಯ ಪಾಠ – 4. ಸಿರಿಯನಿನ್ನೇನ ಬಣ್ಣಿಪೆನು ಘಟಕ – 8**<br>8.1 ಮುನ್ನುಡಿ, ಕವಿ ಪರಿಚಯ, ಪಠ್ಯಾಧಾರ ಟಿಪ್ಪಣಿ<br>8.2 ಪೂರ್ವ ಕತೆ<br>8.3 ಭರತೇಶನ ಸಾಮರ್ಥ್ಯ ವರ್ಣನೆ<br>8.4 ಆಸ್ಥಾನದಲ್ಲಿ ಭರತೇಶ<br>8.5 ಸಮಗ್ರ ವಾಚನ ಕೌಶಲ ಚಟುವಟಿಕೆ<br>8.6 ಪೋಷಕ / ಪ್ರೇರಣಾ ಅಭ್ಯಾಸ ಚಟುವಟಿಕೆ<br>8.7 ಸೈದ್ಧಾಂತಿಕ ಛಂದೋ ಅಭ್ಯಾಸ – ಅಕ್ಷರ ಗಣ – ಖ್ಯಾತ ಕರ್ನಾಟಕ ವೃತ್ತಗಳು<br>8.8 ಪಠ್ಯಾಧಾರಿತ ಸೃಜನಶೀಲ ಭಾಷಾ ಬಳಕೆಯ ಪ್ರಾಯೋಗಿಕ ಚಟುವಟಿಕೆ<br>8.9 ನಿರಂತರ ಮತ್ತು ವ್ಯಾಪಾಕ ಮೌಲ್ಯಮಾಪನ ಚಟುವಟಿಕೆ (ಮೌಖಿಕ)<br>8.10 ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಚಟುವಟಿಕೆ (ಲಿಖಿತ) | 12 |

| ಕ್ರ ಸಂ. | ತಿಂಗಳು | ಲಭ್ಯ ಅವಧಿಗಳು | ಘಟಕದ ಹೆಸರು (ಉಪ ಘಟಕಗಳ ಸಹಿತ) | ಬೋಧನೆಗೆ ಬೇಕಾದ ಅವಧಿಗಳು |
|---|---|---|---|---|
| | | | 8.11 ರಚನಾತ್ಮಕ ಭಾಷಾ ಚಟುವಟಿಕೆ – ಪತ್ರಲೇಖನ<br>8.12 ಪೋಷಕ ಅಭ್ಯಾಸ – ಸ್ವಯಂ ಓದು – ಪ್ರಜ್ಞಾಪತಿ | |
| 14 | ನವೆಂಬರ್ 2013 | | **ಗದ್ಯ ಪಾಠ – 5. ಸಮಾಗಮ ಘಟಕ – 9**<br>9.1 ಮುನ್ನುಯಾರಿ, ಕವಿ ಪರಿಚಯ, ಪಠ್ಯಾಧಾರ ಟಿಪ್ಪಣಿ<br>9.2 ಸೂತ್ರಧಾರನ ಪ್ರವೇಶ – ಘಟೋತ್ಕಚನು ವಯಸ್ಸಿಗನ ಸಂಸಾರವನ್ನು ಅಡ್ಡಗಟ್ಟಿದ್ದು, ಹೆದರಿದ ಕುಟುಂಬ, ಪಾರಾಗುವ ಬಗೆಯನ್ನು ಕುಟುಂಬವು ಚರ್ಚಿಸಿದ್ದು<br>9.3 ಘಟೋತ್ಕಚನು ಅವರನ್ನು ತಡೆಯಲು ಕಾರಣ ವಯಸ್ಸಿಗನ ಕುಟುಂಬದಲ್ಲಿ ಬಲಿಯಾಗಲು ತಯಾರಾದ ನಡುಮಗ<br>9.4 ನಡುಮಗನು ಸ್ನಾನಕ್ಕೆ ಹೋದುದು, ಭೀಮಸೇನನ ಆಗಮನ<br>9.5 ವಯಸ್ಸಿಗನು ಭೀಮಸೇನನ ಮೊರೆ ಹೋದುದು<br>9.6 ಭೀಮ ಘಟೋತ್ಕಚರ ಕಾದಾಟ, ಘಟೋತ್ಕಚನಿಗೆ ತಿಳಿದ ವಾಸ್ತವ<br>9.7 ಸಮಗ್ರ ವಾಚನ ಕೌಶಲ ಚಟುವಟಿಕೆ<br>9.8 ಪೋಷಕ / ಪ್ರೇರಣಾ ಅಭ್ಯಾಸ ಚಟುವಟಿಕೆ<br>9.9 ಸೈದ್ಧಾಂತಿಕ ಭಾಷಾಭ್ಯಾಸ – ಹಳಗನ್ನಡ ವಿಭಕ್ತಿ ಪ್ರತ್ಯಯಗಳ ಪರಿಚಯ – ವಿಭಕ್ತಿ ಪಲ್ಲಟ<br>9.10 ಪಠ್ಯಾಧಾರಿತ ಸೃಜನಶೀಲ ಭಾಷಾ ಬಳಕೆಯ ಪ್ರಾಯೋಗಿಕ ಚಟುವಟಿಕೆ<br>9.11 ನಿರಂತರ ಮತ್ತು ವ್ಯಾಪಾಕ ಮೌಲ್ಯಮಾಪನ ಚಟುವಟಿಕೆ (ಮೌಖಿಕ)<br>9.12 ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಚಟುವಟಿಕೆ (ಲಿಖಿತ) | 12 |
| 15 | ನವೆಂಬರ್ 2013 | | **ರೂಪಣಾತ್ಮಕ ಮೌಲ್ಯಮಾಪನ** | 02 |

| ಕ್ರ. ಸಂ. | ತಿಂಗಳು | ಲಭ್ಯ ಅವಧಿಗಳು | ಘಟಕದ ಹೆಸರು (ಉಪ ಘಟಕಗಳ ಸಹಿತ) | ಬೋಧನೆಗೆ ಬೇಕಾದ ಅವಧಿಗಳು |
|---|---|---|---|---|
| 16 | ಡಿಸೆಂಬರ್ 2013 | 25 | **ಪದ್ಯ ಪಾಠ – 5. ಸಾರ್ಥಕ ರಕ್ಷಣೆ ಘಟಕ – 10**<br>10.1 ಮುನ್ನುಡಿಯಾರಿ, ಕವಿ ಪರಿಚಯ, ಪಠ್ಯಾಧಾರ ಟಿಪ್ಪಣಿ<br>10.2 ಪೂರಕ ವಿಶೇಷಾಂಶ<br>10.3 ಶ್ರೀಹರಿಯನ್ನು ದಾಸರು ಗುಣಗಾನ ಮಾಡುವ ಬಗೆ<br>10.4 ಬಿದಿರು ತನ್ನ ಬಹು ಬಳಕೆಯನ್ನು ಹೇಳುವ ಬಗೆ<br>10.5 ಸಮಗ್ರ ವಾಚನ ಕೌಶಲ ಚಟುವಟಿಕೆ<br>10.6 ಪೋಷಕ / ಪ್ರೇರಣಾ ಅಭ್ಯಾಸ ಚಟುವಟಿಕೆ<br>10.7 ಸೈದ್ಧಾಂತಿಕ ಭಾಷಾಭ್ಯಾಸ<br>10.8 ಪಠ್ಯಾಧಾರಿತ ಸೃಜನಶೀಲ ಭಾಷಾ ಬಳಕೆಯ ಪ್ರಾಯೋಗಿಕ ಚಟುವಟಿಕೆ<br>10.9 ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಚಟುವಟಿಕೆ (ಮೌಖಿಕ)<br>10.10 ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಚಟುವಟಿಕೆ (ಲಿಖಿತ)<br>10.11 ರಚನಾತ್ಮಕ ಭಾಷಾ ಚಟುವಟಿಕೆ – ಪ್ರಬಂಧ ಲೇಖನ<br>10.12 ಪೋಷಕ ಅಭ್ಯಾಸ – ಸ್ವಯಂ ಓದು – ಮಹಿಳೆ ಮತ್ತು ಶಿಕ್ಷಣ | 12 |
| 17 | | | **ಗದ್ಯ ಪಾಠ – 6. ಹರಲೀಲೆ ಘಟಕ – 11**<br>11.1 ಮುನ್ನುಡಿಯಾರಿ, ಕವಿ ಪರಿಚಯ, ಪಠ್ಯಾಧಾರ ಟಿಪ್ಪಣಿ<br>11.2 ಪೂರ್ವಕಥೆ<br>11.3 ಮಣಮಂದ ಪುತ್ತೂರಿನ ಉಪವನದಲ್ಲಿ ನಂಬಿಯಣ್ಣ, ಕೈಲಾಸದಲ್ಲಿ ಶಿವ–ಗಿರಿಜೆಯರ ಸಂಭಾಷಣೆ<br>11.4 ವೃದ್ಧ ಮಾಹೇಶ್ವರನಾಗಿ ಶಿವ, ವಿವಾಹ ಮಂಟಪದಲ್ಲಿ ವೃದ್ಧನ ಅವಾಂತರ, ವೃದ್ಧನು ಕಾರಣಿಕ ಪುರುಷನೆಂದು ಜನರು ಭಾವಿಸಿದ್ದು<br>11.5 ಸಮಗ್ರ ವಾಚನ ಕೌಶಲ ಚಟುವಟಿಕೆ<br>11.6 ಪೋಷಕ / ಪ್ರೇರಣಾ ಅಭ್ಯಾಸ ಚಟುವಟಿಕೆ | 11 |

| ಕ್ರ ಸಂ. | ತಿಂಗಳು | ಲಭ್ಯ ಅವಧಿಗಳು | ಘಟಕದ ಹೆಸರು (ಉಪ ಘಟಕಗಳ ಸಹಿತ) | ಬೋಧನೆಗೆ ಬೇಕಾದ ಅವಧಿಗಳು |
|---|---|---|---|---|
| | | | 11.7 ಸೈದ್ಧಾಂತಿಕ ಭಾಷಾಭ್ಯಾಸ – ಸಂಸ್ಕೃತ ಸಂಧಿಗಳು – ಸುವರ್ಣದೀರ್ಘ – ಗುಣ ಸಂಧಿಗಳು ಸಮಾಸ – ಅಂಶಿ ಸಮಾಶ<br>11.8 ಸೈದ್ಧಾಂತಿಕ ಭಾಷಾಭ್ಯಾಸ – ರಗಳೆ – ಉತ್ಸಾಹ, ಮಂದಾನಿಲ, ಲಲಿತ ರಗಳೆಗಳು<br>11.9 ಪಠ್ಯಾಧಾರಿತ ಸೃಜನಶೀಲ ಭಾಷಾ ಬಳಕೆಯ ಪ್ರಾಯೋಗಿಕ ಚಟುವಟಿಕೆ<br>11.10 ನಿರಂತರ ಮತ್ತು ವ್ಯಾಪಾಕ ಮೌಲ್ಯಮಾಪನ ಚಟುವಟಿಕೆ (ಮೌಖಿಕ)<br>11.11 ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಚಟುವಟಿಕೆ (ಲಿಖಿತ) | |
| 18 | ಡಿಸೆಂಬರ್ 2013 | | **ರೂಪಣಾತ್ಮಕ ಮೌಲ್ಯಮಾಪನ** | 02 |
| 19 | ಜನವರಿ 2014 | | **ಪದ್ಯ ಪಾಠ – 6. ಕಾವ್ಯ ಸಂಗಮ ಘಟಕ – 12**<br>12.1 ಮುನ್ತಯಾರಿ, ಕವಿ ಪರಿಚಯ<br>12.2 ಪಠ್ಯಾಧಾರ ಟಿಪ್ಪಣಿ<br>12.3 ಪೂರ್ವಕಥೆ<br>12.4 ಹರಿಶ್ಚಂದ್ರ ರಾಜನು ಬೇಟೆಗೆ ಹೊರಟಿದ್ದು, ಕಾಡುಹಂದಿಯ ಆರ್ಭಟ ಅದರ ಅವಸಾನಕ್ಕೆ ರಾಜನು ಸಿದ್ಧನಾದುದು. ಹಂದಿಯ ಎದೆಗೆ ಬಾಣನಾಟಿ ಅದು ಭೂಮಿಗೆ ಬಿದ್ದುದು, ರಾಜನು ನೋಡಲು ಹೋದಾಗ ಮಾಯವಾದುದು<br>12.5 ಅದು ವಿಶ್ವಾಮಿತ್ರ ಮುನಿಯ ಆಶ್ರಮ ಪ್ರದೇಶವೆಂದು ತಿಳಿದುದು, ಹರಿಶ್ಚಂದ್ರನು ನಿದ್ರೆಯಲ್ಲಿ ಕಂಡ ದುಃಸ್ವಪ್ನ ಮತ್ತು ಚಂದ್ರಮತಿಯ ಸಮಾಧಾನ<br>12.6 ಕನ್ನಡದ ಹಿರಿಮೆ, ಕನ್ನಡ ನಾಡಿನ ಪ್ರಕೃತಿ, ಸಂಸ್ಕೃತಿ ಪರಿಚಯ<br>12.7 ಸಮಗ್ರ ವಾಚನ ಕೌಶಲ ಚಟುವಟಿಕೆ | 12 |

| ಕ್ರ ಸಂ. | ತಿಂಗಳು | ಲಭ್ಯ ಅವಧಿಗಳು | ಘಟಕದ ಹೆಸರು (ಉಪ ಘಟಕಗಳ ಸಹಿತ) | ಬೋಧನೆಗೆ ಬೇಕಾದ ಅವಧಿಗಳು |
|---|---|---|---|---|
| | | | 12.8 ಪೋಷಕ / ಪ್ರೇರಣಾ ಅಭ್ಯಾಸ ಚಟುವಟಿಕೆ<br>12.9 ಸೈದ್ಧಾಂತಿಕ ಛಂದೋ ಅಭ್ಯಾಸ – ಷಟ್ಪದಿ ಪರಿಚಯ – ಭಾಮಿನಿ ಷಟ್ಪದಿ – ವಾರ್ಧಕ ಷಟ್ಪದಿ<br>12.10 ಪಠ್ಯಾಧಾರಿತ ಸೃಜನಶೀಲ ಭಾಷಾ ಬಳಕೆಯ ಪ್ರಾಯೋಗಿಕ ಚಟುವಟಿಕೆ<br>12.11 ನಿರಂತರ ಮತ್ತು ವ್ಯಾಪಾಕ ಮೌಲ್ಯಮಾಪನ ಚಟುವಟಿಕೆ (ಮೌಖಿಕ)<br>12.12 ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಚಟುವಟಿಕೆ (ಲಿಖಿತ) | |
| 20 | ಜನವರಿ 2014 | | **ಗದ್ಯ ಪಾಠ – 7. ಇತಿಹಾಸದ ಚಿಕ್ಕಡಿ ಘಟಕ – 13**<br>13.1 ಮುನ್ನಯಾರಿ, ಲೇಖಕರ ಪರಿಚಯ, ಪಠ್ಯಾಧಾರ ಟಿಪ್ಪಣಿ<br>13.2 ಬಾಲ್ಯದ ಓದು – ಓದುತ್ತಿದ್ದ ತಾಣ ಓದುವಾಗ ಉಂಟಾದ ಒಂದು ಭಯದ ಸನ್ನಿವೇಶ<br>13.3 ಅಧ್ಯಯನದ ಏಕಾಗ್ರತೆಗೆ ಲೇಖಕರು ಕಂಡುಕೊಂಡ ಉಪಾಯ ಬೀದಿ ದೀಪದ ಕೆಳಗೆ ಓದು<br>13.4 ದೀಪದ ಕಂಬದಲ್ಲಿ ಆದ ತೊಂದರೆಗಳು – ರಿಪೇರಿ<br>13.5 ಸಮಗ್ರ ವಾಚನ ಕೌಶಲ ಚಟುವಟಿಕೆ<br>13.6 ಪೋಷಕ / ಪ್ರೇರಣಾ ಅಭ್ಯಾಸ ಚಟುವಟಿಕೆ<br>13.7 ಸೈದ್ಧಾಂತಿಕ ಭಾಷಾಭ್ಯಾಸ – ವೃದ್ಧಿಸಂಧಿ – ಯಣ್ ಸಂಧಿ – ದ್ವಂದ್ವ ಸಮಾಸ<br>13.8 ನಿರಂತರ ಮತ್ತು ವ್ಯಾಪಾಕ ಮೌಲ್ಯಮಾಪನ ಚಟುವಟಿಕೆ (ಮೌಖಿಕ)<br>13.9 ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಚಟುವಟಿಕೆ (ಲಿಖಿತ)<br>13.10 ರಚನಾತ್ಮಕ ಭಾಷಾ ಚಟುವಟಿಕೆ – ಗಾದೆಗಳ ವಿಸ್ತರಣೆ<br>13.11 ಪಠ್ಯ ಪೋಷಕ ಅಧ್ಯಯನ – ಸ್ವಯಂ ಓದು – ಪುಟ್ಟಹಕ್ಕಿ | 13 |

| ಕ್ರ ಸಂ. | ತಿಂಗಳು | ಲಭ್ಯ ಅವಧಿಗಳು | ಘಟಕದ ಹೆಸರು (ಉಪ ಘಟಕಗಳ ಸಹಿತ) | ಬೋಧನೆಗೆ ಬೇಕಾದ ಅವಧಿಗಳು |
|---|---|---|---|---|
| 21 | ಫೆಬ್ರವರಿ 2014 | 23 | **ಗದ್ಯ ಪಾಠ – 8. ಅಚ್ಚರಿಯ ಜೀವಿ ಇಂಬಳ ಘಟಕ – 14**<br>14.1 ಮುನ್ನಯಾರಿ, ಲೇಖಕರ ಪರಿಚಯ, ಪಠ್ಯಾಧಾರ ಟಿಪ್ಪಣಿ<br>14.2 ವರ್ಡ್ಸ್‌ವರ್ತ್ ಕವಿಯ ಪದ್ಯ ಲೇಖಕರು, ಮೊದಲ ಬಾರಿಗೆ ಇಂಬಳವನ್ನು ಕಂಡ ಸಂದರ್ಭ<br>14.3 ಇಂಬಳದ ವೈಶಿಷ್ಟ್ಯತೆ ಇಂಬಳದ ಮೂಲಕ ಚಿಕಿತ್ಸಾ ವಿಧಾನ<br>14.4 ಯುನಾನಿ, ವೈದ್ಯ ಚಿಕಿತ್ಸೆಯಲ್ಲಿ ಇಂಬಳದ ಬಳಕೆ – ಇಂಬಳವು ರಕ್ತ ಹೀರುವ ಬಗ್ಗೆ<br>14.5 ಬಂಗೂವಿನ ಚಿಕಿತ್ಸಾ ವಿಧಾನ – ಲೇಖಕರಿಗಾದ ಅನುಭವ<br>14.6 ಸಮಗ್ರ ವಾಚನ ಕೌಶಲ ಚಟುವಟಿಕೆ<br>14.7 ಪೋಷಕ / ಪ್ರೇರಣಾ ಅಭ್ಯಾಸ ಚಟುವಟಿಕೆ<br>14.8 ಸೈದ್ಧಾಂತಿಕ ಭಾಷಾಭ್ಯಾಸ – ಜಶ್ತ್ವಸಂಧಿ, ಶ್ಚುತ್ವಸಂಧಿ ಸಮಾಸ – ಬಹುವ್ರೀಹಿ ಸಮಾಸ<br>14.9 ನಿರಂತರ ಮತ್ತು ವ್ಯಾಪಾಕ ಮೌಲ್ಯಮಾಪನ ಚಟುವಟಿಕೆ (ಮೌಖಿಕ)<br>14.10 ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಚಟುವಟಿಕೆ (ಲಿಖಿತ)<br>14.11 ರಚನಾತ್ಮಕ ಭಾಷಾ ಚಟುವಟಿಕೆ – ಪ್ರಬಂಧ ಲೇಖನ | 12 |
| 22 | ಫೆಬ್ರವರಿ 2014 | | **ಗದ್ಯ ಪಾಠ – 9. ಜನಪದ ಕಲೆಗಳ ವೈಭವ ಘಟಕ – 15**<br>15.1 ಮುನ್ನಯಾರಿ, ಪಠ್ಯಾಧಾರ ಟಿಪ್ಪಣಿ, ವಿಶೇಷಾಂಶ<br>15.2 ವೀರಗಾಸೆಯ ವಾದ್ಯವೇಷಭೂಷಣ ವಿಶೇಷ – ವೀರಗಾಸೆಯಲ್ಲಿ ನರ್ತಕರು ಹೇಳುವ ಮಾತುಗಳು ಏರ್ಪಡಿಸುವ ಸಂದರ್ಭಗಳು<br>15.3 ಕಂಸಾಳೆ<br>15.4 ಡೊಳ್ಳು ಕುಣಿತ<br>15.5 ಯಕ್ಷಗಾನ | 11 |

| ಕ್ರ ಸಂ. | ತಿಂಗಳು | ಲಭ್ಯ ಅವಧಿಗಳು | ಘಟಕದ ಹೆಸರು (ಉಪ ಘಟಕಗಳ ಸಹಿತ) | ಬೋಧನೆಗೆ ಬೇಕಾದ ಅವಧಿಗಳು |
|---|---|---|---|---|
| | | | 15.6 ಸಮಗ್ರ ವಾಚನ ಕೌಶಲ ಚಟುವಟಿಕೆ<br>15.7 ಪೋಷಕ / ಪ್ರೇರಣಾ ಅಭ್ಯಾಸ ಚಟುವಟಿಕೆ<br>15.8 ಸೈದ್ಧಾಂತಿಕ ಭಾಷಾಭ್ಯಾಸ – ಅನುನಾಸಿಕ ಸಂಧಿ<br>ಸಮಾಸ – ಕ್ರಿಯಾಸಮಾಸ, ಗಮಕ ಸಮಾಸ<br>15.9 ನಿರಂತರ ಮತ್ತು ವ್ಯಾಪಾಕ ಮೌಲ್ಯಮಾಪನ ಚಟುವಟಿಕೆ (ಮೌಖಿಕ)<br>15.10 ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಚಟುವಟಿಕೆ (ಲಿಖಿತ)<br>15.11 ರಚನಾತ್ಮಕ ಭಾಷಾ ಚಟುವಟಿಕೆ – ಪತ್ರ ಲೇಖನ | |
| 23 | ಮಾರ್ಚ್ 2014 | 25 | **ಪುನರಾವರ್ತನೆ**<br>**ಸಂಕಲನಾತ್ಮಕ ಮೌಲ್ಯಮಾಪನ** | 19<br>06 |
| 24 | ಏಪ್ರಿಲ್ 2014 | 08 | **ಮೌಲ್ಯಮಾಪನ, ಫಲಿತಾಂಶ ಪ್ರಕಟಣೆ** | 08 |

## ಕಲಿಕೆಯನ್ನು ಅನುಕೂಲಿಸುವ ವಿಧಾನಗಳು

ಕಲಿಕಾ ಒಂದು ನಿರಂತರ ಪ್ರಕ್ರಿಯೆ ಪ್ರಾಣಿ, ಪಕ್ಷಿ ಮಾನವರೆಲ್ಲರೂ ಕಲಿಕೆಯಲ್ಲಿ ತೊಡಗುವರು. ಕೆಲವು ಪ್ರಾಣಿ ಪಕ್ಷಿಗಳಿಗೆ ಯಾರದೇ ಮಾರ್ಗದರ್ಶನವಿಲ್ಲದೆಯೇ ಕಲಿಯುತ್ತವೆ. ಆದರೆ ಮಾನವ ಇತರರ ಮಾರ್ಗದರ್ಶನವಿದ್ದರೂ ಸರಿಯಾದ ಕಲಿಕೆಗೆ ತನ್ನನ್ನು ತೆರೆದುಕೊಳ್ಳಲಾರ. ಉತ್ತಮ ಕಲಿಕೆಗೆ ಕಲಿಕೆಯನ್ನು ಅನುಕೂಲಿಸುವ ವಿಧಾನಗಳು ಬಹುಮುಖ್ಯ ಪಾತ್ರವಹಿಸುತ್ತವೆ. ಕಲಿಕೆಯು ಪರಿಣಾಮಕಾರಿಯಗಬೇಕಾದರೆ ಹಲವಾರು ಅಂಶಗಳು ಕಾರಣವಾಗುತ್ತವೆ. ಅವುಗಳೆಂದರೆ – (1)ಕಲಿಯುವ ವಿಷಯ ಅನುಕೂಲಿಸುವ ವಿಧಾನ (2) ಸನ್ನಿವೇಶ (3) ಕಲಿಯುವವರ ಅವಧಾನ (4) ಕಲಿಯುವ ವಿಷಯದ ವೈವಿಧ್ಯತೆ (5) ಸಂವಹನ ಮತ್ತು ಭಾಷೆ (6) ಕಲಿಕೆಯನ್ನು ಅನುಕೂಲಿಸುವ ವ್ಯಕ್ತಿ.

ಈ ಸಂಚಿಕೆಯಲ್ಲಿ ಈಗಾಗಲೇ ಸಂವಹನ ಮುಂತಾದ ವಿಷಯದ ಬಗ್ಗೆ ಚರ್ಚಿಸಲಾಗಿದೆ ಈಗ ವಿಧಾನಗಳ ಕುರಿತು ಚರ್ಚಿಸೋಣ.

ಪರಿಣಾಮಕಾರಿ ಕಲಿಕೆಗೆ ಯಾವುದೇ ಒಂದು ವಿಧಾನ ಸಾದ್ಯವಿಲ್ಲ ಎಂದೇ ಹೇಳಬಹುದು. ಇಂತಹ ವಿಧಾನವೇ ಶ್ರೇಷ್ಠ ಎಂಬಂತೆ ಯಾವ (Holly Grain) ಇಲ್ಲ ಕಲಿಕೆಯನ್ನು ಅನುಕೂಲಿಸುವುದು. ಒಂದು ಸಂಕೀರ್ಣ ಕೌಶಲ ಒಂದು ಕಲೆ ಕಲಿಸುವುದೆಲ್ಲವೂ ಕಲಿಕೆ ಆಗಬಾರದು. ಮಾಹಿತಿಯನ್ನು ಯಾಂತ್ರಿಕವಾಗಿ ರವಾನಿಸಿವುದು. ಬೋಧನೆಯಲ್ಲಿ ವಿಷಯಗಳ ಯಾಂತ್ರಿಕವಾಗಿ ಸಂಗ್ರಹಿಸುವುದು ಕಲಿಕೆಯೂ ಅಲ್ಲ. ಎಷ್ಟು ಕಲಿಕೆಯನ್ನು ಅನುಕೂಲಿಸಿದೆವು ಎನ್ನುವುದಕ್ಕಿಂತ ಹೇಗೆ ಅನುಕೂಲಿಸುವಿಕೆ ನಡೆಯಿತು ಎಂಬುದು ಮುಖ್ಯ.

ಪ್ರತಿ ಅನುಕೂಲಿಸುವಿಕೆಯು ನಿರ್ದಿಷ್ಟ ಉದ್ದೇಶಗಳ ಪೂರೈಕೆಗಾಗಿ ನಡೆಯಬೇಕು ಮನೋವೈಜ್ಞಾನಿಕ ತಳಹದಿಯನ್ನು ಹೊಂದಿರಬೇಕು. ಕಲಿಕೆಯನ್ನು ಅನುಕೂಲಿಸುವ ವಿಧಾನಗಳನ್ನು ಸ್ಥೂಲವಾಗಿ ಎರಡು ಗುಂಪು ಮಾಡಬಹುದು.

(1) ಸಂಪ್ರದಾಯಿಕ ಪದ್ದತಿ, (2) ನವೀನ ಮಾದರಿ ಪದ್ದತಿಗಳು.

## I. ಸಾಂಪ್ರದಾಯಿಕ ಪದ್ಧತಿಗಳು

1. ಕಥನ ಪದ್ಧತಿ
2. ಉಪನ್ಯಾಸ ಪದ್ಧತಿ
3. ಪ್ರದರ್ಶನ ಪದ್ಧತಿ
4. ಅನುಗಮನ ಪದ್ಧತಿ
5. ನಿಗಮನ ಪದ್ಧತಿ
6. ನಾಟಕಾಭಿನಯ
7. ಪ್ರಶ್ನೋತ್ತರ ವಿಧಾನ

## II. ನವೀನ ಮಾದರಿ ಪದ್ದತಿಗಳು

1. ಸಂಶೋಧನ ಪದ್ಧತಿ
2. ಆವಿಷ್ಕಾರ/ಅನ್ವೇಷಣಾ ಪದ್ಧತಿ
3. ಯೋಜನಾ ಪದ್ಧತಿ
4. ಸ್ವಯಂ ಬೋಧಿನಿ ಸಾಮಗ್ರಿಗಳ ವಿಧಾನ
5. ಕಂಪ್ಯೂಟರ್ ಸಹಾಯಕ ವಿಧಾನ
6. ಪಾತ್ರ ನಿರ್ವಹಣ ವಿಧಾನ
7. ದೃಕ್ ಶ್ರವಣೋಪಕರಗಳನ್ನು ಬಳಸಿ ಕಲಿಸುವ ವಿಧಾನ.

ಇವುಗಳ ಜೊತೆಗೆ ಸಂವಹನ ವಿಧಾನ, ಅನುವಾದಕ್ರಮ, Community Language Learning, Total Physical Response Method (TPL) ಗಳಂತಹ ಆಧುನಿಕ ಉಪಕ್ರಗಳನ್ನು ಸಹ ಅಳವಡಿಸಿಕೊಳ್ಳುವ ಅಗತ್ಯವಿದೆ.

ಕಾಲ ಬದಲಾದಂತೆ ಕಲಿಕಾ ವಿಧಾನಗಳು ಕಲಿಕೆಯನ್ನು ಅನುಕೂಲಿಸುವ ವಿಧಾನಗಳೂ ಕಾಲಕ್ಕೆ ತಕ್ಕಂತೆ ಬದಲಾವಣೆಯಾಗುತ್ತವೆ. ಆಗಲೇ ಬೇಕಾದುದು ಕೂಡ ಅಗತ್ಯವಿದೆ. ಕಲಿಕೆ ಸುಲಭವಾಗಲು ಹಲವು (ಕಲಿಕೆಯ) ಸಿದ್ಧಾಂತಗಳೂ ಕಲಿಕೆಯನ್ನು ಸುಲಭವಾಗಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಅವುಗಳೆಂದರೆ ನೋಡಿ ತಿಳಿ, ಕೇಳಿ ಕಲಿ ಮತ್ತು ಮಾಡಿ ಕಲಿ.

ನೂರು ಪದಗಳಲ್ಲಿ ಹೇಳಬಹುದಾದ ಮಾಹಿತಿಯನ್ನು ಒಂದು ಚಿತ್ರದ ಸಹಾಯದಿಂದ ಹೇಳಬಹುದು. ಅದರಿಂದಾಗಿ ಕಲಿಕೆಯು ಶ್ರಮವಿಲ್ಲದೆ ಸಂತಸದಾಯಕವಾಗಿ ಸಾಗುತ್ತದೆ. ಆದ್ದರಿಂದ ಕನ್ನಡ ಭಾಷೆ ಕಲಿಕೆಯಲ್ಲಿಯೂ ನಾವು ಆಧುನಿಕ ಕಲಿಕೋಪಕರಣಗಳನ್ನುಬಳಸಿ ಕಲಿಕೆಯನ್ನು ಅನುಕೂಲಿಸುವ ವಿಧಾನಗಳು ಹೆಚ್ಚು ಪರಿಣಾಮಕಾರಿ.

### ಕಂಪ್ಯೂಟರ್ ಮತ್ತು CDಗಳ ಬಳಕೆ

ಇಂದಿನ ಯುಗವನ್ನೇ ಕಂಪ್ಯೂಟರ್ ಯುಗ ಎಂದು ಕರೆಯುತ್ತೇವೆ. ಇಂದು ಎಲ್ಲಾ ಕ್ಷೇತ್ರಗಳಲ್ಲಿ ಗಣಕಯಂತ್ರ ಬಳಕೆ ಇರುವುದರಿಂದ ಶಿಕ್ಷಣ ಕ್ಷೇತ್ರದಲ್ಲಿಯೂ ನಾವು ಸದ್ಬಳಕೆ ಮಾಡಿಕೊಳ್ಳಬೇಕು. ಗಣಕಯಂತ್ರ ಸಹಾಯದಿಂದ ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ವಾಸ್ತು ಶಿಲ್ಪ ಮೊದಲಾದ ವಿಷಯಗಳನ್ನು ಸುಲಭವಾಗಿ ಅರ್ಥೈಸಲು ಸಾಧ್ಯವಿದೆ.

### ಗಣಕಯಂತ್ರದಿಂದ ಕನ್ನಡ ಭಾಷಾಕಲಿಕೆಗೆ ಆಗುವ ಅನುಕೂಲಗಳು

1) ಧ್ವನಿಯನ್ನು ಮುದ್ರಿಸಿ ಪುನಃ ಆಲಿಸುವುದರಿಂದ ಅಕ್ಷರ, ಪದ, ವಾಕ್ಯಗಳ ಉಚ್ಚಾರದಲ್ಲಿ ಆಗುವ ವ್ಯತ್ಯಾಸಗಳನ್ನು ಗುರ್ತಿಸಲು ಮತ್ತು ಸರಿಪಡಿಸಲು ಅನುಕೂಲವಾಗುತ್ತದೆ.
2) ವಿವಿಧ ಶೈಲಿಯ ಬರವಣಿಗೆಯನ್ನು ನೋಡಿ ಕಲಿಯಬಹುದು.

3) CD, DVD ಬಳಸಿದಾಗ ಪ್ರಾಚೀನ ಕಾಲದ ಶಾಸನಗಳು ಕಲೆ, ಸಂಸ್ಕೃತಿ ವಾಸ್ತುಶಿಲ್ಪ ಜನಪದ ವಿಷಯಗಳಿಗೆ ಸಂಬಂಧಪಟ್ಟ ಕಲಿಕೆ ಸ್ಥಿರೀಕರಣವಾಗುತ್ತದೆ.

## ಕನ್ನಡ ಭಾಷಾಕಲಿಕೆಯಲ್ಲಿ ಅಂತರ್ಜಾಲದ ಪಾತ್ರ :–

### ಅಂತರ್ಜಾಲ ಮಾಹಿತಿಯ ಮಾಧ್ಯಮ ಹಾಗೂ ಮಾಹಿತಿಯ ಕಣಜ

ಹಲವಾರು ಇಲಾಖೆಗಳು, ಸಂಸ್ಥೆಗಳಿಂದ ಕನ್ನಡ ಭಾಷೆ, ಸಾಹಿತ್ಯ, ಕಲೆಗೆ ಸಂಬಂಧಿಸಿದಂತೆ ಹಲವಾರು CD, DVDಗಳನ್ನು ಬಿಡುಗಡೆ ಮಾಡಲಾಗಿದೆ. ಅವುಗಳನ್ನು ಸದುಪಯೋಗ ಪಡಿಸಿಕೊಳ್ಳಬಹುದು.

1) ಭಾರತೀಯ ಭಾಷಾ ಸಂಸ್ಥಾನ – ಮಾನಸಗಂಗೋತ್ರಿ, ಮೈಸೂರು ಇವರು ಹಲವಾರು ಸಾಹಿತಿಗಳ ಲೇಖಕರ ಕುರಿತಾಗಿ ಹಲವಾರು DVD ಗಳನ್ನು ಹೊರ ತಂದಿದ್ದಾರೆ. ಅವುಗಳಲ್ಲಿ ಸಾಹಿತಿಗಳ ಜೀವನ ಚರಿತ್ರೆ ಅವರ ಧ್ವನಿ ದೃಶ್ಯಾವಳಿಗಳನ್ನು ನೀಡಲಾಗಿದೆ.

2) ಕರ್ನಾಟಕ ಸಾಹಿತ್ಯ ಅಕಾಡೆಮಿ – ಬೆಂಗಳೂರು ಅವರು ಸುಪ್ರಸಿದ್ದ ಸಾಹಿತಿಗಳ ಸ್ವರಚಿತ ಕವನ ವಾಚನ ಮಾಡಿರುವ DVD ಬಿಡುಗಡೆ ಮಾಡಿರುತ್ತಾರೆ.

3) ಮೈಸೂರು ವಿಶ್ವವಿದ್ಯಾನಿಲಯದವರು ಹೊರ ತಂದಿರುವ ಕನ್ನಡ ವಿಶ್ವಕೋಶ DVD ಗಳು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದ ಹಲವಾರು ಚಿತ್ರ ಧ್ವನಿ, ಸಾಹಿತ್ಯ ಲಿಪಿ, ಸಂಸ್ಕೃತಿಗೆ ಸಂಬಂಧಿಸಿದ ವಿಷಯಗಳನ್ನು ಒಳಗೊಂಡಿದ್ದು ಕನ್ನಡ ಭಾಷಾ ಕಲಿಕೆಯ ಸಮಯದಲ್ಲಿ ಇವುಗಳನ್ನು ಬಳಸಿಕೊಂಡರೆ ಕಲಿಕೆ ಸುಗಮವಾಗುವುದರಲ್ಲಿ ಸಂದೇಹವಿಲ್ಲ.

4) ಭಾಷಾ ಪಠ್ಯದಲ್ಲಿ ಬರುವ ಪದ್ಯಗಳ ರಾಗಮಾಲಿಕೆ DVD ಗಳ ಬಳಕೆ.

5) ವ್ಯಾಕರಣಾಂಶಗಳನ್ನು ಒಳಗೊಂಡ DVD ಗಳ ಬಳಕೆ.

6) ಸರಳ ಕಥೆಗಳು, ರಾಮಾಯಣ, ಮಹಾಭಾರತ, ಸಂವಹನ, ಭಾಷಣಗಳ DVD ಗಳ ಬಳಕೆ.

7) ನಾಡಗೀತೆ, ದೇಶಭಕ್ತಿಗೀತೆ, ಭಾವಗೀತೆ, ಜನಪದ ಗೀತೆಗಳ DVD ಗಳ ಬಳಕೆ.

## ವ್ಯಾಕರಣ ಬೋಧನೆ– ಮಾರ್ಗದರ್ಶಿ

* ತರಗತಿಗಳು ಆರಂಭಗೊಂಡ ಒಂದೆರಡು ದಿನಗಳಲ್ಲಿಯೇ ದಪ್ಪ ಅಕ್ಷರಗಳಲ್ಲಿ 'ಕನ್ನಡ ವರ್ಣಮಾಲೆಯ' ಪಟವನ್ನು ರಚಿಸಿ ತೂಗು ಹಾಕಿಸುವುದು.
* ವ್ಯಾಕರಣ ಬೋಧನೆಯ ಪ್ರತಿ ಹಂತದಲ್ಲಿಯೂ ಆ 'ಚಾರ್ಟ್' ಅನ್ನು ಬಳಕೆ ಮಾಡಿಕೊಳ್ಳುವುದು.
* ಒಂದು ದಿನದ ಒಂದು ಅವಧಿಯಲ್ಲಿ (ಅದು ಯಾವುದೇ ತರಗತಿಯಾಗಿರಲಿ) ವರ್ಣಮಾಲೆ, ವಿಭಾಗಗಳು ಮೊದಲಾದವುಗಳ ಬಗ್ಗೆ ಮನವರಿಕೆ ಮಾಡಿಸುವುದು.
* ಅದರಲ್ಲೂ ವಿಶೇಷವಾಗಿ ಸ್ವರಾಕ್ಷರಗಳು, ಗುಣಿತಾಕ್ಷರಗಳಲ್ಲಿ ಅಡಗಿರುವ ಬಗೆ, ಸಂಯುಕ್ತಾಕ್ಷರ/ಒತ್ತಕ್ಷರಗಳನ್ನು ಬಿಡಿಸುವುದು, ಬಿಡಿಸಿ ಬರೆಯುವುದು. ಇವುಗಳ ಬಗ್ಗೆ ತಿಳಿಸುವುದು.
* ಒಂದು ತರಗತಿಯಲ್ಲಿ (ಒಂದು ಅವಧಿಯಲ್ಲಿ) ಸಂಧಿ ಪದಗಳನ್ನು ಬಿಡಿಸುವ ಬಗೆಯನ್ನು ಮಾತ್ರ ತಿಳಿಸಿ, ನಂತರ ಸಾಕಷ್ಟು ಉದಾಹರಣೆಗಳನ್ನು ನೀಡಿ, ವಿದ್ಯಾರ್ಥಿಗಳು ಐವರ ಗುಂಪಿನಲ್ಲಿ ಕೂತು ಪಠ್ಯ ಪುಸ್ತಕದಲ್ಲಿ ಬರುವ ಸಂಧಿ ಪದಗಳನ್ನು ಬಿಡಿಸಿ ಬರೆಯುವುದನ್ನು ಕಲಿಯಲಿ. ನಿಮ್ಮ ಮೇಲುಸ್ತುವಾರಿ ಅಗತ್ಯ.
* ಒಂದು ತರಗತಿಯಲ್ಲಿ ಕನ್ನಡ ಸಂಧಿಗಳನ್ನು ಮಾತ್ರ ಬೋಧಿಸಿ ಅದರಲ್ಲೂ ಸ್ವರಸಂಧಿ ಮತ್ತು ವ್ಯಂಜನಸಂಧಿಗಳನ್ನು ತಿಳಿಸಿ. ಸಾಕಷ್ಟು ಉದಾಹರಣೆ ನೀಡಿ ಮಕ್ಕಳಿಗೆ ಲೋಪ, ಆಗಮ, ಆದೇಶ ಸಂಧಿಪದಗಳನ್ನು ಮಿಶ್ರಮಾಡಿಕೊಟ್ಟು ಬಿಡಿಸಿ ಸಂಧಿಯ ಹೆಸರು ಬರೆಯಲು ತಿಳಿಸಿ. ಸಾಧ್ಯವಾದರೆ ಗುಂಪುಗಳಲ್ಲಿಯೇ ಈ ಕಾರ್ಯನಡೆಯಲಿ.
* ಸಂಸ್ಕೃತ ಸ್ವರ ಸಂಧಿಗಳನ್ನು ಪ್ರತಿ ಅವಧಿಯಲ್ಲಿ ಎರಡರಂತೆ, ಎರಡು ಅವಧಿಯಲ್ಲಿ ಬೋಧಿಸಿ ಸಾಕಷ್ಟು ಉದಾಹರಣೆ ನೀಡಿ. ವಿದ್ಯಾರ್ಥಿಗಳು ಗುಂಪಿನಲ್ಲಿ ಚರ್ಚೆಯ ಮೂಲಕ ಸಂಧಿ ಪದಗಳನ್ನು ಬಿಡಿಸಿ, ಸಂಧಿಯ ಹೆಸರು ಬರೆಯಿರಿ.
* ನಾಮಪದದ ವಿವರಣೆ ಕೊಡಿ, ಸಾಕಷ್ಟು ಉದಾಹರಣೆಗಳನ್ನು ನೀಡಿ, ಮಕ್ಕಳಿಂದ ಹೇಳಿಸಿ, ನಾಮ ಪದದ ವಿಧಗಳ ಬಗ್ಗೆ ತಿಳಿಸಿ, ರೂಢನಾಮ, ಅಂಕಿತನಾಮ, ಅನ್ವರ್ಥ ನಾಮದ ಬಗ್ಗೆ ತಿಳಿಸಿ ಉದಾಹರಣೆಯನ್ನು ಪಟ್ಟಿ ಮಾಡಲು ತಿಳಿಸಿ.
* ತರಗತಿಯಲ್ಲಿ ವಿಭಕ್ತಿ ಪ್ರತ್ಯಯ ಹಳಗನ್ನಡ/ಹೊಸಗನ್ನಡ ವಿಭಕ್ತಿ ಪ್ರತ್ಯಯ ಸಹಿತವಾದ ಕೋಷ್ಠಕದ ಪಟ್ಟಿಯನ್ನು ಹಾಕಿಸಿ ಪ್ರತಿದಿನ ಮಕ್ಕಳು ಅದನ್ನು ಹೇಳಲಿ.
* ಉದಾಹರಣೆಗಳ ಮೂಲಕ (ಸರಳವಾಕ್ಯಗಳ ಮೂಲಕ) ಕ್ರಿಯಾಪದದ ಪರಿಕಲ್ಪನೆಯನ್ನು ಮಕ್ಕಳಲ್ಲಿ ಮೂಡಿಸಿ. ಧಾತುವಿನ ಬಗ್ಗೆ ತಿಳಿಸಿ. ಧಾತು ವಿಶೇಷವಾಗಿ ಮಧ್ಯಮಪುರುಷ ಏಕವಚನದಲ್ಲಿರುವುದನ್ನು ಮನವರಿಕೆ ಮಾಡಿಕೊಡಿ, ಕ್ರಿಯಾಪದದ ಹೇರಳ ಉದಾಹರಣೆ ನೀಡಿ, ಧಾತು ಗುರುತಿಸಲು ತಿಳಿಸಿ.
* ಕ್ರಿಯಾಪದದ ಬಗೆಗಳನ್ನು ತಿಳಿಸಲು ಉದಾಹರಿಸುವಾಗ ವಾಕ್ಯಗಳನ್ನೇ ಬಳಸಿ, ಪದಗಳು ಬೇಡ.
* ವಿಧ್ಯರ್ಥ ಕ್ರಿಯಾಪದ ಯಾವ ಯಾವ ಸಂದರ್ಭದಲ್ಲಿ ಬಳಸಲ್ಪಡುತ್ತದೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಿ ಉದಾಹರಣೆಗೆ ಆಜ್ಞೆ, ಹಾರೈಕೆ, ಆಶೀರ್ವಾದ, ಸಮ್ಮತಿ ಇತ್ಯಾದಿಗಳು.
* ಕೆಲಸ ಆಗುವುದಿಲ್ಲ ಕ್ರಿಯೆ ನಡೆಯುವುದಿಲ್ಲ ಎಂಬ ಅರ್ಥವನ್ನು ನೀಡುವ ಪದಗಳೇ ನಿಷೇದಾರ್ಥಕ ಪದಗಳು ಎಂಬುದನ್ನು ಸ್ಪಷ್ಟಪಡಿಸಿ. ಹೇರಳ ಉದಾಹರಣೆ ನೀಡಿ.

* ಕ್ರಿಯೆ ನಡೆಯುವಲ್ಲಿ 'ಸಂಶಯ' ಅಥವಾ ಊಹೆಯನ್ನು ವ್ಯಕ್ತಪಡಿಸುವಂಥ ಕ್ರಿಯಾಪದಗಳೇ ಸಂಭಾವನಾರ್ಥಗಳು ಎಂಬುದನ್ನು ದಿನನಿತ್ಯದ ಉದಾಹರಣೆಗಳನ್ನು ಬಳಸಿ ಹೇಳಿ.
* ಕ್ರಿಯಾ ಪದದ ಮೂರೂ ರೂಪಗಳನ್ನು ತರಗತಿಯಲ್ಲಿ ಸಾಂದರ್ಭಿಕವಾಗಿ ಬಳಸುತ್ತಿರಿ. ಉದಾ : ನೀವು ಹಾಜರಿ ಹಾಕುತ್ತೀರಿ. ಒಬ್ಬ ವಿದ್ಯಾರ್ಥಿಯನ್ನು ಯಾರೋ ಅಧ್ಯಾಪಕರು 'ಸ್ವಲ್ಪ ಕಳಿಸಿಕೊಡಿ' ಎಂದು ಕೇಳುತ್ತಾರೆ. ಆಗ, ಸುರೇಶನು ಅಧ್ಯಾಪಕರ ಕೊಠಡಿಗೆ ಹೋಗಲಿ, ಎನ್ನಿ (ವಿಧ್ಯರ್ಥಕ), 'ವಿದ್ಯಾರ್ಥಿಗಳೆಲ್ಲರು ಕೂರಲಿ' ಎನ್ನುತ್ತೀರಿ (ವಿಧ್ಯರ್ಥಕ), ವಿದ್ಯಾರ್ಥಿನಿಯರು ನಿಲ್ಲಲಿ' ಎನ್ನುತ್ತೀರಿ (ವಿಧ್ಯರ್ಥಕ) ಒಬ್ಬ ವಿದ್ಯಾರ್ಥಿ ಈ ದಿನ ಶಾಲೆಗೆ ಖಂಡಿತಾ ಬರುವುದಿಲ್ಲವೆನ್ನುವುದು ನಿಮಗೆ ಚೆನ್ನಾಗಿ ತಿಳಿದಿದೆ. ಹಾಗಾಗಿ 'ಪವನನು ಇಂದು ಶಾಲೆಗೆ ಬಾರನು (ನಿಷೇದಾತ್ಮಕ) ಎನ್ನುತ್ತೀರಿ. ಹಾಗೆಯೇ ನಾನು ಈ ದಿನ ಉಕ್ತಲೇಖನ ನೀಡೆನು ಎನ್ನುತ್ತೀರಿ. (ನಿಷೇಧಾರ್ಥಕ) ಇನ್ನೊಂದು ಸನ್ನಿವೇಶದಲ್ಲಿ ನೀವು ಹಾಜರಿ ಹಾಕುತ್ತಿರುವಾಗ ದೂರದಲ್ಲಿ ಒಬ್ಬ ವಿದ್ಯಾರ್ಥಿಯು ಶಾಲೆಗೆ ತಡವಾಗಿ ಓಡುತ್ತಾ ಬರುತ್ತಿರುವುದು ಕಾಣುತ್ತದೆ. ಆಗ ಈ ದಿನ ನರಸಿಂಹನು ಶಾಲೆಗೆ ಬಂದಾನು (ಸಂಭಾವನಾರ್ಥಕ) ಎನ್ನಿ. ಹೀಗೆ ವ್ಯಾಕರಣಾಂಶಗಳನ್ನು ನಾವು ದಿನನಿತ್ಯದ ಮಾತಿನಲ್ಲಿ ತರಗತಿಯಲ್ಲಿ ಬಳಸುತ್ತಾ ಹುಡುಗರ ಮನಸ್ಸಿನಲ್ಲಿ ನೆನಪಿಸುತ್ತಿದ್ದರೆ. ವ್ಯಾಕರಣ ಪಾಠ ಬಲು ಸುಲಭವಾಗುತ್ತದೆ.
* ಅಂತೆಯೇ ಭೂತಕಾಲ, ವರ್ತಮಾನಕಾಲ ಹಾಗೂ ಭವಿಷ್ಯತ್ ಕಾಲಗಳನ್ನು ವಿದ್ಯಾರ್ಥಿಗಳಿಗೆ ಪಾಠ ಹೇಳಿದ ನಂತರ, ಅವುಗಳ ಕಾಲ ಸೂಚಕ ಪ್ರತ್ಯಯಗಳು ಎದ್ದು ಕಾಣುವಂತೆ. ಒಂದು ಚಾರ್ಟ್ ಹಾಕಿ. ನಿಮ್ಮ ದಿನನಿತ್ಯದ ತರಗತಿಯ ಸಂಭಾಷಣೆಯಲ್ಲಿ ನಿಮ್ಮ ಕ್ರಿಯೆಗಳನ್ನು ಹೇಳುವಾಗ ವ್ಯಾಕರಣಾತ್ಮಕವಾಗಿ ಹೇಳಿ. ಉದಾಹರಣೆಗೆ : ನಾನು ಕಳೆದ ತರಗತಿಯಲ್ಲಿ ಕನ್ನಡ ಸಂಧಿಗಳನ್ನು ತಿಳಿಸಿದೆನು (ಭೂತಕಾಲ), ಇಂದು ಕಾಲಗಳ ಬಗ್ಗೆ ತಿಳಿಸುತ್ತೇನೆ. (ವರ್ತಮಾನಕಾಲ) ನಾಳೆ ಛಂದಸ್ಸಿನ ವಿಚಾರಗಳನ್ನು ತಿಳಿಸುವೆನು. (ಭವಿಷ್ಯತ್ ಕಾಲ) ಹೀಗೆ ಮಾತನಾಡುತ್ತಾ; ನಾನು ಹೇಳಿದ್ದು ಯಾವ ಕಾಲದ ವಾಕ್ಯ?' ಎಂದು ಪ್ರಶ್ನಿಸುವುದನ್ನು ಮರೆಯಬೇಡಿ.
* ಪುರುಷಾರ್ಥಕ ಸರ್ವನಾಮಗಳನ್ನು ಕಲಿಸುವಾಗ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯ ಮೂಲಕ ಉತ್ತಮ ಪುರುಷ(ನಾನು), ಮಧ್ಯಮ ಪುರುಷ(ನೀನು), ಪ್ರಥಮ ಪುರುಷ(ಅವನು) ಎಂಬುದನ್ನು ಮನವರಿಕೆ ಮಾಡಿಕೊಡಿ. ಉದಾ : ಸತೀಶನು ನಿಮ್ಮೊಂದಿಗೆ ಮಾತನಾಡುವಾಗ ಸುರೇಶ ಉತ್ತಮ ಪುರುಷ. ನೀವು ಮಧ್ಯಮಪುರುಷ. ನೀವು ಸುರೇಶನಿಗೆ ಹೇಳುವಾಗ ನೀವು ಉತ್ತಮ ಪುರುಷ ಸುರೇಶ (ಕೇಳುಗ) ಮಧ್ಯಮ ಪುರುಷ. ನೀವಿಬ್ಬರೂ ಮಾತನಾಡುವಾಗ ಯಾರನ್ನು ಕುರಿತು ಮಾತನಾಡುತ್ತೀರೋ ಅವರು (ಅಲ್ಲಿ ಇರುವುದಿಲ್ಲ) ಪ್ರಥಮ ಪುರುಷ, ಎಂಬುದನ್ನು ಮನವರಿಕೆ ಮಾಡಿಕೊಡಿ.
* ವಿಭಕ್ತಿ ಪ್ರತ್ಯಯಗಳ ಪಾಠ ಮಾಡಿದ ನಂತರ ವಿದ್ಯಾರ್ಥಿಗಳನ್ನು 7 ಜನರ ಗುಂಪುಗಳನ್ನಾಗಿ ವಿಂಗಡಿಸಿ ಪ್ರತಿಯೊಂದು ತಂಡವೂ ಒಂದೊಂದು ವಿಭಕ್ತಿ ಪ್ರತ್ಯಯದ ಮಾತನ್ನು ವೇದಿಕೆ ಮೇಲೆ ಸಂಭಾಷಿಸಿ (ಆವಿಭಕ್ತಿ–ಪ್ರತ್ಯಯದ) ಫಲಕ ಪ್ರದರ್ಶಿಸುವ ಚಟುವಟಿಕೆ ನಡೆಸಿ.
* ವ್ಯಾಕರಣ ಪಾಠಗಳು ಒಂದು ದಿನದ ಪಾಠಗಳಲ್ಲಿ ಅವುಗಳನ್ನು ಬೋಧಿಸಿದ ನಂತರ ಆಗಾಗ ನೆನಪಿಸದಿದ್ದರೆ ಅವು ಬಳಸದೆ ಬಿಟ್ಟ ಆಯುಧದಂತೆ ತುಕ್ಕು ಹಿಡಿಯುವುದು ಖಚಿತ. ಆದ್ದರಿಂದ ಅವುಗಳನ್ನ ಆಗಾಗ ನೆನಪಿಸಿ ಬಳಸುವುದು ಉಚಿತ.

**ಕ್ರಿಯಾರೂಪಕಗಳು**

| ಧಾತು | ವಿಧ್ಯರ್ಥಕ ಕ್ರಿಯಾ ರೂಪ "ಅಲಿ" | ನಿಷೇಧಾರ್ಥಕ ಕ್ರಿಯಾ ರೂಪ (ಕ್ರಿಯೆ ನಡೆಯಲ್ಲ) | ಸಂಭಾವನಾರ್ಥಕ ಕ್ರಿಯಾರೂಪ 'ಅನುಮಾನ' |
|---|---|---|---|
| ಬರೆ | ಬರೆಯಲಿ | ಬರೆಯನು | ಬರೆದಾನು |
| ನೋಡು | ನೋಡಲಿ | ನೋಡನು | ನೋಡಿಯಾನು |
| ಓದು | ಓದಲಿ | ಓದನು | ಓದಿಯಾನು |
| ಬಾಗು | ಬಾಗಲಿ | ಬಾಗನು | ಬಾಗಿಯಾನು |
| ತಿನ್ನು | ತಿನ್ನಲಿ | ತಿನ್ನನು | ತಿಂದಾನು |
| ಓಡು | ಓಡಲಿ | ಓಡನು | ಓಡಿಯಾನು |
| ನಲಿ | ನಲಿಯಲಿ | ನಲಿಯನು | ನಲಿದಾನು |
| ಸುಳಿ | ಸುಳಿಯಲಿ | ಸುಳಿಯನು | ಸುಳಿದಾನು |
| ಕುಣಿ | ಕುಣಿಯಲಿ | ಕುಣಿಯನು | ಕುಣಿದಾನು |
| ಬಿಡು | ಬಿಡಲಿ | ಬಿಡನು | ಬಿಟ್ಟಾನು |
| ಹೆಚ್ಚು | ಹೆಚ್ಚಲಿ | ಹೆಚ್ಚನು | ಹಚ್ಚಿಯಾನು |
| ಮಾಡು | ಮಾಡಲಿ | ಮಾಡನು | ಮಾಡಿಯಾನು |
| ಕಡಿಮೆ | ಕಡಿಮೆಯಾಗಲಿ | ಕಡಿಮೆಯಾಗದು | ಕಡಿಮೆಯಾದೀತು |

**ಸಮಾಸ**

"ಸಮಾಸ ರಚನೆಯಲ್ಲಿ ಬರುವ ಮೊದಲನೆಯ ಪದವನ್ನು 'ಪೂರ್ವ' ಪದವೆಂದೂ ಎರಡನೆಯ ಪದವನ್ನು 'ಉತ್ತರ' ಪದವೆಂದೂ ಸಮಾಸ ಪದವನ್ನು ಬಿಡಿಸಿ ಬರೆಯುವುದನ್ನು "ವಿಗ್ರಹ ವಾಕ್ಯವೆಂದೂ" ಕರೆಯುವರು.

"ಸಮಾಸದಲ್ಲಿ ಪೂರ್ವ ಮತ್ತು ಉತ್ತರ ಪದಗಳೆರಡೂ ಸಂಸ್ಕೃತ ಪದಗಳಾಗಿರಬೇಕು ಅಥವಾ ಎರಡೂ ಕನ್ನಡ ಪದಗಳಾಗಿರಬೇಕು.

"ಒಂದು ಕನ್ನಡ ಇನ್ನೊಂದು ಸಂಸ್ಕೃತ ಪದವಾದಾಗ ಅದು ಅರಿಸಮಾಸವಾಗುತ್ತದೆ ಅಥವಾ ಅರಿಸಮಾಸವೆನಿಸುತ್ತದೆ. ಇದು ನಿಷಿದ್ಧ ಆದರೆ ಬಿರುದುಗಳಿಗೆ, ಪೂರ್ವಕವಿ ಪ್ರಯೋಗಗಳಿಗೆ ಇದು ಅನ್ವಯಿಸುವುದಿಲ್ಲ.

## ಕೋಷ್ಟಕ

| ಕ್ರ ಸಂ. | ಸಮಾಸಗಳ ಹೆಸರುಗಳು | ಲಕ್ಷಣ | ಸಮಾಸಗಳ ತಯಾರಿಕೆ ಕೋಷ್ಟಕ ಉದಾಹರಣೆ | ಪೂರ್ವಪದ | ಉತ್ತರ ಪದ | ಸಮಸ್ತ ಪದ |
|---|---|---|---|---|---|---|
| 1. | ತತ್ಪುರುಷ ಸಮಾಸ | ಉತ್ತರ ಪದ ಪ್ರಧಾನ – ಸಮಸ್ತ ಪದ ರಚನೆಗಳೇ ತತ್ಪುರುಷ ಸಮಾಸ | ವಯೋವೃದ್ಧ | ವಯಸ್ಸಿನಿಂದ | ವೃದ್ಧ | ವಯೋವೃದ್ಧ |
| 2. | ಕರ್ಮಧಾರಯ ಸಮಾಸ | ವಿಶೇಷಣ ಮತ್ತು ವಿಶೇಷ್ಯ ಸಂಬಂಧವಿದ್ದೂ ಆದರಿಂದ ಉಂಟಾಗುವ ಸಮಾಸ | ಕೇಸಕ್ಕಿ | ಕೆಂಪಾದ | ಅಕ್ಕಿ | ಕೇಸಕ್ಕಿ |
| 3. | ದ್ವಿಗು ಸಮಾಸ | ಪೂರ್ವ ಪದ ಸಂಖ್ಯಾವಾಚಕವಾಗಿದ್ದೂ, ಉತ್ತರ ಪದ ನಾಮವಾಚಕವಾಗಿದ್ದೂ, ಅವೆರಡೂ ಸೇರಿ ಆಗುವ ಸಮಾಸ | ಒಗ್ಗಟ್ಟು | ಒಂದು | ಕಟ್ಟು | ಒಗ್ಗಟ್ಟು |
| 4. | ಅಂಶಿ ಸಮಾಸ | ಪೂರ್ವೋತ್ತರ ಪದಗಳು ಅಂಶ, ಅಂಶಿ ಸಂಬಂಧದಿಂದ ಕೂಡಿದ್ದೂ ಪೂರ್ವ ಪದದ ಅರ್ಥ ಪ್ರಧಾನವಾಗಿರುವ ಸಮಾಸ | ಮುಂಗೈ | ಕೈಯ | ಮುಂದು | ಮುಂಗೈ |
| 5. | ದ್ವಂದ್ವ ಸಮಾಸ | ಎಲ್ಲ ಪದಗಳ ಅರ್ಥವೂ ಪ್ರಧಾನ ಆಗಿರುವ ಸಮಾಸ | ದೀನಾನಾಥರು | ಧೀನನೂ | ಅನಾಥನೂ | ದೀನಾನಾಥರೂ |
| 6. | ಕ್ರಿಯಾ ಸಮಾಸ | ಪೂರ್ವಪದ (ದ್ವಿತೀಯ ವಿಭಕ್ತಿ) ನಾಮಪದವಾಗಿದ್ದೂ, ಉತ್ತರ ಪದ ಕ್ರಿಯಾಪದವಾಗಿರುವ ಸಮಾಸ | ಕೈಮುಗಿ | ಕೈಯನ್ನು | ಮುಗಿ | ಕೈಮುಗಿ |

| ಕ್ರ ಸಂ. | ಸಮಾಸಗಳ ಹೆಸರುಗಳು | ಲಕ್ಷಣ | ಸಮಾಸಗಳ ತಯಾರಿಕೆ ಕೋಷ್ಟಕ ಉದಾಹರಣೆ | ಪೂರ್ವಪದ | ಉತ್ತರ ಪದ | ಸಮಸ್ತ ಪದ |
|---|---|---|---|---|---|---|
| 7. | ಬಹುವ್ರೀಹಿ ಸಮಾಸ | ನಾಮಪದಗಳು ಸೇರಿ ಸಮಾಸವಾದಾಗ ಬೇರೊಂದು ಪದದ (ಅನ್ಯ ಪದದ) ಅರ್ಥ ಪ್ರಧಾನ ಆಗಿರುವ ಸಮಾಸ | ಮುಕ್ಕಣ್ಣ | ಮೂರು | ಕಣ್ಣು ಉಳ್ಳವನು ಅವನೋ ಅವನು | ಮುಕ್ಕಣ್ಣ |
| 8. | ಗಮಕ ಸಮಾಸ | ನಾಮಪದದಲ್ಲಿ ಸರ್ವನಾಮ ಕೃದಂತ ಇತ್ಯಾದಿಗಳಲ್ಲಿ ಒಂದು ಇದ್ದರೆ ಆಗುವ ಸಮಾಸ | ಆ ಹುಡುಗ | ಅವನು | ಹುಡುಗ | ಆ ಹುಡುಗ |

**'ಅಲಂಕಾರ' ಬೋಧನೆ–ಮಾರ್ಗದರ್ಶಿ**

* 'ಅಲಂಕಾರ' ಎನ್ನುವುದು ಭಾಷೆಯ ಚೆಲುವನ್ನು ಹೆಚ್ಚಿಸಿ, ಓದುಗರ ಗಮನವನ್ನು ಸೆಳೆಯಲು ಲೇಖಕರು ಬಳಸುವ ಒಂದು ತಂತ್ರ.
* ಅಲಂಕಾರಗಳಲ್ಲಿ ಪ್ರಧಾನವಾಗಿ ಎರಡು ವಿಭಾಗಗಳಿವೆ. ಒಂದು ಶಬ್ದಾಲಂಕಾರ:ಇನ್ನೊಂದು ಅರ್ಥಾಲಂಕಾರ.
* ಅರ್ಥಾಲಂಕಾರವು ಕಾವ್ಯದ ಅಂತಃಸತ್ವಕ್ಕೆ ಒತ್ತು ನೀಡಿದರೆ, ಶಬ್ದಾಲಂಕಾರವು ಬಾಹ್ಯಾಂಶಗಳಾದ ಅಕ್ಷರಗಳ ಪುನರುಕ್ತಿಗೆ ಆದ್ಯತೆ ನೀಡುತ್ತದೆ.
* ಶಬ್ದಾಲಂಕಾರಗಳ ಬಗೆಗಳು ಮೂರು ಆದರೆ ಅರ್ಥಾಲಂಕಾರಗಳ ಸಂಖ್ಯೆ ಇಷ್ಟೇ ಎಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಏಕೆಂದರೆ ಅರ್ಥಾಲಂಕಾರಗಳು ಹೊಸದಾಗಿ ಹುಟ್ಟುತ್ತವೆ. ಕವಿಗಳು ಬಳಸದಿದ್ದರೆ ನಶಿಸುತ್ತವೆ. ಹಾಗಾಗಿ ಒಂದು ಭಾಷೆಯಲ್ಲಿ ಇಷ್ಟೇ ಅರ್ಥಾಲಂಕಾರ ಗಳಿವೆಯೆಂದು ಸ್ಪಷ್ಟವಾಗಿ ಹೇಳಲು ಸಾಧ್ಯವಿಲ್ಲ. ಆದರೆ ಆವರೆಗೆ ಬಳಕೆಯಾಗಿರುವ ಅಲಂಕಾರಗಳನ್ನು ಹೆಚ್ಚು ಕಡಿಮೆ ಪಟ್ಟಿ ಮಾಡಲು ಸಾಧ್ಯವಿದೆ.
* ಅರ್ಥಾಲಂಕಾರಗಳನ್ನು ಅರ್ಥೈಸಲು ಮೊದಲು ಕೊಟ್ಟಿರುವ ಪ್ರಶ್ನಾರೂಪದ ವಾಕ್ಯದ ಕಥಾ ಸಂದರ್ಭ ಮತ್ತು ಅರ್ಥವನ್ನು ಸ್ಪಷ್ಟವಾಗಿ ತಿಳಿಯಬೇಕು.
* ಕಲಿತಿರುವ ದತ್ತ ಅಲಂಕಾರದ ಪ್ರಮುಖಾಂಶಗಳೊಂದಿಗೆ ನೀಡಿರುವ ವಾಕ್ಯದ ಪದಗಳನ್ನು ತಾಳೆ ಮಾಡಿ, ಹೋಲಿಸಿ ನೋಡಬೇಕು. ನಿರ್ದಿಷ್ಟ ಅಲಂಕಾರದ ವಿವರಣೆಯನ್ನು ನೆನಪಿಸಿಕೊಂಡು ತಾವು ಆಯ್ಕೆ ಮಾಡಿ ಜೋಡಿಸಿರುವ ಅಲಂಕಾರವು ನಿರ್ದಿಷ್ಟವಾಕ್ಯದೊಂದಿಗೆ ನಿಖರವಾಗಿ ಹೊಂದಾಣಿಕೆ ಆಗುತ್ತದೆಯೇ ಎಂಬುದನ್ನು ಸ್ಪಷ್ಟಪಡಿಸಿಕೊಂಡು, ನಿರ್ಧರಿಸಿ ಬರೆಯುವುದು.
* ವಿದ್ಯಾರ್ಥಿಗಳ ಪರೀಕ್ಷಾದೃಷ್ಟಿಯಿಂದ ಉಪಮಾಲಂಕಾರವು ಹೆಚ್ಚು ಮುಖ್ಯವಾದುದು. ಸಂಸ್ಕೃತದಲ್ಲಿ ಉಪಮಾ ಎಂದರೆ ಹೋಲಿಕೆ. ಅಂದರೆ ಒಂದು ಅಂಶವನ್ನು ಇನ್ನೊಂದು ಅಂಶದೊಂದಿಗೆ ಹೋಲಿಸುವ ಅಲಂಕಾರವೇ ಉಪಮಾಲಂಕಾರ.
* ಉಪಮಾಲಂಕಾರದಲ್ಲಿ ಮುಖ್ಯವಾಗಿ ಉಪಮಾನ, ಉಪಮೇಯ, ಉಪಮಾವಾಚಕ ಮತ್ತು ಸಾಧಾರಣ ಧರ್ಮಗಳೆಂಬ ನಾಲ್ಕು ಅಂಶಗಳಿರುತ್ತವೆ.
* ಉಪಮಾಲಂಕಾರದಲ್ಲಿ ಅಂತೆ, ಹಾಗೆ, ವೋಲ್, ವೊಲ್, ವೊಲು, ಹಂಗೆ, ಅಂದದಿ ಮೊದಲಾದ ಉಪಮಾವಾಚಕಗಳು ಬಳಕೆಯಾಗಿರುತ್ತವೆ.
* ರೂಪಕ ಅಲಂಕಾರವು ಉಪಮೇಯ ಮತ್ತು ಉಪಮಾನಗಳಲ್ಲಿ ಅಭೇದವನ್ನು ಹೊಂದಿರುವುದು ವಿಶೇಷ. ಗೊತ್ತಿರುವ ಪಠ್ಯದಲ್ಲಿ ಉಪಮೇಯ ಉಪಮಾನಗಳನ್ನು ಗುರುತಿಸಬಹುದಾದರೂ, ನಿಯಮಗಳ ಪ್ರಕಾರ ನೋಡಿದಾಗ ಅವುಗಳಲ್ಲಿ ಅಭೇದ ಇರುತ್ತದೆ.

* ಅಲಂಕಾರಗಳನ್ನು ಪಾಠ ಮಾಡುವಾಗ ಸಾಕಷ್ಟು ಉದಾಹರಣೆಗಳನ್ನು ಕೊಡುವುದು ಅಪೇಕ್ಷಣೀಯ. 'ಉದಾಹರಣೆಗಳ ಮೂಲಕ ಸೂತ್ರದ ಕಡೆಗೆ' ಎಂಬ ನಿಯಮ ಬಹುಮುಖ್ಯ.
* ಮಕ್ಕಳಿಗೆ ಪರಿಚಯವಿರುವ ಜನಪದ ಹಾಡು, ಭಕ್ತಿ ಗೀತೆ, ಭಾವಗೀತೆಗಳ ಅಲಂಕಾರಿಕ ವಾಕ್ಯಗಳನ್ನು ಸಂಗ್ರಹಿಸಿ, ಬಳಸುವುದು ಪರಿಣಾಮಕಾರಿ.
* ಒಂದು ವಿಷಯವನ್ನು ಪ್ರತಿಯೊಬ್ಬ ವಿದ್ಯಾರ್ಥಿಗೂ ನೀಡಿ 5-6 ವಾಕ್ಯಗಳಲ್ಲಿ ಅಲಂಕಾರವನ್ನು ಬಳಸಿ ಬರೆಯುವಂತೆ ತಿಳಿಸಬಹುದು.
* ತರಗತಿಯಲ್ಲಿ ವಿದ್ಯಾರ್ಥಿಗಳೊಡನೆ ಸಂಭಾಷಣೆ ನಡೆಸುವಾಗ, ಸಾಂದರ್ಭಿಕವಾಗಿ ಅಲಂಕಾರಿಕ ವಾಕ್ಯಗಳನ್ನು ಬಳಸುವುದರಿಂದ ಕಲಿಕಾ ಸಾಮರ್ಥ್ಯ ಹೆಚ್ಚಿಸಲು ಸಾಧ್ಯ.
* ಗದ್ಯ-ಪದ್ಯಗಳಲ್ಲಿ ಬರುವ ಅಲಂಕಾರಿಕ ವಾಕ್ಯಗಳಿಗೆ ಅಡಿಗೆರೆ ಹಾಕಿಸಬಹುದು.

## ಛಂದಶ್ಶಾಸ್ತ್ರ ಬೋಧನೆ – ಕೆಲವು ಸಲಹೆಗಳು

- ➢ ಸ್ವರಗಳನ್ನು ಕಪ್ಪು ಹಲಗೆ ಮೇಲೆ ಬರೆಯಿರಿ. ಅನಂತರ ಲಘು ಮತ್ತು ಗುರುಗಳ ಬಗ್ಗೆ, ಅವುಗಳ ಬೆಲೆಗಳನ್ನು ತಿಳಿಸಿ ಆಮೇಲೆ ಸ್ವರಾಕ್ಷರಗಳಿಗೆ ಲಘು ಮತ್ತು ಗುರು ಚಿಹ್ನೆಯನ್ನು ಹಾಕಿರಿ.
- ➢ ಯಾವುದಾದರೊಂದು ವ್ಯಂಜನಾಕ್ಷರಕ್ಕೆ ಕಾಗುಣಿತವನ್ನು ವಿದ್ಯಾರ್ಥಿಯಿಂದ ಕಪ್ಪು ಹಲಗೆ ಮೇಲೆ ಬರೆಯಿಸಿರಿ. ಅನಂತರ ಅವುಗಳಿಗೆ ಲಘು ಗುರುಗಳನ್ನು ಹಾಕಿರಿ.
- ➢ ಸಜಾತೀಯ ಮತ್ತು ವಿಜಾತೀಯ ಸಂಯುಕ್ತಾಕ್ಷರಗಳಿರುವ ಪದಗಳನ್ನುಳ್ಳ ವಾಕ್ಯಗಳನ್ನು ಕಪ್ಪು ಹಲಗೆ ಮೇಲೆ ಬರೆಯಿರಿ ಅನಂತರ ಅವುಗಳಿಗೆ ಲಘು, ಗುರುಗಳನ್ನು ಹಾಕಿ ತೋರಿಸಿ.
- ➢ ಈಗ ಒಂದು ಅಕ್ಷರವು ಗುರುವಾಗುವ ಸಂದರ್ಭಗಳನ್ನು ಮಕ್ಕಳಿಂದಲೇ ಹೇಳಿಸಿ, ಒಂದೊಂದಾಗಿ ಕಪ್ಪು ಹಲಗೆ ಮೇಲೆ ಬರೆಯಿರಿ.
- ➢ ಷಟ್ಪದಿಯಲ್ಲಿ ಮೂರು ಮತ್ತು ಆರನೆಯ ಸಾಲಿನ ಕೊನೆಯ ಅಕ್ಷರಗಳು ಲಘುವಾಗಿದ್ದರೂ ಗುರುವೆಂದು ಪರಿಗಣಿತವಾಗುತ್ತವೆ. ಏಕೆಂದರೆ ಗಮಕದಲ್ಲಿ ಹಾಡುವಾಗ ಮೂರು ಮತ್ತು ಆರನೆಯ ಸಾಲಿನ ಕೊನೆಯ ಅಕ್ಷರಗಳನ್ನು ಲಘುವಾಗಿದ್ದರೂ ಎಳೆದು ಹೇಳುತ್ತಾರೆ ಎಂಬ ಅಂಶವನ್ನು ತಿಳಿಸಿ.
- ➢ ಛಂದಸ್ಸು 'ಶ್ರುತಿ ಪ್ರಧಾನವಾದದ್ದು' ಕೇಳುವುದನ್ನು ಅನುಸರಿಸಿ ಪ್ರಸ್ತಾರ ಕ್ರಮ ರಚನೆಯಾಗುತ್ತದೆ.
- ➢ ಪ್ರಾಸಬದ್ಧವಾದ, ಲಯಬದ್ಧವಾದ ಹಿರಿಯ ಕವಿಗಳ ಚಿಕ್ಕ ಚಿಕ್ಕ ಪದ್ಯಗಳನ್ನು ಹೇಳಿ, ಮಕ್ಕಳು ಪ್ರಾಸ ಲಯಗಳನ್ನು ಗುರುತಿಸುವಂತೆ ಹೇಳಬಹುದು.

- ಗ್ರಂಥಾಲಯದಲ್ಲಿ ಹಾಗೂ ಲಯಬದ್ಧವಾದ ಮಕ್ಕಳ ಪದ್ಯಗಳನ್ನು ಬರೆದು ತರುವಂತೆ ಹೇಳುವುದು. ತರಗತಿಯಲ್ಲಿ ಮಕ್ಕಳಿಂದಲೇ ಅವುಗಳನ್ನು ಲಯಬದ್ಧವಾಗಿ ವಾಚಿಸುವುದು.
- ಅ.ರಾ.ಮಿತ್ರ ಅವರು ಬರೆದಿರುವ 'ಛಂದೋಮಿತ್ರ' ಕೃತಿಯಲ್ಲಿನ ಲಕ್ಷ್ಯ– ಲಕ್ಷಣ ಪದ್ಯಗಳನ್ನು ಮಕ್ಕಳಿಗೆ ಬರೆಸಿ, ಅವುಗಳ ಅರ್ಥ ಹೇಳಿ, ಪ್ರಸ್ತಾರ ಹಾಕಿಸಿದರೆ ಕಲಿಕೆ ಸಂತಸದಾಯಕವಾದೀತು.
- ಅಕ್ಷರ ಛಂದಸ್ಸನ್ನು ಪರಿಚಯಿಸುವಾಗ ತರಗತಿಯಲ್ಲಿರುವ ವಿದ್ಯಾರ್ಥಿಗಳಲ್ಲಿ ಮೂರು ಅಕ್ಷರದ ಹೆಸರನ್ನು ಬರೆದುಕೊಂಡು ಲಘು ಗುರು ಹಾಕಿ, ಅವರ ಹೆಸರಿನ ಗಣ ಯಾವುದೆಂದು ತಿಳಿಯಲು ಅವಕಾಶ ಮಾಡಿಕೊಡಿ. ಹಾಗೆಯೇ ಮೂರು ಅಕ್ಷರದ ಪ್ರಾಣಿಗಳು, ಊರಿನ ಹೆಸರನ್ನು ಬರೆದು ಗಣ ಕಂಡು ಹಿಡಿಯಲು ತಿಳಿಸಿ.

ಉದಾಹರಣೆ :

| | | |
|---|---|---|
| ರಮೇಶ್ (U — U) | = | ಜಗಣ |
| ರಂಗಪ್ಪ (— — U) | = | ತಗಣ |
| ಮಂಜುಳ (— U U) | = | ಭಗಣ |
| ರೋಹಿಣಿ (— U U) | = | ಭಗಣ |
| ಹುಬ್ಬಳ್ಳಿ (— — U) | = | ತಗಣ |
| ಶ್ರೀಲಂಕಾ (— — —) | = | ಮಗಣ |
| ನವಿಲು (U U U) | = | ನಗಣ |

**ಷಟ್ಪದಿ**

ಆರು ಪಾದಗಳುಳ್ಳ ಪದ್ಯವೇ ಷಟ್ಪದಿ. ಇದರ 1.2.4.5ನೆಯ ಪಾದಗಳು ಪರಸ್ಪರ ಸಮನಾಗಿರುತ್ತದೆ. 3ನೆಯ ಮತ್ತು 6ನೆಯ ಪಾದಗಳು ಪರಸ್ಪರ ಸಮನಾಗಿರುತ್ತದೆ. 3 ಮತ್ತು 6ನೆಯ ಪಾದ 1ನೆಯ ಪಾದದ ಒಂದೂವರೆಯಷ್ಟಿದ್ದು – ಒಂದು ಗುರುವಿನಿಂದ ಕೂಡಿರುತ್ತದೆ. ಷಟ್ಪದಿಯಲ್ಲಿ ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ ಮತ್ತು ವಾರ್ಧಕಗಳೆಂಬ 6 ವಿಧಗಳಿವೆ.

**ಭಾಮಿನಿ ಷಟ್ಪದಿಯ ಲಕ್ಷಣ:**

"ಮಾತ್ರಾಗಣ ನಿಯಮದಿಂದ ಕೂಡಿರುತ್ತದೆ"

ಆರು ಸಾಲಿನ ಪದ್ಯ 1–2–4–5ನೆಯ ಸಾಲುಗಳಲ್ಲಿ ಮೂರು ಮಾತ್ರೆಯ ಗಣದ ನಂತರ ನಾಲ್ಕು ಮಾತ್ರೆಯ ಎರಡೆರಡು ಗಣಗಳಿರುತ್ತವೆ. ಮೂರು ಮತ್ತು ಆರನೆಯ ಪಾದಗಳಲ್ಲಿ ಮೂರು ಮಾತ್ರೆಯ ಗಣದ ನಂತರ ನಾಲ್ಕು ಮಾತ್ರೆಯ ಗಣಗಳು ಮೂರು ಮೂರು ಮತ್ತು ಒಂದು ಗುರು ಇರುತ್ತದೆ. ಒಟ್ಟು ಮಾತ್ರೆಗಳು 102.

| 3 | 4 | 3 | 4 | |
|---|---|---|---|---|
| U U U | — U U | — U | — — | |
| ಇವಗೆ | ಭಾಮಿನಿ | ಹುಚ್ಚು | ಒಂದೇ | 14 |

| 3 | 4 | 3 | 4 | |
|---|---|---|---|---|
| U U U | — U U | — U | — U U | |
| ಸಮನೆ | ಮಾತ್ರೆಗ | ಳೇಳ | ಕೂಡತ | 14 |

| 3 | 4 | 3 | 4 | 3 | 4 | 2 | |
|---|---|---|---|---|---|---|---|
| U U U | — U U | — U | — U U | U U U | — U U | — | |
| ಕ್ರಮವ | ತಪ್ಪದೆ | ಮೂರು | ನಾಲ್ಕರ | ತೆರದಿ | ಏಳು ಸ | ಲ | 23 |

| 3 | 4 | 3 | 4 | |
|---|---|---|---|---|
| U U U | U U — | — U | — U U | |
| ಸವೆಯ | ದಿರೆ ಮ | ತ್ತೊಂದು | ಮಂಡಲ | 14 |

| 3 | 4 | 3 | 4 | |
|---|---|---|---|---|
| U U U | U U U U | — U | — U U | |
| ಹವಣಿ | ಸುತ ಬರೆ | ಲೇಸು | ಕೇಳಿರಿ | 14 |

| 3 | 4 | 3 | 4 | 3 | 4 | 2 | |
|---|---|---|---|---|---|---|---|
| U U U | — U U | U U U | U U U U | U U U | U U U U | — | |
| ಬೆವರ | ಬೇಡಿರಿ | ಕೊನೆಗೆ | ಗುರುಕೃಪೆ | ಯಿರಲು | ಬದುಕುವ | ನು | 23 |

$3 + 4 + 3 + 4 = 14$

$3 + 4 + 3 + 4 = 14$

$3 + 4 + 3 + 4 + 3 + 4 + 2 = 23$

$3 + 4 + 3 + 4 = 14$

$3 + 4 + 3 + 4 = 14$

$3 + 4 + 3 + 4 + 3 + 4 + 2 = 23$

**ವಾರ್ಧಕ ಷಟ್ಪದಿ**

"ಮಾತ್ರಾ ನಿಯಮದಿಂದ ಕೂಡಿರುತ್ತದೆ"

ಆರು ಪಾದಗಳಿರುವ ಪದ್ಯ 1, 2, 4, 5 ನೆಯ ಸಾಲುಗಳು ಸಮನಾಗಿದ್ದು 5 ಮಾತ್ರೆಯ 4 ಗಣಗಳು ಬರುತ್ತವೆ. 3 ಮತ್ತು 6ನೆಯ ಸಾಲಿನಲ್ಲಿ 5 ಮಾತ್ರೆಯ 6 ಗಣಗಳು ಇದ್ದು ಅಂತ್ಯದಲ್ಲಿ ಒಂದು ಗುರು ಇರುತ್ತದೆ ಒಟ್ಟು ಮಾತ್ರೆಗಳು 144

| | | | | |
|---|---|---|---|---|
| 5 | 5 | 5 | 5 | |
| ಶರಕೆ ಪರಿ | ವರ್ಧಿನಿಗೆ | ನಾಲ್ಕು ಮಾ | ತ್ರೆಯ ಹರಹು | 5 x 4 = 20 |

| | | | | |
|---|---|---|---|---|
| 5 | 5 | 5 | 5 | |
| ಪರ ಭೋಗ | ಷಟ್ಪದಿಗೆ | ಮೂರು ಮಾ | ತ್ರೆಯ ಮಣಿತ | 5 x 4 = 20 |

| | | | |
|---|---|---|---|
| 5 | 5 | 5 | 5 |
| ಅರಿಯಿರೈ | ಕುಸುಮ | ವಾರ್ಧಕಗಳಿಗೆ | ಐದು ಮಾತ್ರೆಯಗಣನೆ |

| | | |
|---|---|---|
| 5 | 2 | |
| ತಾನಿರ್ಪು | ದು | 5 x 6 = 30 + 2 = 32 |

| | | | | |
|---|---|---|---|---|
| 5 | 5 | 5 | 5 | |
| ಹರವಾದ | ಭಾಮಿನಿಯು | ಮಿಶ್ರಗಣ | ವೆನ್ನುವರು | 5 x 4 = 20 |

| | | | | |
|---|---|---|---|---|
| ಬರುವುದಿರ | ಲೀ ಮಾತ್ರೆ | ಮೂರು ನಾ | ಲ್ಕರ ಮೇಳ | 5 x 4 = 20 |

| | | | |
|---|---|---|---|
| 5 | 5 | 5 | 5 |
| ಸುರುಚಿರದ | ಗಮಕದಿ ಸ | ರಾಗದಲಿ | ಹಾಡಲಿಕೆ |

| | | | |
|---|---|---|---|
| 5 | 5 | 2 | |
| ಮಧುರವೀ | ಷಟ್ಪದಿಗ | ಳು | 5 x 6 = 30 + 2 = 32 |

5 + 5 + 5 + 5 = 20
5 + 5 + 5 + 5 = 20
5 + 5 + 5 + 5 + 5 + 5 + 2 = 32
5 + 5 + 5 + 5 = 20
5 + 5 + 5 + 5 = 20
5 + 5 + 5 + 5 + 5 + 5 + 2 = 32

**ಕಂದ ಪದ್ಯದ ಲಕ್ಷಣ**

ಮಾತ್ರಾಗಣ ನಿಯಮದಿಂದ ಕೂಡಿರುತ್ತದೆ. ನಾಲ್ಕು ಪಾದಗಳುಳ್ಳ ಪದ್ಯ 1 ಮತ್ತು 3ನೆಯ ಸಾಲುಗಳು ಸಮನಾಗಿದ್ದು 4 ಮಾತ್ರೆಯ 3 ಗಣಗಳು ಬರುತ್ತವೆ.

2 ಮತ್ತು 4ನೆಯ ಸಾಲುಗಳು ಸಮನಾಗಿದ್ದು 4 ಮಾತ್ರೆಯ 5 ಗಣಗಳು ಬರುತ್ತವೆ.

ಮೊದಲ ಎರಡು ಸಾಲುಗಳ 6ನೆಯ ಸ್ಥಾನದಲ್ಲಿ, ನಂತರ ಇನ್ನೆರಡು ಸಾಲುಗಳ 6ನೆಯ ಸ್ಥಾನದಲ್ಲಿ ಜಗಣ (U–U) ವಾಗಲೀ ಅಥವಾ 4 ಲಘು (UUUU)ವುಳ್ಳ ಗಣವಾಗಲೀ ಬರಲೇಬೇಕು.

ವಿಷಮ ಸ್ಥಾನದಲ್ಲಿ 1–3–5–7–9.....)

ಜಗಣ (U–U) ಬರುವಂತಿಲ್ಲ

ಒಟ್ಟು ಮಾತ್ರೆಗಳು 64, 16 ಗಣಗಳು

| 1 | 2 | 3 | |
|---|---|---|---|
| 4 | 4 | 4 | |
| – U – | UU UU | –UU | |
| ಕಂದಂ | ಗಣ ಹದಿ | ನಾರರ | 4 x 3 = 12 |

| 4 | 5 | 6 | 7 | 8 | |
|---|---|---|---|---|---|
| 4 | 4 | 4 | 4 | 4 | |
| ಬಂಧಂ | ಪ್ರತಿಗಣ | ದಿ ನಾಲ್ಕು | ಮಾತ್ರೆಯ | ಚಲನಂ | 4 x 5 = 20 |

| 1 | 2 | 3 |
|---|---|---|
| 4 | 4 | 4 |
| ಒಂದನೆ | ಮೂರನೆ | ಪಾದದೊ |

| 4 | 5 | 6 | 7 | 8 | |
|---|---|---|---|---|---|
| 4 | 4 | 4 | 4 | 4 | |
| ಳೆಂದುಂ | ಮೂಗಣ | ವಿರಲ್ಕೆ | ಮಿಕ್ಕವು | ಪಂಚಂ | 4 x 5 = 20 |

4 + 4 + 4 = 12

4 + 4 + 4 + 4 + 4 = 20

4 + 4 + 4 = 12

4 + 4 + 4 + 4 + 4 = 20

## ಪರಾಮರ್ಶನ ಗ್ರಂಥಗಳು :–


1) ಛಂಧೋಮಿತ್ರ – ಅ.ರಾ. ಮಿತ್ರ

2) ಪ್ರಥಮ ಪಿ.ಯು.ಸಿ. – ಪ್ರಯೋಗ ಪ್ರಣತಿ.

3) 9ನೆಯ ತರಗತಿ ವಿದ್ಯಾರ್ಥಿ ಕೈಪಿಡಿ : ಬಿ. ರವೀಶ್‌ಕುಮಾರ್ ಕನ್ನಡ ಭಾಷಾ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ, ಕೇರ್ಗಳ್ಳಿ, ಮೈಸೂರು

4) ಕನ್ನಡ ವ್ಯಾಕರಣ ಪ್ರಾದೇಶಿಕೆ : ಶ್ರೀಮತಿ ಸುನಿತಾ ದಾಡಗೆ, ಬೀದರ್

5) ಕನ್ನಡ ಕಸ್ತೂರಿ, ಪ್ರಥಮ ಭಾಷೆ, ಕನ್ನಡ 10ನೆಯ ತರಗತಿ

6) ಮಾರ್ಗದರ್ಶಿ – ಲಕ್ಷಾಣಿ, ಧಾರವಾಡ

7) ಮಾತೃಭಾಷೆ ಕನ್ನಡ, ತತ್ವ ಮತ್ತು ಬೋಧನಾಮಾರ್ಗ, ಅನಸೂಯ ವಿ. ಪರಗಿ.

8) ದ್ವಿತೀಯ ಭಾಷಾ ಬೋಧನೆ, ವೀರಭದ್ರಪ್ಪ, ಬಿ.ಎ.

9) ಕನ್ನಡ ಬೋಧನೆ, ಕೃಷ್ಣಪ್ಪ ಎಸ್.

10) ಹೊಸಗನ್ನಡ ವ್ಯಾಕರಣ, ಛಂದಸ್ಸು ಮತ್ತು ವ್ಯಾವಹಾರಿಕ ಕನ್ನಡ, ವೆಂಕಟಾಚಲಶಾಸ್ತ್ರಿ.

11) ಕನ್ನಡ ವ್ಯಾಕರಣ ದರ್ಪಣ. ಕನ್ನಡ ಸಾಹಿತ್ಯ ಪರಿಷತ್ತು.

12) ಕನ್ನಡ ಭಾಷಾ ಬೋಧನೆ, ಡಾ॥ ಮಹಾಬಲೇಶ್ವರ.

13) 'Improving the Teaching of Reading' Emerala V. Dechant, Prestice – Hall, New Delhi.

14) Language Teaching – A Scientific Approach. Lado Robert, The Megraw – Hill Publishing.

15) Position Paper, National Focry group on Teaching of Indian Languages, NCF-2005, NCERT, New Delhi.

**ಅನುಬಂಧ–1**

## (ಗದ್ಯ ಪ್ರಾತ್ಯಕ್ಷಿಕೆಗೆ ಸಂಬಂಧಪಟ್ಟಿದ್ದು)

1. ಪ್ರದರ್ಶನವು ವಿಷಯಕ್ಕೆ ಪೂರಕವಾಗಿತ್ತೆ? ಹೌದು/ಇಲ್ಲ
2. ಎಲ್ಲಾ ವಿದ್ಯಾರ್ಥಿಗಳು ಆಸಕ್ತಿಯಿಂದ ಭಾಗವಹಿಸಿದರೇ? ಹೌದು/ಇಲ್ಲ
3. ಹಾಡು/ನಾಟಕ ಮುಂತಾದವುಗಳಲ್ಲಿ ವಿದ್ಯಾರ್ಥಿಗಳು ಸ್ಪಷ್ಟ ಉಚ್ಚಾರ ಹೊಂದಿದ್ದರೇ? ಹೌದು/ಇಲ್ಲ
4. ಹಾವ, ಬಾವ, ವೇಷಭೂಷಣ ಪೂರಕವಾಗಿತ್ತೇ? ಹೌದು/ಇಲ್ಲ
5. ವಿದ್ಯಾರ್ಥಿಗಳು ರಚಿಸಿದ ವಾಕ್ಯ ವೃಂದಗಳು ಸಮಂಜಸವಾಗಿತ್ತೇ ಹೌದು/ಇಲ್ಲ

## ಕಲಿಕಾ ಚಟುವಟಿಕೆಯ ಅರ್ಥಗ್ರಹಿಕೆಗಾಗಿ ಉಪಘಟಕ ವೀರಗಾಸೆಯ ಮೇಲೆ ಮೌಖಿಕ ಪ್ರಶ್ನೆಗಳ – ಕಾರ್ಡ್

1. ವೀರಭದ್ರನ ಅವತಾರದ ಹಿನ್ನಲೆಯನ್ನು ವಿವರಿಸಿ.
2. ವೀರಗಾಸೆಯಲ್ಲಿ ಬಳಸುವ ವಾದ್ಯಗಳನ್ನು ಹೆಸರಿಸಿ.
3. ವೀರಗಾಸೆಯಲ್ಲಿನ ವೇಷಭೂಷಣಗಳನ್ನು ಪರಿಚಯಿಸಿ.
4. ವೀರಗಾಸೆಯ ನರ್ತಕನು ಹೇಳುವ ಮಾತುಗಳನ್ನು ಪುನರುಚ್ಚರಿಸಿ (ಹಾವ – ಭಾವದೊಂದಿಗೆ)
5. ವೀರಗಾಸೆಯ ನೃತ್ಯದಲ್ಲಿ ನಿನಗಿಷ್ಟವಾದ ಅಂಶವನ್ನು ವ್ಯಕ್ತಪಡಿಸಿ.

## ಮೌಲ್ಯಮಾಪನಕ್ಕಾಗಿ ತಪಶೀಲು ಪಟ್ಟಿ

1. ವೀರಗಾಸೆಯ ಹಿನ್ನೆಲೆ/ಪೂರ್ವಕಥೆಯನ್ನು ಹೇಳುತ್ತಾರೆ. ಹೌದು/ಇಲ್ಲ
2. ವೀರಭದ್ರ ಅವತಾರದ ಪಾತ್ರಾಭಿನಯ ನಿರ್ವಹಿಸುವರು. ಹೌದು/ಇಲ್ಲ
3. ವೀರಭದ್ರ/ನರ್ತಕರ ಮಾತನ್ನು ಹಾವ–ಭಾವದಿಂದ ಹೇಳುವರು. ಹೌದು/ಇಲ್ಲ
4. ಪಾತ್ರ ಪರಿಚಯ ಮಾಡಿಕೊಡಬಲ್ಲರು. ಹೌದು/ಇಲ್ಲ
5. ವೀರಗಾಸೆಯಲ್ಲಿನ ವೇಷಭೂಷಣಗಳನ್ನು ಗುರ್ತಿಸುವರು. ಹೌದು/ಇಲ್ಲ

**ಮೌಲ್ಯಮಾಪನಕ್ಕಾಗಿ ತಪಶೀಲು ಪಟ್ಟಿ**

* ಎಲ್ಲಾ ವಿದ್ಯಾರ್ಥಿಗಳನ್ನು 4 ಗುಂಪುಮಾಡಿ ಪ್ರತಿ ಗುಂಪಿಗೆ ಈ ಚಟುವಟಿಕೆಗಳನ್ನು ನೀಡಿ ಪ್ರದರ್ಶನ ಏರ್ಪಡಿಸುವುದು.

ಅ) ಜನಪದ ಗೀತೆಗಳ ಸಂಗ್ರಹ ಮತ್ತು ಗಾಯನ.

ಆ) ಜನಪದ ಗಾದೆಗಳ ಸಂಗ್ರಹ ಮತ್ತು ವಾಚನ.

ಇ) ಜನಪದ ಪರಿಕರಗಳ ಸಂಗ್ರಹ ಮತ್ತು ಪರಿಚಯ.

ಈ) ಸೋಬಾನೆ/ರಾಗಿ ಬೀಸುವ ಹಾಡುಗಳನ್ನು ಸಂಗ್ರಹಿಸಿ ಹಾಡುವುದು.

ಉ) ಸವಾಲಿಗೆ – ಜವಾಬು ಸಂಗ್ರಹ (ಒಗಟು ಬಿಡಿಸುವುದು)

* ಯಾವುದಾದರೂ ಒಂದು ಅವಧಿಯಲ್ಲಿ ಪ್ರತಿ ಗುಂಪಿಗೂ ಅವಕಾಶ ಕಲ್ಪಿಸುವುದು.

**ಅನ್ವಯ ಚಟುವಟಿಕೆಗಳ ಮೌಲ್ಯಮಾಪನಕ್ಕಾಗಿ ವಿದ್ಯಾರ್ಥಿಗಳ ಸ್ವ–ಅವಲೋಕನ ಚೆಕ್ ಲಿಸ್ಟ್ – 4 ಅಂಶ**

1. ಜನಪದ ಕಲೆಗಳ ಲಕ್ಷಣ ತಿಳಿದಿದ್ದೇನೆ. ಹೌದು/ಇಲ್ಲ
2. ಗುಂಪಿನ ಕಾರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದೇನೆ. ಹೌದು/ಇಲ್ಲ
3. ಪ್ರದರ್ಶನದಲ್ಲಿ ಆಸಕ್ತಿಯಿಂದ ಭಾಗವಹಿಸಿದೆ. ಹೌದು/ಇಲ್ಲ
4. ನಿಗದಿತ ವಿಷಯ ಸಂಗ್ರಹ ಕಾರ್ಯದಲ್ಲಿ ಸಕ್ರಿಯವಾಗಿ ಸಂಗಹಿಸಿದ್ದೇನೆ. ಹೌದು/ಇಲ್ಲ

**ಅನ್ವಯ ಚಟುವಟಿಕೆಗಳ ಮೌಲ್ಯಮಾಪನಕ್ಕಾಗಿ ಶಿಕ್ಷಕರ ಅವಲೋಕನದ ತಪಶೀಲು ಪಟ್ಟಿ–6 ಅಂಶ**

1. ಸಂಗ್ರಹ ಮತ್ತು ಪ್ರದರ್ಶನ – ವಿಷಯಕ್ಕೆ ಪೂರಕವಾಗಿದೆಯೇ? ಹೌದು/ಇಲ್ಲ
2. ಪ್ರದರ್ಶನದಲ್ಲಿ ಸ್ವರ ಭಾರದೊಂದಿಗೆ ವಾಚಿಸಿದರೇ? ಹೌದು/ಇಲ್ಲ
3. ವಾಚನ/ಗಾಯನವು ಸ್ಪಷ್ಟವಾಗಿತ್ತೇ? ಹೌದು/ಇಲ್ಲ
4. ಸಂಗ್ರಹ ಕಾರ್ಯ ಶುದ್ಧ ಬರವಣಿಗೆಯಿಂದ ಕೂಡಿದೆಯೇ? ಹೌದು/ಇಲ್ಲ
5. ಲೇಖನ ಚಿಹ್ನೆಗಳನ್ನು ಸಂದರ್ಭಕ್ಕೆ ತಕ್ಕಂತೆ ಬಳಸಿದ್ದಾರೆಯೇ? ಹೌದು/ಇಲ್ಲ
6. ಪ್ರತಿ ವಿದ್ಯಾರ್ಥಿಯು ತನ್ನ ಸ್ವಂತಿಕೆಯನ್ನು ತೋರ್ಪಡಿಸಿದ್ದಾರೆಯೇ? ಹೌದು/ಇಲ್ಲ

**ಅವಲೋಕನ / ಮೌಲ್ಯಮಾಪನ ಚಟುವಟಿಕೆ**

* ವೀರಗಾಸೆ, ಕಂಸಾಳೆ, ಡೊಳ್ಳುಕುಣಿತ ಮತ್ತು ಯಕ್ಷಗಾನಕ್ಕೆ ಸಂಬಂಧಪಟ್ಟ ಚಿತ್ರಗಳನ್ನು ತೋರಿಸಿ ಮೌಖಿಕ ಪ್ರಶ್ನೆಗಳನ್ನು ಕೇಳುವುದು – ತಪಶೀಲುಪಟ್ಟಿ / ಪ್ರಶ್ನೆ ಪತ್ರಿಕೆಗಳನ್ನು ಬಳಸಿ.
* ಪಠ್ಯದಲ್ಲಿನ ಅಭ್ಯಾಸಗಳನ್ನು ಮಾಡಿಸಿ ಘಟಕ ಮೌಲ್ಯಮಾಪನ ನಡೆಸುವುದು.

**8. ಅನುಪಾಲನಾ / ರಚನಾತ್ಮಕ ಚಟುವಟಿಕೆಗಳು :**

**"ಜನಪದ ಕಲೆಗಳ ವೈಭವ" ಗದ್ಯ ಭಾಗಕ್ಕೆ ಸಂಬಂಧಿಸಿದಂತೆ ಶಾಲೆಯಲ್ಲಿ ನಡೆಸಬಹುದಾದ ಚಟುವಟಿಕೆಗಳು**

➢ ಜನಪದ ತ್ರಿಪದಿಗಳ ಗಾಯನ.

➢ ಜನಪದ ಗಾಯಕರಿಂದ / ತಜ್ಞರಿಂದ ಗಾಯನ, ಮಾಹಿತಿ, ಕಾರ್ಯಕ್ರಮ ಏರ್ಪಡಿಸುವುದು.

➢ ಜನಪದ ಪರಿಕರ ಸಂಗ್ರಹ ಮತ್ತು ಸಂಗ್ರಹಾಲಯಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸುವುದು.

➢ ಸೋಬಾನೆ / ರಾಗಿ ಬೀಸುವ ಹಾಡು ಪದಗಳ ಗಾಯನ.

➢ ಜಾನಪದ ಲೋಕಕ್ಕೆ ಭೇಟಿ ನೀಡುವುದು.

➢ ರಂಗೋಲಿ ಸ್ಪರ್ಧೆ ಏರ್ಪಡಿಸುವುದು.

➢ ಜನಪದ ನೃತ್ಯ ಏರ್ಪಡಿಸುವುದು.

➢ ಜನಪದ ಆಚರಣೆಗಳನ್ನು ವೀಕ್ಷಿಸಿ ವರದಿ ಮಾಡುವುದು.

➢ ಸ್ಥಳೀಯ ಜನಪದ ಗಾಯಕರು / ತಜ್ಞರೊಂದಿಗೆ ಸಂದರ್ಶನ ನಡೆಸಿ ವರದಿ ತಯಾರಿಕೆ.

**ಅನುಬಂಧ–2**

# ಪ್ರಬಂಧ

## ಪ್ರಬಂಧ ರಚನೆ

ಅರ್ಥಪೂರ್ಣ ಖಚಿತ ವಾಕ್ಯಗಳ ಮೂಲಕ ವ್ಯಕ್ತಿಯ ಆಲೋಚನೆಗಳನ್ನು ಲಿಖಿತವಾಗಿ ಅಭಿವ್ಯಕ್ತಿಸುವ ಹಾಗೂ ನಿರ್ದಿಷ್ಟ ವಿಷಯವನ್ನು ಕ್ರಮಬದ್ದ ರೀತಿಯಲ್ಲಿ ನಿರೂಪಿಸುವ ಪರಿಯೇ ಪ್ರಬಂಧ ರಚನೆ. ಇದು ಸಾಮಾನ್ಯವಾಗಿ ಲೇಖಕನ ವ್ಯಕ್ತಿತ್ವ ವೈಶಿಷ್ಟ್ಯದಿಂದ ಕೂಡಿದ ಸ್ವತಂತ್ರ ನಿರ್ದಿಷ್ಟ ಲಘು ಬರವಣಿಗೆ. ವ್ಯಕ್ತಿಯ ವೈಚಾರಿಕ ಆಲೋಚನೆಗಳನ್ನು ಸಹೃದಯರಿಗೆ ಗದ್ಯಾತ್ಮಕ ಕಾವ್ಯ ಶೈಲಿಯಲ್ಲಿ ಮನಮೋಹಕ ರೀತಿಯಲ್ಲಿ ವಿಷಯ ಪ್ರಸ್ತಾಪ ಮಾಡುವ ಬಗೆಯಿದು. ಸರಳ ಭಾವ ಪ್ರಧಾನ ಶೈಲಿಯಲ್ಲಿ ಗಾಢ ಆಲೋಚನಾ ಲಹರಿಯನ್ನು ಸ್ವತಂತ್ರ ವಿವೇಚನಾ ಪ್ರಕ್ರಿಯೆಯಲ್ಲಿ ಸೃಜನಶೀಲತೆಗೆ ಎಡೆಮಾಡಿ ಕೊಡುವ ಭಾಷಾ ಸಾಹಿತ್ಯಕ ಕ್ರಿಯೆ ಸೃಜನಶೀಲ ಬರೆವಣಿಗೆಯ ಸಿದ್ಧಿ ಕೂಡ.

ಸಾಮಾನ್ಯವಾಗಿ ಪ್ರಬಂಧದಲ್ಲಿ ವಿಚಾರದ ಏಕತೆ, ವಿಷಯ ಸಂಗ್ರಹ, ಕ್ರಮಬದ್ದತೆ, ವಿಷಯ ವಿಸ್ತಾರ, ವೈವಿಧ್ಯ, ಸರಳ ಶೈಲಿ, ಸಂಕ್ಷಿಪ್ತತೆ, ವೈಯಕ್ತಿಕತೆ, ಸೂಕ್ತ ವಿಷಯ ನಿರೂಪಣೆ, ಸುಸಂಬದ್ಧತೆ, ಸಮತೋಲನ ವಿಷಯದ ತಾರ್ಕಿಕ ಜೋಡಣೆ ಹಾಗೂ ಪರಿಣಾಮಕಾರಿಯಾದ ಶುದ್ಧ, ಸುಲಭ ಸಂವಹನ ಭಾಷೆಯ ಶೈಲಿ ಇರಬೇಕು. ಇವೇ ಉತ್ತಮ ಪ್ರಬಂಧದ ಲಕ್ಷಣಗಳು.

ಪ್ರಬಂಧಗಳ ರಚನೆ, ವಸ್ತು, ಉದ್ದೇಶ ಹಾಗೂ ತಾರ್ಕಿಕ ಸಂಯೋಜನೆಯನ್ನು ವಸ್ತು ನಿಷ್ಠವಾಗಿ ಆಧರಿಸಿ ಪ್ರಬಂಧಗಳನ್ನು ಚಿಂತನಾತ್ಮಕ/ವೈಚಾರಿಕ, ಕಥನಾತ್ಮಕ, ಆತ್ಮಕಥನಾತ್ಮ, ಸಂಶೋಧನಾತ್ಮಕ, ವಿಮರ್ಶಾತ್ಮಕ, ಚರ್ಚಾತ್ಮಕ, ವರ್ಣನಾತ್ಮಕ, ಚಿತ್ರಾತ್ಮಕ, ಜ್ಞಾನಾತ್ಮಕ, ಹಾಸ್ಯಾತ್ಮಕ, ಆತ್ಮೀಯ, ಕಾಲ್ಪನಿಕ, ವ್ಯಕ್ತಿಚಿತ್ರ, ಹರಟೆ, ಪತ್ರಪ್ರಬಂಧ ಎಂಬಿತ್ಯಾದಿಯಾಗಿ ವರ್ಗೀಕರಿಸಿದೆ.

ಪ್ರಬಂಧ ರಚನಾ ನಿರೂಪಣೆಯಲ್ಲಿ ವಿಷಯದ ಆಯ್ಕೆ, ವಿಷಯದ ವಿಶ್ಲೇಷಣೆ, ಕ್ರೋಡೀಕರಣ, ಕರಡು ರಚನೆ, ಪುನರಾವರ್ತನೆ, ವಿನ್ಯಾಸ, ತೀರ್ಮಾನ ಹಾಗೂ ಅಂತಿಮ ಪ್ರತಿ ರಚನೆ ಬಹುಮುಖ್ಯ. ಪ್ರಬಂಧದ ಮೌಲ್ಯವನ್ನು ಹೆಚ್ಚಿಸುವ ಮಾರ್ಗೋಪಾಯಗಳಿವು.

ಪ್ರಬಂಧದ ಭೌತಿಕ ಸ್ವರೂಪ ಸಾಮಾನ್ಯವಾಗಿ ಪ್ರಸ್ತಾವನೆ/ಪೀಠಿಕೆ, ವಿಷಯ ನಿರೂಪಣೆ ಮತ್ತು ವಿಷಯದ ಸಮಾಪ್ತಿ/ಉಪಸಂಹಾರ ಎಂಬ ಮೂರು ಪ್ರಧಾನ ಹಂತಗಳಿರುತ್ತವೆ. ಪ್ರಸ್ತಾವನೆ ಆಕರ್ಷಕವಾಗಿ ಸಂಕ್ಷಿಪ್ತವಾಗಿರಬೇಕು. ಗುರಿ ಹಾಗೂ ವಿಷಯ ಖಚಿತತೆಯನ್ನು ಸ್ಪಷ್ಟಪಡಿಸಬೇಕು. ವಿಷಯ ನಿರೂಪಣೆ ಭಾಗವೇ ಪ್ರಬಂಧದ ಜೀವಾಳ.

# ಪ್ರಬಂಧ ರಚನೆ

## ಪ್ರಬಂಧ ರಚನೆಯಲ್ಲಿ ಗಮನಿಸಬೇಕಾದ ಅಂಶಗಳು

1. ಪ್ರಬಂಧದ ವಿಷಯವನ್ನು ಸಮರ್ಥವಾಗಿ ಪ್ರತಿನಿಧಿಸುವಂತಹ ಶೀರ್ಷಿಕೆ ಹಾಗೂ ಅಗತ್ಯ ಉಪ ಶೀರ್ಷಿಕೆಗಳು ಇರಬೇಕು.
2. ನಿರ್ದಿಷ್ಟ ಉದ್ದೇಶಗಳ ಹಿನ್ನಲೆಯಲ್ಲಿ ಪ್ರಬಂಧಗಳ ರಚನೆ ಆಗಬೇಕು.
3. ಒಂದು ಯೋಚನೆ, ವಿಷಯ ಅಥವಾ ಒಂದು ನಿರ್ದಿಷ್ಟ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮಾತ್ರ ಪ್ರಬಂಧದ ವ್ಯಾಪ್ತಿ ಇರಬೇಕು.
4. ಪ್ರಬಂಧ ರಚನೆಗೆ ಅಗತ್ಯ ಸಿದ್ಧತೆಗಳು ಇರಬೇಕು. ಬರೆಯುವ ಮುನ್ನ ವಿಷಯ ವ್ಯಾಪ್ತಿಗೆ ಒಂದು ಚೌಕಟ್ಟನ್ನು ಹಾಕಿಕೊಳ್ಳಬೇಕು.
5. ಶಾಲಾ ಪ್ರಬಂಧಗಳು ಮಕ್ಕಳ ಮಟ್ಟಕ್ಕೆ ಅನುಗುಣವಾಗಿರಬೇಕು.
6. ಅನವಶ್ಯಕ ವಿವರಗಳು, ಪುನರಾವರ್ತನೆಗಳಿಂದ ಮುಕ್ತವಾಗಿ ಸಾಧ್ಯವಾದಷ್ಟು ಸಂಕ್ಷಿಪ್ತ ಮತ್ತು ಸರಳವಾಗಿರಬೇಕು.
7. ಪ್ರಬಂಧವು ಸೂಕ್ತ ಪೀಠಿಕೆ, ಮೈಕಟ್ಟು/ವಿಷಯ ನಿರೂಪಣೆ ಮತ್ತು ಮುಕ್ತಾಯ ಎಂಬ ಹಂತಗಳಲ್ಲಿ ಅನುಕ್ರಮವಾಗಿ ಮುಂದುವರಿಯಬೇಕು.
8. ಪ್ರಬಂಧದ ಭಾಷೆ ಶುದ್ಧವಾಗಿರಬೇಕು. ಪದ ಮತ್ತು ವಾಕ್ಯ ರಚನೆಗಳು ಅರ್ಥಪೂರ್ಣವಾಗಿ ಮೂಡಿಬಂದಿರಬೇಕು. ಭಾಷಾ ಶೈಲಿ ಉತ್ತಮವಾಗಿದ್ದು ಭಾಷೆಯಲ್ಲಿ ಸುಸ್ಪಷ್ಟತೆ, ನಿರ್ದಿಷ್ಟತೆ, ಸರಳತೆ ಇರಬೇಕು.
9. ಪ್ರಬಂಧದ ವಿಷಯ ಬೆಳವಣಿಗೆಯಲ್ಲಿ ನಿರಂತರತೆ ಇದ್ದು ವಿಷಯಗಳು, ಪಾತ್ರಗಳು, ಸಂದರ್ಭಗಳು ಪರಸ್ಪರ ಸಂಬಂಧ ಹೊಂದಿ ಮುಂದುವರಿಯಬೇಕು.
10. ಪ್ರಬಂಧವು ಹೇಳಲು ಹೊರಟಿರುವ ಪ್ರಧಾನ ಭಾವನೆ ಅಥವಾ ಕೇಂದ್ರ ಅಂಶವು ಎಲ್ಲಿಯೂ ಕೈತಪ್ಪಿ ಹೋಗಬಾರದು.
11. ಪ್ರಬಂಧವು ಪ್ರತಿಪಾದಿಸುತ್ತಿರುವ ವಿಷಯಗಳನ್ನು ಹಲವು ದೃಷ್ಟಾಂತಗಳು, ಅಂಕಿ ಅಂಶಗಳು, ಹೇಳಿಕೆಗಳು, ನುಡಿಗಟ್ಟುಗಳಿಂದ ಸಮರ್ಥಿಸಬೇಕು.
12. ಬರವಣಿಗೆಯು ಶುದ್ಧವಾಗಿದ್ದು ಸುಂದರವಾಗಿರಬೇಕು. ಬರೆಯುವ ಅಂಶಗಳಿಗೆ ಒಪ್ಪುವಂತಹ ಶೀರ್ಷಿಕೆ, ಉಪಶೀರ್ಷಿಕೆಗಳಿದ್ದು ವಿವಿಧ ಪ್ಯಾರಾಗಳಲ್ಲಿ ವಿಷಯವು ನಿರೂಪಿಸಲ್ಪಟ್ಟಿರಬೇಕು.
13. ಪ್ರಬಂಧವು ಸಂಭಾಷಣೆ ರೀತಿಯಲ್ಲಿ ಹಾಗೂ ನಿರೂಪಣಾ ಶೈಲಿ ಮುಂದುವರಿಯಬೇಕು.
14. ಶಾಲೆಗಳಲ್ಲಿ ಪ್ರಬಂಧಗಳನ್ನು ಒರೆಸುವಾಗ ಮಕ್ಕಳ ದೈನಂದಿನ ವಿಷಯಗಳನ್ನು ಪ್ರಬಂಧಗಳಿಗೆ ಆಯ್ಕೆ ಮಾಡಿಕೊಳ್ಳುವುದು ಉತ್ತಮ.

15. ಪ್ರಬಂಧ ರಚನೆ ಮಾಡಿಸುವಾಗ ಮೊದಲು ಬಾಯ್ದೆರೆಯಾಗಿ ಪ್ರಬಂಧವನ್ನು ಅಭ್ಯಾಸ ಮಾಡಿಸಿ ನಂತರ ಲಿಖಿತಪ್ರಬಂಧ ಬರೆಸಬೇಕು. ಪ್ರಬಂಧವನ್ನು ಕರಡು ಪ್ರತಿಯಾಗಿ ಬರೆದು, ಅದನ್ನು ತಿದ್ದಿಸರಿಪಡಿಸಿ ಅಂತಿಮವಾಗಿ ಬರೆಯಬೇಕು.

16. ಪ್ರಬಂಧದಲ್ಲಿ ಬರಹಗಾರನ ಬುದ್ಧಿವಂತಿಕೆ, ಭಾಷಾ ಕೌಶಲ ವ್ಯಕ್ತವಾಗಬೇಕು.

17. ಪ್ರಬಂಧವು ಉತ್ತಮ ಭಾಷಾ ಶೈಲಿಯಿಂದ ಮೂಡಿಬರಬೇಕು.

18. ಪ್ರಬಂಧದ ಕೊನೆಯಲ್ಲಿ ಆಧಾರ ಗ್ರಂಥಗಳನ್ನು ಸೂಚಿಸಿರಬೇಕು.

## 1. ಕ್ರೀಡೆಗಳು

**ಪ್ರಸ್ತಾವನೆ :–** ಮನುಷ್ಯನ ಪೂರ್ಣ ವ್ಯಕ್ತಿತ್ವವನ್ನು ರೂಪಿಸಿ ಬೆಳೆಸುವುದೇ ಶಿಕ್ಷಣದ ಗುರಿ. ಮಾನಸಿಕ ಬೆಳವಣಿಗೆ, ಜ್ಞಾನದ ಬೆಳವಣಿಗೆಯ ಜೊತೆಜೊತೆಗೆ ಶಾರೀರಿಕ ಬೆಳವಣಿಗೆಯೂ ಆವಶ್ಯಕ. ದೇಹದಾರ್ಢ್ಯವನ್ನು ಪಡೆಯಲು ಕ್ರೀಡಾ ಚಟುವಟಿಕೆಗಳು,ಆಟ ಪಾಠಗಳು ಅತಿಮುಖ್ಯ. ಆರೋಗ್ಯವಂತನಾದ ವ್ಯಕ್ತಿಯು ನಿಜಕ್ಕೂ ನಿಶ್ಚಲವಾದ ಮನಸ್ಸನ್ನು ಹೊಂದಿ ನೆಮ್ಮದಿಯಿಂದಿರುತ್ತಾನೆ.

**ವಿಷಯ ನಿರೂಪಣೆ :–** ಪ್ರತಿದಿನ ಗೊತ್ತಾದ ಸಮಯದಲ್ಲಿ ಯಾರು ಕ್ರೀಡಾ ಚಟುವಟಿಕೆಗಳಲ್ಲಿ, ವ್ಯಾಯಾಮಗಳಲ್ಲಿ ನಿರತರಾಗಿರುತ್ತಾರೋ ಅಂತಹವರು ಉತ್ತಮ ಆರೋಗ್ಯವನ್ನು ಹೊಂದಿರುತ್ತಾರೆ. ಪ್ರತಿಯೊಬ್ಬರೂ ತಮ್ಮ ಬಿಡುವಿನ ವೇಳೆಯಲ್ಲಿ ಯಾವುದಾದರು ಒಂದು ಆಟವನ್ನು ಆಡುವ ಹವ್ಯಾಸ ಬೆಳೆಸಿಕೊಳ್ಳುವುದು ಬಹಳ ಒಳ್ಳೆಯದು. ಆಟಗಳು ಮನಸ್ಸಿಗೆ ಆಹ್ಲಾದವನ್ನು ಉಂಟು ಮಾಡುತ್ತವೆ. ಜ್ಞಾನವು ಮನಸ್ಸಿಗೆ ಆಹಾರವಾದರೆ, ಆಟಗಳು ಅಥವಾ ಕ್ರೀಡೆಗಳು ಶರೀರಕ್ಕೆ ಆಹಾರ. ಆಟಗಳಲ್ಲಿ ಭಾಗವಹಿಸಿದಾಗ ನೀತಿ ನಿಯಮಗಳನ್ನು ಪಾಲಿಸಬೇಕು. ಆಟಗಳನ್ನು ಆಡುವುದರಿಂದ ಒಬ್ಬರಿಗೊಬ್ಬರು ಹೇಗೆ ಸ್ನೇಹದಿಂದ ವರ್ತಿಸಬೇಕು, ಸಹಾಯ ಮಾಡಬೇಕು ಎಂಬುದು ಅರಿವಾಗುತ್ತದೆ. ನಾಯಕತ್ವದಲ್ಲಿ ಅಡ್ಡಿ ಆತಂಕಗಳು ಬಂದಾಗ ಮನೋಸ್ಥೈರ್ಯ ನಮ್ಮದಾಗುತ್ತದೆ. ಸೋತಾಗ ಅಂಜದೆ, ಮತ್ತೆ ಮತ್ತೆ ಪ್ರಯತ್ನಿಸಿ ಗೆಲ್ಲುವ ಮನೋಭಾವ ಬೆಳೆಯುತ್ತದೆ. ಕ್ರೀಡೆಯಲ್ಲಿ ಸೋಲು ಗೆಲುವನ್ನು ಸಮಸ್ಥಿತಿಯಲ್ಲಿ ತೆಗೆದುಕೊಳ್ಳುವ ಮನೋಭಾವ ಬೆಳೆಯುತ್ತದೆ. ಕ್ರೀಡಾ ಮನೋಭಾವನೆಯು ಬೆಳೆದು ಜೀವನದುದ್ದಕ್ಕೂ ಎಲ್ಲ ಕ್ಷೇತ್ರದಲ್ಲೂ ನೀತಿಯುತವಾಗಿ ನಿಯಮಗಳನ್ನು ಉಲ್ಲಂಘಿಸದೆ ಬಾಳುವುದನ್ನು ಕಲಿಸುತ್ತದೆ. ಕ್ರೀಡೆಗಳಲ್ಲಿ ಎರಡು ವಿಧಗಳಿವೆ. ಒಂದು ಹೊರಾಂಗಣ ಕ್ರೀಡೆಯಾದರೆ, ಇನ್ನೊಂದು ಒಳಾಂಗಣ ಕ್ರೀಡೆ ಹೊರಾಂಗಣ ಕ್ರೀಡೆ ಎಂದರೆ ಮೈದಾನದಲ್ಲಿ ಆಡುವುದು. ಉದಾ:– ಕ್ರಿಕೆಟ್, ಫುಟ್ಬಾಲ್, ಹಾಕಿ ಇತ್ಯಾದಿ, ಒಳಾಂಗಣ ಕ್ರೀಡೆ ಎಂದರೆ ಕಟ್ಟಡದ ಒಳಗೆ ಆಡುವ ಆಟಗಳು. ಉದಾ :– ಟೇಬಲ್ ಟೆನಿಸ್, ಚೆಸ್, ಕೇರಂ ಇತ್ಯಾದಿ. ಎಲ್ಲಾ ತರಹದ ಕ್ರೀಡೆಗಳು ನಮ್ಮಲ್ಲಿ ಉತ್ಸಾಹವನ್ನು ತುಂಬುತ್ತವೆ.

**ಉಪಸಂಹಾರ :** ಕ್ರೀಡೆಗಳ ಮೂಲ ಉದ್ದೇಶ ಜನರ ಶಾರೀರಿಕ ಮತ್ತು ಮಾನಸಿಕ ಬೆಳವಣಿಗೆಯನ್ನು ಹೆಚ್ಚಿಸುವುದು. ಕ್ರೀಡಾಸ್ಫೂರ್ತಿಯನ್ನು ಹೊಂದಿದ ಮನುಷ್ಯ ತುಂಬಾ ಉತ್ತಮವಾಗಿ ಜೀವನ ಸಾಗಿಸಬಲ್ಲ. ಪ್ರತಿಯೊಬ್ಬರೂ ಯಾವುದಾದರೊಂದು ಕ್ರೀಡೆಯಲ್ಲಿ ಆಸಕ್ತಿ ಬೆಳೆಸಿಕೊಳ್ಳಬೇಕು ಎಂಬುದು ನನ್ನ ಅಭಿಪ್ರಾಯವಾಗಿದೆ.

## 2. ಜನಸಂಖ್ಯಾಸ್ಫೋಟ

**ಪ್ರಸ್ತಾವನೆ :–** ಅತಿ ಕಡಿಮೆ ಅವಧಿಯಲ್ಲಿ ಜನಸಂಖ್ಯೆಯು ತೀವ್ರವಾಗಿ ವೃದ್ಧಿಗೊಳ್ಳುವುದನ್ನು 'ಜನಸಂಖ್ಯಾಸ್ಫೋಟ' ಎನ್ನುತ್ತಾರೆ. ಯಾವುದೇ ರಾಷ್ಟ್ರದಲ್ಲಿ ಜನಸಂಖ್ಯೆಯು ಮಿತಿಮೀರಿ ರಾಷ್ಟ್ರದ ಉನ್ನತಿಗೆ ಸಂಚಕಾರಿಯಾಗಿ ಸಮಸ್ಯಾತ್ಮಕವಾಗುವುದು. ಜನಸಂಖ್ಯೆಯು ಬೆಳೆಯುತ್ತಾ ಹೋದಂತೆ ರಾಷ್ಟ್ರಕ್ಕೆ ಅನೇಕ ರೀತಿಯ ಸಮಸ್ಯೆಗಳು ತಲೆದೋರುತ್ತವೆ.

ವಿಷಯ ನಿರೂಪಣೆ. ಜನಸಂಖ್ಯಾಸ್ಫೋಟಕ್ಕೆ ಹಲವಾರುಕಾರಣಗಳಿವೆ. ಭೌಗೋಳಿಕ ಲಕ್ಷಣ, ವಾಯುಗುಣ, ಅನಕ್ಷರತೆ, ಅಂಧಶ್ರದ್ಧೆ, ಬಹುಪತ್ನಿತ್ವ, ಬಾಲ್ಯ ವಿವಾಹ, ವೈದ್ಯಕೀಯ ಕ್ಷೇತ್ರದಲ್ಲಿ ಪ್ರಗತಿ ಇತ್ಯಾದಿ ಕಾರಣಗಳಿಂದ ಜನಸಂಖ್ಯೆಯು ಹೆಚ್ಚಾಗುತ್ತದೆ. ಜನಸಂಖ್ಯೆ ಹೆಚ್ಚಿದಂತೆ ಆವಶ್ಯಕತೆಗಳೂ ಹೆಚ್ಚುತ್ತವೆ. ಜೊತೆಗೆ ಸಮಸ್ಯೆಗಳು ಉದ್ಭವಿಸುತ್ತವೆ. ಆಹಾರ, ವಿದ್ಯಾಭ್ಯಾಸ, ಉದ್ಯೋಗ ವಸತಿ ನೀರು ಮೊದಲಾದ ಮೂಲಭೂತ ಆವಶ್ಯಕತೆಗಳಿಗಾಗಿ ಸ್ಪರ್ಧೆ ಏರ್ಪಡುತ್ತವೆ. ನಮ್ಮ ದೇಶ ವಿಸ್ತಾರದಲ್ಲಿ ಅಧಿಕವಾಗಿದ್ದರೂ ಇಲ್ಲಿನ ನಿಸರ್ಗ ಸಂಪತ್ತಿಗೆ ಒಂದು ಮಿತಿಯಿದೆ. ಆಹಾರ ಬೆಳೆಯುವ ಭೂಮಿ, ಕುಡಿಯುವ ನೀರು. ಮನೆ ಕಟ್ಟಿಕೊಳ್ಳಲು ಯೋಗ್ಯವಾದ ಬಯಲು – ಇವುಗಳ ಜನಸಂಖ್ಯೆ ಹೆಚ್ಚಿದಂತೆ ಹೆಚ್ಚುತ್ತಾ ಹೋಗುವುದಿಲ್ಲ. ಮಿತಿ ಮೀರಿದ ಜನಸಂಖ್ಯೆಯಿಂದ ಮಕ್ಕಳಲ್ಲಿ ಪೌಷ್ಟಿಕ ಆಹಾರದ ಕೊರತೆ, ರೋಗರುಜಿನಗಳು ಹೆಚ್ಚಾಗಿ ಸಮಾಜದ ಆರೋಗ್ಯ ಹಾಳಾಗುತ್ತದೆ. ಮಿತಿ ಮೀರಿದ ಜನಸಂಖ್ಯೆಯಿಂದ ದೇಶದಲ್ಲಿ ಅಶಾಂತಿ, ಕಳ್ಳತನ, ಕೊಲೆ ಸುಲಿಗೆ, ದರೋಡೆ, ಮಾದಕ ವಸ್ತುಗಳ ಚಟ ಇತ್ಯಾದಿ ಸಾಮಾಜಿಕ ಪಿಡುಗುಗಳು ಸಹ ಹೆಚ್ಚಾಗುತ್ತವೆ. ಭಾರತದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಮೂವತ್ತು ಕೋಟಿ ಇದ್ದ ಜನಸಂಖ್ಯೆ ಸ್ವಾತಂತ್ರ್ಯಾನಂತರ ವೇಗವಾಗಿ ಬೆಳೆಯುತ್ತಿದೆ. ವಿಶ್ವದಲ್ಲಿ ಜನಸಂಖ್ಯೆಯಲ್ಲಿ ಚೀನಾ ದೇಶಕ್ಕೆ ಮೊದಲ ಸ್ಥಾನವಿದ್ದರೆ, ಎರಡನೆಯ ಸ್ಥಾನದಲ್ಲಿರುವುದು ಭಾರತ. ಭಾರತದ ಜನಸಂಖ್ಯೆ ಶತಕೋಟಿಯನ್ನು ಮೀರಿ ಬೆಳೆದಿದೆ. ಈ ರೀತಿ ಹೆಚ್ಚುತ್ತಿರುವ ಜನಸಂಖ್ಯೆ ಸಮಸ್ಯೆಗಳನ್ನು ಸೃಷ್ಟಿಸುತ್ತಾ ಇದೆ. ಆದ್ದರಿಂದ ಜನಸಂಖ್ಯೆಯನ್ನು ನಿಯಂತ್ರಿಸುವುದು ಇಂದಿನ ಅಗತ್ಯವಾಗಿದೆ. 'ಒಂದು ಮನೆಗೆ ಒಂದೇ ಮಗು' ಎಂಬ ಕುಟುಂಬ ಕಲ್ಯಾಣ ಯೋಜನೆ, ಬಾಲ್ಯವಿವಾಹ ನಡೆಯದಂತೆ ತಡೆಗಟ್ಟುವುದು. ಜನಜಾಗೃತಿ ಮೂಡಿಸುವುದು ಮೊದಲಾದ ಕಾರ್ಯಕ್ರಮಗಳಿಂದ ಜನಸಂಖ್ಯೆಯನ್ನು ನಿಯಂತ್ರಿಸಬೇಕು.

**ಉಪಸಂಹಾರ :–** ಜನಸಂಖ್ಯೆಯನ್ನು ನಿಯಂತ್ರಿಸಿ ಮನೆಯನ್ನು ದೇಶವನ್ನು ಉಜ್ವಲವಾಗಿ ಬೆಳಗಿಸುವುದು ನಮ್ಮೆಲ್ಲರ ಕರ್ತವ್ಯ. ದೇಶ ಎದುರಿಸುತ್ತಿರುವ ಸಮಸ್ಯೆಗಳಿಗೆ ಪ್ರತಿಯೊಬ್ಬ ಪ್ರಜೆಯೂ ಸ್ಪಂದಿಸುವುದು ಅಗತ್ಯ, ಹಾಗಾದಾಗ ಮಾತ್ರ ತಮ್ಮ ದೇಶವು ಮುಂದುವರಿದ ರಾಷ್ಟ್ರಗಳಲ್ಲಿ ಒಂದಾಗಬಹುದು ಎಂಬುದು ನನ್ನ ಅಭಿಪ್ರಾಯವಾಗಿದೆ.

## 3. ನಿರುದ್ಯೋಗ ಸಮಸ್ಯೆ

**ಪ್ರಸ್ತಾವನೆ :–** ನಮ್ಮ ದೇಶದಲ್ಲಿರುವ ಅನೇಕ ಸಮಸ್ಯೆಗಳಲ್ಲಿ ನಿರುದ್ಯೋಗ ಸಮಸ್ಯೆಯು ಒಂದು. ಉದ್ಯೋಗ ಮಾಡಲು /ಶ್ರಮಪಡಲು ತಯಾರಾಗಿರುವ ಜನತೆಗೆ ಮಾಡಲು ಉದ್ಯೋಗ

ಇಲ್ಲದೆ ಇರುವುದೇ ನಿರುದ್ಯೋಗ. ಕಾಯಕವೇ ಕೈಲಾಸ, ದುಡಿಯುವ ಕೈಗಳಿಗೆ ಸೂಕ್ತ ಕೆಲಸವನ್ನು ಒದಗಿಸದಿದ್ದರೆ ಅದು ಮಾನವ ಶಕ್ತಿಯ ಅಪಾರ ನಷ್ಟ. ಮಾನವ ಸಂಪತ್ತು ಒಂದು ದೇಶದ ಸಂಪತ್ತು.

**ವಿಷಯ ನಿರೂಪಣೆ ;–** ಇತ್ತೀಚಿನ ದಿನಗಳಲ್ಲಿ ಉದ್ಯೋಗಕ್ಕಾಗಿ ಅಲೆಯುವವರ ಸಂಖ್ಯೆ ಮಿತಿ ಮೀರಿ ಬೆಳೆಯುತ್ತಿದೆ. ವಿಶ್ವ ವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದವರು ಕೂಡಾ ಉದ್ಯೋಗಕ್ಕಾಗಿ ಅಲೆಯಬೇಕಾದ ಪರಿಸ್ಥಿತಿ ಉಂಟಾಗಿದೆ. ನಿರುದ್ಯೋಗ ಸಮಸ್ಯೆಗೆ ಮುಖ್ಯವಾದ ಕಾರಣ ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ಕೆಲಸ ಕಾರ್ಯಗಳಲ್ಲಿ ಯಂತ್ರೋಪಕರಣಗಳ ಬಳಕೆ. ನಿರುದ್ಯೋಗ ಸಮಸ್ಯೆಯಿಂದ ಯುವ ಜನರು ಹಾದಿ ತಪ್ಪುತ್ತಾರೆ. ಸೋಮಾರಿಗಳಾಗುತ್ತಾರೆ. ದುಶ್ಚಟಗಳಿಗೆ ದಾಸರಾಗುತ್ತಾರೆ. ಹಣ ಸಂಪಾದನೆಗಾಗಿ ಕಳ್ಳತನ, ಕೊಲೆ, ಸುಲಿಗೆ ದರೋಡೆಮೊದಲಾದ ಸಮಾಜ ವಿರೋಧಿ ಕಾರ್ಯಗಳಲ್ಲಿ ತೊಡಗುತ್ತಾರೆ. ಹೀಗೆ ಯುವಜನತೆ ಹಾದಿ ತಪ್ಪುವುದರಿಂದ ದೇಶದಲ್ಲಿ ಅರಾಜಕತೆ ಸೃಷ್ಠಿಯಾಗುತ್ತದೆ. ದೇಶದ ಪ್ರಗತಿ ಕುಂಠಿತವಾಗುತ್ತದೆ. ಬಡತನ ತಾಂಡವವಾಡುತ್ತದೆ. ಯುವಜನರು ನಕ್ಸಲಿಸಂ ಭಯೋತ್ಪಾದನೆ ಸಂಘಟನೆಗಳಲ್ಲಿ ಸಕ್ರಿಯರಾಗಿರುತ್ತಾರೆ. ಹೀಗಾಗಿ ಒಂದು ದೇಶದ ಸರ್ಕಾರ ಮತ್ತು ಅಲ್ಲಿನ ಜನತೆ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸುವತ್ತ ತೀವ್ರವಾಗಿ ಗಮನಹರಿಸಬೇಕು. ಗ್ರಾಮೀಣ ಕೈಗಾರಿಕೆಗಳಿಗೆ ಉತ್ತೇಜನ ಕೊಟ್ಟು ಅಭಿವೃದ್ಧಿ ಹೊಂದಲು ಅವಕಾಶ ಮಾಡಿಕೊಡಬೇಕು. ವಿದ್ಯಾಭ್ಯಾಸ ಕ್ರಮವನ್ನು ಬದಲಾಯಿಸಬೇಕು. ಶಾಲಾ ಹಂತದಲ್ಲಿಯೇ ವೃತ್ತಿಪರ ಶಿಕ್ಷಣವನ್ನು ಒದಗಿಸಬೇಕು. ಯುವಜನರು ಸ್ವಯಂ ಉದ್ಯೋಗ ಮಾಡಲು ಉಚಿತ ಸ್ಥಳಾವಕಾಶ, ಸಾಲಸೌಲಭ್ಯ, ತೆರಿಗೆ ರಿಯಾಯಿತಿ, ಸೂಕ್ತ ಮಾರುಕಟ್ಟೆ ಸೃಷ್ಟಿಸುವ ಕಾರ್ಯವನ್ನು ಸರ್ಕಾರ ಮಾಡಿಕೊಡಬೇಕು. ಗ್ರಾಮೀಣ ಮಟ್ಟದಲ್ಲಿ ಉದ್ಯೋಗ ಕಾರ್ಯವನ್ನು ಮಾಡುವುದರ ಮುಖಾಂತರ ಪಟ್ಟಣಕ್ಕೆ ಉದ್ಯೋಗಕ್ಕಾಗಿ ವಲಸೆ ಬರುವುದನ್ನು ತಡೆಗಟ್ಟಬೇಕು. ಸರ್ಕಾರದಲ್ಲಿರುವ ಲಂಚಕೋರತನ, ಭ್ರಷ್ಟಾಚಾರ ನಿರ್ಮೂಲನೆ ಮಾಡಬೇಕು.

**ಉಪಸಂಹಾರ :–** ಜನತೆಯ ಜ್ಞಾನದ ಮಟ್ಟ ವಿದ್ಯಾರ್ಹತೆ, ಅನುಭವಕ್ಕೆ ತಕ್ಕ ಉದ್ಯೋಗಗಳನ್ನು ಒದಗಿಸಿ ತಮ್ಮ ಜೀವನವನ್ನು ರೂಪಿಸಿಕೊಳ್ಳಲು ಅನುವು ಮಾಡಿಕೊಟ್ಟಾಗ ಜನತೆ ಸಂತೋಷದಿಂದ ಪ್ರಾಮಾಣಿಕರಾಗಿ ತಮ್ಮ ಉದ್ಯೋಗದಲ್ಲಿ ಪ್ರಗತಿ ಸಾಧಿಸುತ್ತಾರೆ. ಆಗ ರಾಷ್ಟ್ರವೂ ತಾನೇ ತಾನಾಗಿ ಈ ಸಮಸ್ಯೆಗಳಿಂದ ಬಿಡುಗಡೆ ಹೊಂದಿ ಪ್ರಗತಿ ಹೊಂದುತ್ತದೆ.

## 4. ಬಾಲ್ಯ ವಿವಾಹ

**ಪ್ರಸ್ತಾವನೆ :–** ತಲೆತಲಾಂತರದಿಂದ ಸಮಾಜಕ್ಕೆ ಅಂಟಿಕೊಂಡು ಬಂದ ಸಾಮಾಜಿಕ ಪಿಡುಗುಗಳು ವರದಕ್ಷಿಣೆ, ಸತಿ ಪದ್ಧತಿ, ಬಾಲ್ಯವಿವಾಹ, ಅಸ್ಪೃಶ್ಯತೆ, ಕುಡಿತ, ಜೀತ ಪದ್ಧತಿ ದೇವದಾಸಿ ಇತ್ಯಾದಿ. ಇವೆಲ್ಲವೂ ನಮ್ಮ ಸಮಾಜದಲ್ಲಿ ಬೇರು ಬಿಟ್ಟವುಗಳು. ಯಾವ ಶಾಸನಕ್ಕೂ ಜಗ್ಗದವುಗಳು. ಇವುಗಳಿಂದ ಸಾಮಾಜಿಕ ಸ್ವಾಸ್ಥ್ಯ ಕೆಟ್ಟು ಹೋಗುತ್ತದೆ. ಇವುಗಳು ಒಂದು ಸುಂದರ ನಾಗರಿಕ ಸಮಾಜ ನಿರ್ಮಾಣಕ್ಕೆ ಅಡ್ಡಿಯಾಗಿವೆ.

**ವಿಷಯ ನಿರೂಪಣೆ :–** ಹೆಣ್ಣು ಮಕ್ಕಳಿಗೆ 18 ವರ್ಷ ತುಂಬುವುದಕ್ಕೆ ಮೊದಲು ಹಾಗೂ ಗಂಡು ಮಕ್ಕಳಿಗೆ 21 ವರ್ಷ ತುಂಬುವುದಕ್ಕೆ ಮೊದಲು ಮಾಡುವ ವಿವಾಹಗಳನ್ನು 'ಬಾಲ್ಯ ವಿವಾಹ' ಎನ್ನುವರು. ಹೆಣ್ಣು ಮಕ್ಕಳಿಗೆ ವಯಸ್ಸು ಆದ ನಂತರ ಮದುವೆ ಮಾಡಿದರೆ ಸೂಕ್ತ ಗಂಡು ದೊರೆಯುವುದಿಲ್ಲ ಎಂಬ ಹೆತ್ತವರ ಸ್ವಾರ್ಥ ಮನೋಭಾವನೆಯ ಮೂಢನಂಬಿಕೆಯಿಂದ ಇಂತಹ ಮದುವೆಗಳು ನಡೆಯುತ್ತಿವೆ. ಅನಕ್ಷರತೆ ಮತ್ತು ಬಡತನವು ಸಹ ಬಾಲ್ಯ ವಿವಾಹಕ್ಕೆ ಕಾರಣವಾಗಿದೆ. ಸಣ್ಣ ವಯಸ್ಸಿಗೆ ಮದುವೆಯಾದರೆ ಸಂಸಾರದ ಬಗ್ಗೆ ಅರಿವಿಲ್ಲದೆ ಇರುವುದರಿಂದ ಅನೇಕ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳು ಉಂಟಾಗುತ್ತವೆ. ದೇಹ ಸಧೃಢವಾಗಿಲ್ಲದಿರುವುದರಿಂದ ಸಣ್ಣ ವಯಸ್ಸಿಗೆ ಮದುವೆಯಾದ ಹೆಣ್ಣು ಚಿಕ್ಕ ವಯಸ್ಸಿಗೆ ಮಕ್ಕಳನ್ನು ಹೆರುವುದರಿಂದ ಅನಾರೋಗ್ಯ ಸಮಸ್ಯೆ ಉಂಟಾಗುತ್ತದೆ. ಹುಟ್ಟಿದ ಮಕ್ಕಳು ಸಹ ಅಪೌಷ್ಟಿಕತೆಯಿಂದ ನರಳುತ್ತಾರೆ. ಬಾಲ್ಯ ವಿವಾಹ ಜನಸಂಖ್ಯಾ ಸ್ಫೋಟಕ್ಕೂ ಬಹುಶಃ ಕಾರಣವಾಗುತ್ತದೆ. ಆದ್ದರಿಂದ ಭಾರತ ಸರ್ಕಾರ ಬಾಲ್ಯ ವಿವಾಹ ನಿಷೇಧ ಕಾನೂನು ಜಾರಿಗೆ ತಂದಿದೆ. ಆದರೂ ಅದು ಸಮರ್ಪಕವಾಗಿ ಅನುಷ್ಠಾನಗೊಳ್ಳುತ್ತಿಲ್ಲ. ಸಮಾಜದ ಜನರ ಮನಃಪರಿವರ್ತನೆಯಾಗದಿದ್ದರೆ ಯಾವ ಕಾನೂನು ಬಂದರೂ ಪ್ರಯೋಜನವಿಲ್ಲ. ತಂದೇ ತಾಯಿ ಮಕ್ಕಳ ಮದುವೆ ಮಾಡಿ ಜವಾಬ್ದಾರಿ ಕಳೆದುಕೊಳ್ಳುವುದರ ಕಡೆಗೆ ಚಿಂತಿಸದೆ ತಮ್ಮ ಮಕ್ಕಳ ಮುಂದಿನ ಭವಿಷ್ಯದ ಬಗ್ಗೆಯು ಸಹ ಚಿಂತೆ ಮಾಡಬೇಕು. ಯಾವುದೇ ಕಾರಣಕ್ಕೂ ಬಾಲ್ಯ ವಿವಾಹವನ್ನು ಮಾಡಬಾರದು.

**ಉಪಸಂಹಾರ :–** ಬಾಲ್ಯ ವಿವಾಹದಿಂದಾಗುವ ದುಷ್ಪರಿಣಾಮಗಳನ್ನು ಕುರಿತು ಜನರಿಗೆ ಅರಿವು ಮೂಡಿಸಬೇಕು. ಬಾಲ್ಯ ವಿವಾಹ ನಡೆಯುತ್ತಿರುವುದು ನಮಗೆ ತಿಳಿದ ಕೂಡಲೇ ಸಂಬಂಧಪಟ್ಟ ಇಲಾಖೆಯವರಿಗೆ ಮಾಹಿತಿ ನೀಡಿ ಬಾಲ್ಯ ವಿವಾಹ ನಡೆಯದಂತೆ ತಡೆಗಟ್ಟಬೇಕು. ಬಾಲ್ಯ ವಿವಾಹಕ್ಕೆ ಕಾರಣರಾದ ಎಲ್ಲರಿಗೂ ಕಾನೂನಿನಂತೆ ಶಿಕ್ಷೆ ನೀಡಬೇಕು. ನಮ್ಮ ನಮ್ಮ ಮನೆಗಳಲ್ಲಿ ಗ್ರಾಮಗಳಲ್ಲಿ ಬಾಲ್ಯ ವಿವಾಹ ಮಾಡದಂತೆ ಮನವಿ ಮಾಡಿಕೊಳ್ಳಬೇಕು. ವಿದ್ಯಾರ್ಥಿಗಳು ಈ ಬಗ್ಗೆ ಜಾಗೃತಿ ಮೂಡಿಸಿ ಸರ್ಕಾರದೊಡನೆ ಸಹಕರಿಸಬೇಕು ಎಂಬುದು ನನ್ನ ಅಭಿಪ್ರಾಯವಾಗಿದೆ.

## 5. ಮಳೆ ನೀರು ಕೊಯ್ಲು

**ಪ್ರಸ್ತಾವನೆ :** ನೀರು ಜೀವನಾವಶ್ಯಕ ವಸ್ತು. ಸಕಾಲಕ್ಕೆ ಮಳೆಯಾಗದೆ ನೀರಿನ ಕ್ಷಾಮ ಉಂಟಾಗುತ್ತಿದೆ. ಇಂದು ಅಂತರ್ಜಲದ ಮಟ್ಟ ಕುಸಿಯುತ್ತಿದೆ ಆದ್ದರಿಂದ ನೀರಿನ ಮೂಲಗಳನ್ನು ಸಂರಕ್ಷಿಸುವುದು ಇಂದಿನ ಅತ್ಯಗತ್ಯವಾದ ಕಾರ್ಯವಾಗಿದೆ. ಇಂತಹ ಕಾರ್ಯಗಳಲ್ಲಿ ಕೊಯ್ಲು ವಿಧಾನ ಸಹ ಒಂದಾಗಿದೆ.

**ವಿಷಯ ನಿರೂಪಣೆ :–** ಮಳೆ ನೀರು ಕೊಯ್ಲು ಎಂಬುದು ಮಳೆನೀರನ್ನು ಒಟ್ಟುಗೂಡಿಸುವ ಅಥವಾ ಸಂಚಯನ ಮಾಡುವ ಮತ್ತು ಶೇಖರಿಸಿಟ್ಟುಕೊಳ್ಳುವ ವಿಧಾನಕ್ಕಿರುವ ಹೆಸರು. ಕುಡಿಯುವ ನೀರನ್ನು ಒದಗಿಸಲು, ಜಾನುವಾರುಗಳಿಗೆ ನೀರುಣಿಸಲು, ನೀರಾವರಿಗಾಗಿ ನೀರಿನ ವ್ಯವಸ್ಥೆ ಮಾಡಲು ಅಥವಾ ಅಂತರ್ಜಲ ಪುನರ್ಭರ್ತಿಕಾರ್ಯ ಎಂದು ಕರೆಯಲಾಗುವ ಪ್ರಕ್ರಿಯೆಯೊಂದರಲ್ಲಿ ನೀರೂ ಪೊಟರೆಯನ್ನು ಪುನಃ ತುಂಬಿಸಲು ಮಳೆನೀರು ಕೊಯ್ಲು ಪದ್ದತಿಯನ್ನು

ಬಳಸಿಕೊಂಡು ಬರಲಾಗಿದೆ. ಮನೆಗಳು, ಗುಢಾರಗಳು ಮತ್ತು ಸ್ಥಳೀಯ ಸಾರ್ವಜನಿಕ ಕಟ್ಟಡಗಳ ಛಾವಣಿಗಳಿಂದ ಸಂಗ್ರಹಿಸಲಾದ ಮಳೆನೀರು, ಕುಡಿಯುವ ನೀರಿಗೆ ತನ್ನದೇ ಆದ ಪ್ರಮುಖ ಕೊಡುಗೆಯನ್ನು ನೀಡಬಲ್ಲದು. ಛಾವಣಿಯ ಮಳೆನೀರು ಸಾಮಾನ್ಯವಾಗಿ ಉತ್ತಮ ಗುಣಮಟ್ಟದ್ದಾಗಿ ಇರುತ್ತದೆ, ಆದ್ದರಿಂದ ಬಳಕೆಗೆ ಮೊದಲು ಅದನ್ನು ಸಂಸ್ಕರಿಸುವ ಅಗತ್ಯ ಕಂಡು ಬರುವುದಿಲ್ಲ. ಸರಳವಾದ ವಿಧಾನದಿಂದ ಮೊದಲ್ಗೊಂಡು ಸಂಕೀರ್ಣವಾದ ಕೈಗಾರಿಕಾ ವ್ಯವಸ್ಥೆಗಳವರೆಗೆ ಮಳೆ ನೀರನ್ನು ಕೊಯ್ಲು ಮಾಡಲು ಹಲವಾರು ವಿವಿಧ ವ್ಯವಸ್ಥೆಗಳಿವೆ. ಸಾಮಾನ್ಯವಾಗಿ ಮಳೆನೀರನ್ನು ನೆಲದಿಂದ ಇಲ್ಲವೇ ಛಾವಣಿಯೊಂದರಿಂದ ಕೊಯ್ಲು ಮಾಡಲಾಗುತ್ತದೆ. ಈ ಎರಡೂ ವ್ಯವಸ್ಥೆಗಳಿಂದ ನೀರನ್ನು ಸಂಗ್ರಹಿಸಬಹುದಾದ ವೇಗವು ಸದರಿ ವ್ಯವಸ್ಥೆಯ ಯೋಜನಾ ಪ್ರದೇಶ, ಅದರ ಸಾಮರ್ಥ್ಯ ಮತ್ತು ಮಳೆ ಸುರಿತದ ತೀವ್ರತೆಯನ್ನು ಅವಲಂಬಿಸಿರುತ್ತದೆ. ಮಳೆನೀರನ್ನು ಅಂತರ್ಜಲ ಪುನರ್ಭರ್ತಿ ಕಾರ್ಯಕ್ಕೂ ಬಳಸಬಹುದಾಗಿದ್ದು ಇದರಲ್ಲಿ ನೆಲದ ಮೇಲೆ ಹರಿಯುವ ಹೆಚ್ಚುವರಿ ಪ್ರಮಾಣದ ನೀರು ಸಂಗ್ರಹಿಸಲ್ಪಡುತ್ತದೆ. ನೀರು ಸಂಗ್ರಹಿಸಲ್ಪಡುತ್ತದೆ ಹಾಗೂ ಹೀರಿಕೆಗೆ ಒಳಗಾಗುವುದರ ಮೂಲಕ ಅಂತರ್ಜಲದ ಪ್ರಮಾಣದಲ್ಲಿ ಹೆಚ್ಚಳವಾಗಲು ಕಾರಣವಾಗುತ್ತದೆ.

**ಉಪಸಂಹಾರ :–** ಸ್ಥಳೀಯವಾಗಿ ದೊರೆಯುವ ಹೆಚ್ಚು ದುಬಾರಿಯಲ್ಲದ ಸಾಮಗ್ರಿಗಳಿಂದ ಮಳೆನೀರು ಕೊಯ್ಲಿನ ವ್ಯವಸ್ಥೆಗಳನ್ನು ಸರಳವಾಗಿ ನಿರ್ಮಿಸಬಹುದು. ಬಹುತೇಕ ವಾಸಯೋಗ್ಯ ತಾಣಗಳಲ್ಲಿ ಇದು ಯಶಸ್ವಿಯಾಗಿದೆ. ಆದ್ದರಿಂದ ಜನರು ಈ ಬಗ್ಗೆ ಹೆಚ್ಚು ಗಮನಹರಿಸಿ. ತಮ್ಮ ತಮ್ಮ ಮನೆಗಳಲ್ಲಿ, ಹೊಲಗಳಲ್ಲಿ ಮಳೆನೀರು ಕೊಯ್ಲಿನ ವ್ಯವಸ್ಥೆ ಮಾಡಿಕೊಂಡರೆ ನೀರಿನ ಸಮಸ್ಯೆಯನ್ನು ಬಹುಮಟ್ಟಿಗೆ ನಿವಾರಿಸಿಕೊಳ್ಳಬಹದಾಗಿದೆ ಎಂಬುದು ನನ್ನ ಅಭಿಪ್ರಾಯವಾಗಿದೆ.

## 6. ಸಾವಯುವ ಬೇಸಾಯ

**ಪ್ರಸ್ತಾವನೆ :–** ಇಂದು ಕೃಷಿ ಕ್ಷೇತ್ರದಲ್ಲಿ ಅನೇಕ ರೀತಿಯ ಸಂಶೋಧನೆಗಳು ನಡೆಯುತ್ತಿವೆ. ಪಾರಂಪರಿಕ ಕೃಷಿ ಪದ್ದತಿ ಹಾಗೂ ವೈಜ್ಞಾನಿಕ ಕೃಷಿ ಪದ್ದತಿಗಳ ಸಾಧಕ ಬಾಧಕಗಳ ಕುರಿತು ಕೃಷಿ ವಿಜ್ಞಾನಿಗಳು ಚರ್ಚೆ ನಡೆಸುತ್ತಿದ್ದಾರೆ. ಹೊಸ ಹೊಸ ಪ್ರಯೋಗಗಳು ನಡೆಯುತ್ತಿವೆ. ಇದರ ಫಲವಾಗಿ ಬಂದಿರುವುದೇ ಸಾವಯವ ಬೇಸಾಯ ಪದ್ದತಿ.

**ವಿಷಯ ವಿಸ್ತರಣೆ :–** ಬೆಳೆಯ ಆವರ್ತನೆ ಹಸಿರು ಗೊಬ್ಬರ ಮಿಶ್ರಗೊಬ್ಬರ, ಜೈವಿಕವಾಗಿ ಕೀಟಗಳ ನಿಯಂತ್ರಗಳನ್ನು ಅವಲಂಬಿತಗೊಂಡಿರುವುದೇ ಸಾವಯವ ಬೇಸಾಯ. ಹಲವು ರಾಷ್ಟ್ರಗಳಲ್ಲಿ ಸಾವಯುವ ಬೇಸಾಯು ಪದ್ದತಿಗಳನ್ನು ಅಂತರಾಷ್ಟ್ರೀಯುವಾಗಿ ನಿಯಮಗಳಿಗೊಳಪಡಿಸಲಾಗಿದೆ ಅಂತಾರ್‍ರಾಷ್ಟ್ರೀಯ ಆಶ್ರಯ ಸಂಘಟನೆಯು ಸಾವಯವ ಸಮಷ್ಟಿಯನ್ನು ರಚಿಸುವುದಕ್ಕಾಗಿ 1972 ರಲ್ಲಿ ಸ್ಥಾಪಿಸಲಾಗಿದೆ. ಸಾವಯವ ಚಳುವಳಿ 1930–1940 ರ ದಶಕದಲ್ಲಿ ಬೇಸಾಯ ಕ್ಷೇತ್ರವನ್ನು ಕೃತಕ ಗೊಬ್ಬರಗಳ ಮೇಲೆ ಹೆಚ್ಚು ಅವಲಂಬಿಸುವುದನ್ನು ಹಿಮ್ಮೆಟ್ಟಿಸುವ ಸಲುವಾಗಿ ಪ್ರಾರಂಭವಾಯಿತು. ಸರ್ ಆಲ್ಬರ್ಟ್ ಹೊವಾರ್ಡ್ ಅವರನ್ನು ಸಾವಯವ ಬೇಸಾಯದ ಪಿತಾಮಹನೆಂದು ವಿಶೇಷವಾಗಿ ಪರಿಗಣಿಸಲಾಗಿದೆ. ವಿಶ್ವದ ಒಟ್ಟು ಕೃಷಿ ಉತ್ಪನ್ನದ

ಪ್ರಮಾಣವನ್ನು ಪರಿಗಣಿಸಿದಾಗ ಸಾವಯವ ಉತ್ಪನ್ನ ಸಣ್ಣ ಪ್ರಮಾಣವೆನಿಸುತ್ತದೆಯಾದರೂ ಅದು ಅನೇಕ ರಾಷ್ಟ್ರಗಳಲ್ಲಿ ವೇಗವಾಗಿ ಬೆಳೆಯುತ್ತಿದೆ. ಸಾವಯವ ವ್ಯವಸಾಯವು ಅರ್ಥಪೂರ್ಣವಾದ ಸಾಮಾಜಿಕ ಆರ್ಥಿಕ ಮತ್ತು ಪರಿಸರ ವಿಜ್ಞಾನದ ಸಮರ್ಥನೀಯ ಬೆಳವಣಿಗೆಗಾಗಿ, ವಿಶೇಷವಾಗಿ ಬಡ ರಾಷ್ಟ್ರಗಳ ಬೆಳವಣಿಗೆಗೆ ಮಹತ್ವಪೂರ್ಣ ಕೊಡುಗೆ ನೀಡುತ್ತದೆ. ಹಲವು ರಾಷ್ಟ್ರಗಳಲ್ಲಿ ಸಾವಯವ ಬೇಸಾಯ ಪದ್ದತಿಗಳನ್ನು ಅಂತರಾಷ್ಟ್ರೀಯವಾಗಿ ನಿಯಮಗಳಿಗೆ ಒಳಪಡಿಸಲಾಗಿದೆ ಮತ್ತು ಕಾನೂನು ಬದ್ದವಾಗಿ ವಿಧಿಸಲಾಗಿದೆ. ಕರ್ನಾಟಕದಲ್ಲಿ ಸಾವಯವ ಕೃಷಿಯನ್ನು ಪ್ರೋತ್ಸಾಹಿಸಲೆಂದು **'ಸಾವಯವ ಕೃಷಿ ಮಿಷನ್'** ರಚಿಸಲಾಗಿದೆ.

**ಉಪಸಂಹಾರ :–** ಸಾವಯವ ವ್ಯವಸಾಯವು ಒಂದು ಉತ್ತಮ ಜ್ಞಾನಯುಕ್ತ ಕೇಂದ್ರೀಕೃತ ಉತ್ಪಾದನೆಯ ವ್ಯವಸ್ಥೆಯಾಗಿದೆ. ಮತ್ತು ಹೆಚ್ಚು ಇಳುವರಿ ನೀಡುವ ಬೇಸಾಯ ವ್ಯವಸ್ಥೆಗಳಿಗಿಂತ ಹೆಚ್ಚು ಪರಿಸರ ಸ್ನೇಹಿಯಾಗಿದೆ. ಆದ್ದರಿಂದ ಇದನ್ನು ರೈತರು ಅಳವಡಿಸಿಕೊಳ್ಳುವ ಮೂಲಕ ತಮ್ಮ ಬದುಕನ್ನು ಉತ್ತಮಪಡಿಸಿಕೊಳ್ಳಬಹುದೆಂಬುದು ನನ್ನ ಅಭಿಪ್ರಾಯವಾಗಿದೆ.

## ಅನುಬಂಧ–3

**1. ಮೌಖಿಕ ಅಭಿವ್ಯಕ್ತಿ**

**2. ಒಗಟು**

**3. ನುಡಿಗಟ್ಟು**

**4. ಗಾದೆ**

### ಮೌಖಿಕ ಅಭಿವ್ಯಕ್ತಿ

ಒಬ್ಬನು ಮತೊಬ್ಬನನ್ನು ಸಂಪರ್ಕಿಸಲು ಮಾತು ಮಾಧ್ಯಮವಾಗಿದೆ. ಮಾತು ರೂಢಿಯಿಂದ ಅಳವಡುತ್ತದೆ. ಆದರೆ ಸರಿಯಾದ ರೀತಿಯಲ್ಲಿ ಮಾತನ್ನು, ಸಂದರ್ಭೋಚಿತವಾಗಿ ಆಡುವುದಕ್ಕೆ ಸಂಸ್ಕಾರ, ತರಬೇತಿ ಅವಶ್ಯಕ. 'ಊಟ ಬಲ್ಲವನಿಗೆ ರೋಗವಿಲ್ಲ; ಮಾತು ಬಲ್ಲವನಿಗೆ ಜಗಳವಿಲ್ಲ, ಎಂಬ ಗಾದೆ ಮಾತು. ಮಾತುಗಾರಿಕೆಯ ಸಾಮಾಜಿಕ ಪರಿಣಾಮದ ಕಡೆ ಗಮನ ಸೆಳೆಯುತ್ತದೆ. "ಮಾತೇ ಮುತ್ತು, ಮಾತೇ ಮೃತ್ಯು" ಎಂಬ ಸೂಕ್ತಿಯೂ ಮಾತಿನ ಮಹತ್ವದ ಬಗ್ಗೆ ಎಚ್ಚರಿಸುತ್ತದೆ.

ಮಾತನಾಡುವುದೇ ಮೌಖಿಕ ಅಭಿವ್ಯಕ್ತಿ. ವಿದ್ಯಾರ್ಥಿ ಈ ಕಲೆಯನ್ನು ಅಳವಡಿಸಿಕೊಂಡಾಗ ಅವನ ವ್ಯಕ್ತಿತ್ವಕ್ಕೆ ಸ್ಪಷ್ಟರೂಪ ಬರುತ್ತದೆ. ಒಳ್ಳೆಯ ಗುಣ, ಒಳ್ಳೆಯ ಬುದ್ಧಿ ಮಾತ್ರ ಇದ್ದರೆ ಸಾಲದು. ಅದು ಇತರರಿಗೆ ಪ್ರಯೋಜನಕಾರಿಯಾಗಿ ಆಕರ್ಷಕವಾಗಿ ಹೊರ ಹೊಮ್ಮಬೇಕು.

**1. ಉಚ್ಚಾರಣಾ ಕ್ರಮ :**

ಸ್ಪಷ್ಟ, ಸುಲಲಿತ ಹಾಗೂ ಭಾವಾಭಿವ್ಯಕ್ತಿಗೆ ಅನುಗುಣವಾಗಿ ಏರಿಳಿತದ ಧ್ವನಿ ಇದನ್ನು ರೂಢಿಯಿಂದ ತಿದ್ದಿ, ಸುಧಾರಿಸಿಕೊಳ್ಳಲು ಅವಕಾಶವಿದೆ.

**2. ಪದ ಸಂಪತ್ತು**

ಯಾವುದೇ ವಿಷಯವನ್ನು ಖಚಿತವಾಗಿ, ಅರ್ಥಪೂರ್ಣವಾಗಿ, ಇನ್ನೊಬ್ಬರಿಗೆ ಮನವರಿಕೆ ಮಾಡಿಕೊಡುವಂತಹ ಪದಜ್ಞಾನ, ಅದಕ್ಕೆ ಪೂರಕವಾದ ನುಡಿಗಟ್ಟು, ಗಾದೆ ಮಾತು, ಸೂಕ್ತಿ ಮುಂತಾದ ಪರಿಕರಗಳನ್ನು ಅಳವಡಿಸಿಕೊಳ್ಳಬೇಕು. ಪತ್ರಿಕೆ, ಪುಸ್ತಕಗಳ ಓದಿನಿಂದ ಹಾಗೂ ಬಲ್ಲವರ ಜೊತೆಗಿನ ಸಂಭಾಷಣೆ, ಚರ್ಚೆಗಳಿಂದ ಅಭಿವೃದ್ಧಿಪಡಿಸಿಕೊಳ್ಳಲು ಸಾಧ್ಯ.

**3. ಸಂದರ್ಭೋಚಿತ ಅಭಿವ್ಯಕ್ತಿ ಕ್ರಮ.**

ಒಬ್ಬಿಬ್ಬರೆದುರು ಅನೌಪಚಾರಿಕ ರೀತಿಯಲ್ಲಿ ಮಾತಾಡುವುದಕ್ಕೆ: ಅಪರಿಚಿತರೆದುರು, ಹಿರಿಯರೆದುರು, ಸಂದರ್ಶನ ಸಂದರ್ಭದಲ್ಲಿ ಮಾತಾಡುವುದಕ್ಕೆ ವ್ಯತ್ಯಾಸವಿದೆ. ಭಾಷಣದಲ್ಲಿ ಅನುಸರಿಸಬೇಕಾದ ಕ್ರಮವು ಬೇರೆಯೇ ಆಗಿದೆ.

**ಒಗಟು**

ಒಗಟು ಎಂದರೆ ಗೂಢಾರ್ಥವುಳ್ಳ ಜಾಣ್ಮೆಯ ಮಾತು. ಇದನ್ನು ನಮ್ಮ ಜನಪದರು ಮಾತಿನ ಆಟವಾಗಿ ಯಥೇಚ್ಛ ಬಳಸಿಕೊಳ್ಳುತ್ತಾರೆ. ಸಾಮಾನ್ಯವಾಗಿರುವ ಯಾವುದೇ ಒಂದು ವಸ್ತು/ ಸಂಗತಿಯನ್ನು ಸಾಂಕೇತಿಕ ಮಾತಿನಿಂದ ವರ್ಣಿಸುತ್ತಾರೆ. ಇದು ಸವಾಲಿನ ಧಾಟಿಯಲ್ಲಿರುತ್ತದೆ. ಕೇಳಿದವರು ತಮ್ಮ ಲೋಕಜ್ಞಾನ ಮತ್ತು ಬುದ್ಧಿ ಕೌಶಲ್ಯದಿಂದ ಗೂಢಾರ್ಥವನ್ನು ಬಿಡಿಸುತ್ತಾರೆ. ಇಲ್ಲಿ ಕೇಳುವ, ಹೇಳುವ ಕ್ರಿಯೆ ಉಲ್ಲಾಸದ ವಾತಾವರಣ ಬುದ್ಧಿ ಕೌಶಲ್ಯ ಸೃಷ್ಟಿಸುತ್ತದೆ. ಒಗಟಿನ ಮಾತು ಹಾಡಿನ ರೂಪದಲ್ಲಿಯೂ ಇರಬಹುದು. ಪ್ರಾಸಾಲಂಕಾರದಿಂದ ಕೂಡಿರುತ್ತದೆ.

ಉದಾ: 1. ಅಂಕುಡೊಂಕಿನ ಬಾವಿ
ಶಂಕಚಕ್ರದ ಬಾವಿ
ಇಣಿಕಿನೋಡಿದರೆ ನೀರಿಲ್ಲ

ಉ : ಕಿವಿ

2. ಮಣಿ ಮಣಿಗಾರ
ಮಣಿ ಸಿಂಗಾರ
ಎತ್ತೋಗಿದ್ದೋ ರಾಜಕುಮಾರ
ಅವರಾಡತ್ತಿದ್ದರು : ಇವರು ನೋಡುತ್ತಿದ್ದರು:
ಅವರಾಟ ಕೆಡಿಸಿ ಓಡಿಬಂದೆ

ಉ : ಚೇಳು

3. ಮರದೊಳಗೆ ಮರಹುಟ್ಟಿ
ಭೂಚಕ್ರ ಕಾಯಾಗಿ
ತಿನ್ನಬಾರದ ಹಣ್ಣು ಬಲುರುಚಿ

ಉ : ಮಗು

4. ಚಿಕ್ಕನೆ ತುಂಬ ಚಕ್ಕೆ ತುಂಬಿದೆ
(ಇತ್ತೀಚೆಗೆ 'ಬೆಂಕಿಪೊಟ್ಟಣ' ಎಂದೂ ಅನ್ನುತ್ತಾರೆ)

ಉ : ಹಲ್ಲು

5. ಅಮ್ಮನ ಸೀರೆ ಮಡಿಸಿದೋರಿಲ್ಲ
ಅಪ್ಪನ ದುಟ್ಟು ಎಣಿಸಿದೋರಿಲ್ಲ

ಉ : ಆಕಾಶ ಮತ್ತು ನಕ್ಷತ್ರ

6. 1) ಚಿನ್ನ ಬಿಸಾಡತ್ತಾರೆ: ಬೆಳ್ಳಿ ತಿಂತಾರೆ
   2) ಅಂಗಣ್ಣ ಮಂಗಣ್ಣ ಅಂಗೀ ಬಿಚ್ಕೊಂಡು ನುಂಗಣ್ಣ
      ಉ : ಬಾಳೆಹಣ್ಣು

7. ಮೂರು ಜನ ಅಕ್ಕ ತಂಗೀರು ಹೊಳೆಗೆ ಹೋಗ್ತಾರೆ
   ಒಬ್ಬಳು ತೇಲ್ತಾಳೆ: ಒಬ್ಬಳು ಮುಳುಗ್ತಾಳೆ: ಒಬ್ಬಳು ಕರಗ್ತಾಳೆ.
      ಉ : ಎಲೆ, ಅಡಿಕೆ, ಸುಣ್ಣ

8. ಅಂಗಡಿಯಿಂದ ತರ್ತಾರೆ, ಮುಂದಿಟ್ಟುಕೊಂಡು ಅಳ್ತಾಳೆ
      ಉ: ಈರುಳ್ಳಿ / ಉಳ್ಳಾಗಡ್ಡಿ

9. ಅಂಕುಡೊಂಕು 'ಅ' : ಅದರ ತಮ್ಮ 'ಸಾ'
   ನಾಕು ಚೌಕ 'ಬೆ: ಕರಿಯದೊಂದು 'ಮೆ'
      ಉ: ಅರಿಶಿನ ಕೊಂಬು: ಸಾಸಿವೆ: ಬೆಲ್ಲ: ಕರಿಯದೊಂದು ಮೆಣಸು

10. ಚೋಟುದ್ದ ಹುಡುಗೀಗೆ ಮಾರುದ್ದ ಜಡೆ
      ಉ : ಸೂಜಿದಾರ

**ನುಡಿಗಟ್ಟು :**

ನಾವು ಆಡುವ ಮಾತು ವಾಕ್ಯ ರೂಪದಲ್ಲಿರುತ್ತದೆ. ವಾಕ್ಯವು ಪದಗಳಿಂದ ಕೂಡಿದ್ದು ಅವುಗಳಿಗೆ ವಾಚ್ಯಾರ್ಥ ಮತ್ತು ಲಾಕ್ಷ್ಯಾರ್ಥಗಳೆಂಬ ಎರಡು ಬಗೆಯ ಅರ್ಥಗಳಿರುತ್ತವೆ. ಪದಗಳಿಂದ ನೇರವಾದ ವ್ಯಕ್ತವಾದರೆ ಅದನ್ನು ವಾಚ್ಯಾರ್ಥವೆಂದೂ ವಿಶಿಷ್ಟಭಾವವು ಅಭಿವ್ಯಕ್ತವಾದರೆ ಲಾಕ್ಷ್ಯಾರ್ಥವೆಂದೂ ಕರೆಯಲಾಗುವುದು. ವಾಚ್ಯಾರ್ಥ ನೀಡುವ ಬಿಡಿ ಪದಗಳನ್ನು ಸೂಚ್ಯಾರ್ಥ ನೀಡುವಂತೆ ಸಮಾಸಗೊಳಿಸಿ ವಿಶಿಷ್ಟ ಅರ್ಥಕ್ಕೆ ಅವಕಾಶ ಕಲ್ಪಿಸಲಾಗುವುದು. ಹೀಗೆ ರಚಿತವಾದ ಪದಪುಂಜವೇ 'ನುಡಿಗಟ್ಟು ' ಇದು ಆಯಾ ಭಾಷೆಯ ಜಾಯಮಾನಕ್ಕೆ ಅನುಗುಣವಾಗಿರುತ್ತದೆ. ನುಡಿಗಟ್ಟನ್ನು ಮತ್ತೊಂದು ಭಾಷೆಗೆ ಭಾಷಾಂತರಿಸಲಾಗುವುದು. ಏಕೆಂದರೆ, ಇದಕ್ಕೆ ಶಬ್ದಶಃ ಅರ್ಥ ಇರುವುದಿಲ್ಲ.

ಉದಾ: ತಲೆದೂಗು – ಮೆಚ್ಚಿಕೊಳ್ಳು

ಸುಶ್ರಾವ್ಯವಾದ ಸಂಗೀತವನ್ನು ಕೇಳಿ ತಲೆದೂಗುತ್ತೇವೆ.

ಮೀಸೆ ತಿರುಗು – ಗರ್ವಪಡು

ಕ್ರಿಕೆಟ್ ಪಂದ್ಯದಲ್ಲಿ ಭಾರತದ ಆಟಗಾರರು ಜಯಗಳಿಸಿದಾಗ ಭಾರತೀಯರೆಲ್ಲರೂ ಮೀಸೆ ತಿರುವಿದರು.

ಗಂಟಲು ಕಟ್ಟು –ಮಾತು ಮೂಕವಾಗು

ಮೊರೆ ಹೋಗು – ಆಶ್ರಯ ಬೇಡು

ತಲೆ ಹಾಕು – ಅಧಿಕ ಪ್ರಸಂಗ ಮಾಡು

ಮೂಗು ತೂರಿಸು – ಅಧಿಕ ಪ್ರಸಂಗ ಮಾಡು

ಹಣ್ಣು ಮಾಡು – ಜರ್ಜರಿತಗೊಳ್ಳು

ರಾಮ ಬಾಣ – ಹುಸಿಯಾಗದ, ಗುರಿತಪ್ಪದ

ನಖ ಶಿಖಾಂತ – ಸಂಪೂರ್ಣ

ಹಿತ್ತಾಳೆ ಕಿವಿ–ಚಾಡಿ ಮಾತು ಕೇಳುವ

ಹಣೆ ಬರಹ – ವಿಧಿ ಲಿಖಿತ

ಹುಬ್ಬು ಗಂಟಿಕ್ಕು – ಅಸಮಾಧಾನ ಪಡು.

## ಗಾದೆ :–

'ಗಾಥಾ' ಎಂಬ ಪ್ರಾಕೃತ ಪದದ ಅಪಭ್ರಂಶ ರೂಪವೇ 'ಗಾದೆ'. ಗಾದೆ ಒಂದು ನಾಡಿನ ಜನಸಾಮಾನ್ಯರು ನಿತ್ಯ ವ್ಯವಹಾರದಲ್ಲಿ ಸಹಜವಾಗಿ ಬಳಸುವ ರೂಢಿಗತ ಅಲಂಕಾರಿತ ಮಾತು. ಇದು ಯಾರಿಂದ ಯಾವಾಗ ಹುಟ್ಟಿತೋ ಹೇಳಲಾಗದು. ಒಂದು ವಿಶಿಷ್ಟ ಅನುಭವವು ಸೂತ್ರಪ್ರಾಯ ನುಡಿಗಟ್ಟಿನಲ್ಲಿ ರೂಪುಗೊಳ್ಳುತ್ತದೆ.

ಗಾಥಾ>ಗಾಥೆ>ಗಾದೆ – ಎಂದರೆ ಎಲ್ಲರಿಗೂ ತಿಳಿದಿರುವ ಮಾತು. ಇದನ್ನು 'ನಾಣ್ಣುಡಿ' ಎಂದೂ ಕರೆಯುತ್ತಾರೆ. 'ಸೂಕ್ತಿ' – ವ್ಯಕ್ತಿಯೊಬ್ಬನ ಹೇಳಿಕೆಯಾದರೆ 'ಗಾದೆ' ಜನಸಮುದಾಯದ ಅನುಭಾವದ ನುಡಿಯಾಗಿದೆ.

**ಗಾದೆಯ ಲಕ್ಷಣಗಳು :**

1. ಸಂಕ್ಷಿಪ್ತವಾಗಿರುತ್ತದೆ. ಅರ್ಥ ಚುರುಕಾಗಿ, ಚುಟುಕಾಗಿರುತ್ತದೆ.
2. ಪ್ರಾಸಬದ್ಧ ಅಕ್ಷರಗಳು ಅರ್ಥಪೂರ್ಣವಾಗಿ ಜೋಡಣೆಯಾಗಿ ಇರುತ್ತವೆ.
3. ಒಂದಲ್ಲ ಒಂದು ಉಪಮೆ ಅಥವಾ ದೃಷ್ಟಾಂತ ಅಡಕವಾಗಿರುತ್ತದೆ.

ಉದಾ: ಸಂತೆ ಹೊತ್ತಿಗೆ ಮೂರು ಮೊಳ ಸೀರೆ ನೇಯ್ದರು. ಯಾವುದೇ ಕೆಲಸವನ್ನು ಮಾಡಿ ಯಶಸ್ವಿಯಾಗಲು ವ್ಯವಸ್ಥಿತವಾದ ಪೂರ್ವಸಿದ್ಧತೆ ಅಗತ್ಯ ಎಂಬ ಸತ್ಯವನ್ನು ಇದು ತಿಳಿಸುತ್ತದೆ. ಸಮಯಪ್ರಜ್ಞೆ, ಪ್ರಾಮಾಣಿಕ ಪ್ರಯತ್ನ ಇಲ್ಲಿ ಮುಖ್ಯ. ಉದಾಹರಣೆಗೆ ವಿದ್ಯಾರ್ಥಿಯೊಬ್ಬ ಪರೀಕ್ಷೆಯಲ್ಲಿ ಉತ್ತಮ ಅಂಶಗಳನ್ನು ಗಳಿಸಬೇಕಾದರೆ ಆತ ವರ್ಷದ ಪ್ರಾರಂಭದಿಂದಲೂ ಕ್ರಮ ಬದ್ಧವಾಗಿ ಅಧ್ಯಯನ ನಡೆಸಬೇಕು. ಆಗ ಮಾತ್ರ ಓದಿದನ್ನು ಮನನ ಮಾಡಲು ಸಾಧ್ಯವಾಗುತ್ತದೆ. ಪರೀಕ್ಷೆಯಲ್ಲಿ ಯಶಸ್ವಿಯಾಗಲೂ ಸುಲಭವಾಗುತ್ತದೆ. ಹಾಗಿಲ್ಲದೆ ಪರೀಕ್ಷೆ ಸಮೀಪಿಸಿದಾಗ ಮಾತ್ರ ಓದಲು ತೊಡಗಿದರೆ ಸಮಯದ ಅಭಾವದಿಂದ ವಿಷಯಗಳು ನೆನಪಿನಲ್ಲಿ ಉಳಿಯದೆ ಪರೀಕ್ಷೆಯಲ್ಲಿ ಗಲಿಬಿಲಿಗೊಳ್ಳುವ ಪ್ರಸಂಗ ಎದುರಾಗುತ್ತದೆ.

ಸಂತೆಗೆ ಹೋಗಿ ವ್ಯಾಪಾರ ಮಾಡಿ ಒಳ್ಳೆಯ ಲಾಭವನ್ನು ಹೊಂದಬೇಕಾದರೆ ಸಾಕಷ್ಟು ಸಮಯವಿರುವಾಗಲೇ ನೂಲನ್ನು ತಂದು ಅಂದವಾದ ವಸ್ತ್ರವನ್ನು ನೇಯ್ದು ತೆಗೆದುಕೊಂಡು ಹೋದರೆ ಎಲ್ಲರ ಗಮನವನ್ನು ಸೆಳೆಯುತ್ತದೆ ತಕ್ಕ ಬೆಲೆಯೂ ಸಿಗುತ್ತದೆ. ಅವಸರದಲ್ಲಿ ಹೊರಡುವಾಗ ನೇಯ್ದು ತೆಗೆದುಕೊಂಡು ಹೋದರೆ ಅದಕ್ಕೆ ಬಂಧ ಬಿಗಿಯಿರುವುದಿಲ್ಲ. ಅಂದವೂ ಇರುವುದಿಲ್ಲ. ಕೊನೆಗೆ ಉತ್ತಮ ಬೆಲೆಯೂ ದಕ್ಕುವುದಿಲ್ಲ.

ಅಂದರೆ ಯಾವುದೇ ಕೆಲಸವನ್ನು ಅವಸರದಲ್ಲಿ ಮಾಡಬಾರದು. ಆಗ ಅದು ಬಯಸಿದ ಫಲವನ್ನು ಕೊಡುವುದಿಲ್ಲ ಎಂಬುದು ಈ ಗಾದೆಯ ಸಾರ. ಇದೊಂದು ಪ್ರಸಿದ್ಧವಾದ ಗಾದೆ ಮಾತು.

**ಕೆಲವು ಗಾದೆಗಳು :**

1. ಅಂಗೈ ಹುಣ್ಣಿಗೆ ಕನ್ನಡಿ ಬೇಕೆ ?
2. ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯ ಇಲ್ಲ.
3. ಅಕ್ಕಿ ಮೇಲಾಸೆ, ನೆಂಟರ ಮೇಲೆ ಪ್ರೀತಿ
4. ಅಡಿಕೇಲಿ ಹೋದ ಮಾನ ಆನೆ ಕೊಟ್ಟರೂ ಬರದು
5. ಅಲ್ಪರಸಂಗ ಅಭಿಮಾನ ಭಂಗ
6. ಆಕಳು ಕಪ್ಪಾದ್ರೆ, ಹಾಲು ಕಪ್ಪೆ ?
7. ಆಯ ನೋಡಿ ಪಾಯ ಹಾಕು
8. ಆಳಾಗಬಲ್ಲವನು ಅರಸನಾಗಬಲ್ಲ
9. ಇಬ್ಬರ ಜಗಳ ಮೂರನೆಯವನಿಗೆ ಲಾಭ
10. ಇಲ್ಲದವನಿಗೆ ಒಂದು ಚಿಂತೆ, ಇದ್ದವನಿಗೆ ನೂರು ಚಿಂತೆ
11. ಉಗುರಿನಿಂದ ಹೋಗುವುದಕ್ಕೆ ಕೊಡಲಿ ತೆಗೆದುಕೊಂಡಂತೆ
12. ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ
13. ಎತ್ತು ಏರಿಗೆ ಎಳದ್ರೆ, ಕೋಣ ನೀರಿಗೆ ಎಳೀತು
14. ಜಾಣನಿಗೆ ಮಾತಿನ ಪೆಟ್ಟು, ಕೋಣನಿಗೆ ದೊಣ್ಣೆಪೆಟ್ಟು
15. ಹತ್ತು ಕಟ್ಟೋ ಕಡೆ ಒಂದು ಮುತ್ತು ಕಟ್ಟು
16. ತುಂಬಿದ ಕೊಡ ತುಳುಕೋದಿಲ್ಲ
17. ಕುಂಬಳಕಾಯಿ ಕಳ್ಳ ಅಂದ್ರೆ ಹೆಗಲು ಮುಟ್ಟಿನೋಡಿಕೊಂಡ
18. ಮನೆಗೆ ಮಾರಿ ಪರರಿಗೆ ಉಪಕಾರಿ
19. ಹಲ್ಲು ಇದ್ದವನಿಗೆ ಕಡಲೆ ಇಲ್ಲ, ಕಡಲೆ ಇದ್ದವನಿಗೆ ಹಲ್ಲು ಇಲ್ಲ
20. ಹಣ ಅಂದರೆ ಹೆಣಾನು ಬಾಯ್ ಬಿಡುತ್ತೆ

## ಗಾದೆಗಳ ವಿಸ್ತರಣೆ

### 1. ಶಕ್ತಿಗಿಂತ ಯುಕ್ತಿ ಮೇಲು

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ವವನ್ನು ಬಹು ಸುಂದರವಾಗಿ ಅರ್ಥೈಸುತ್ತದೆ. ಪ್ರಸ್ತುತ ಗಾದೆ 'ಶಕ್ತಿಗಿಂತ ಯುಕ್ತಿ ಮೇಲು' ಎಂಬುದು ಒಂದು ಜನಪ್ರಿಯ ಗಾದೆ. ಶಕ್ತಿ ದೈಹಿಕವಾದದ್ದು. ಯುಕ್ತಿ ಬುದ್ಧಿಚಾತುರ್ಯವನ್ನು ಅವಲಂಬಿಸಿದೆ. ಶಕ್ತಿಯಿಂದ ಗೆಲ್ಲಲಾಗದ ಸಂದರ್ಭದಲ್ಲಿ ಯುಕ್ತಿಯನ್ನು ಪ್ರಯೋಗಿಸಬೇಕು. ತನ್ನ ಜೀವ ಉಳಿಸಿಕೊಳ್ಳಲು ಮೊಲವೊಂದು ಸಿಂಹದಿಂದ ತನ್ನನ್ನು ತಾನು ಯುಕ್ತಿಯಿಂದ ಕಾಪಾಡಿಕೊಂಡ ಕಥೆ ಎಲ್ಲರಿಗೂ ತಿಳಿದಿದೆ. ದೈಹಿಕ ಶಕ್ತಿಗೆ ಮಿತಿ ಇರುತ್ತದೆ. ಮನಸ್ಸಿನ ಶಕ್ತಿಗೆ ಮಿತಿ ಇಲ್ಲ ಅಪಾಯದ ಸಂದರ್ಭದಲ್ಲಿ ಆಲೋಚನಾ ಶಕ್ತಿಗೆ ಹೆಚ್ಚೆಚ್ಚು ಕೆಲಸ ಕೊಡಬೇಕು.

### 2. ಅತಿ ಆಸೆ ಗತಿ ಕೇಡು

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ವವನ್ನು ಬಹುಸುಂದರವಾಗಿ ಅರ್ಥೈಸುತ್ತದೆ. ಪ್ರಸ್ತುತ 'ಅತಿ ಆಸೆ ಗತಿ ಕೇಡು' ಗಾದೆಯ ತಿರುಳನ್ನು 'ತಿರುಕನ ಕನಸು' ಪದ್ಯ ತುಂಬಾ ಸ್ಪಷ್ಟವಾಗಿ ವಿವರಿಸುತ್ತದೆ. ತಿರುಕ ರಾಜನಾಗುವ ಅವಕಾಶ ಪಡೆದಂತೆಯೂ ಸಕಲ ವೈಭವಗಳಲ್ಲಿ ಮೆರೆದಂತೆಯೂ ಕನಸು ಕಾಣುತ್ತಾನೆ. ಶತ್ರುಗಳ ದಾಳಿ ಎದುರಾಗುತ್ತಲೇ ಕೈಕಾಲುಗಳನ್ನು ಒದರಿ ಎಚ್ಚರಗೊಳ್ಳುತ್ತಾನೆ. ಅಂದು ಲಭಿಸಿದ ಅನ್ನದ ಬಟ್ಟಲೂ ಮಣ್ಣು ಪಾಲಾಗುತ್ತದೆ. ತನ್ನ ಇತಿಮಿತಿ ಮೀರಿ ಆಸೆ ಪಡಬಾರದು. ಏಕೆಂದರೆ ಹಾಗೆ ಮಿತಿಮೀರಿ ಆಸೆ ಪಟ್ಟದ್ದು ಅದೃಷ್ಟವಶಾತ್ ಸಿಕ್ಕರೂ ಅದರ ಬೆನ್ನಲೆ ಬರುವ ಅಪಾಯ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಶಕ್ತಿ ಇರುವುದಿಲ್ಲ.

### 3. ಕೈ ಕೆಸರಾದರೆ ಬಾಯಿ ಮೊಸರು

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ವವನ್ನು ಬಹು ಸುಂದರವಾಗಿ ಅರ್ಥೈಸುತ್ತದೆ. ಪ್ರಸ್ತುತ ಗಾದೆ 'ಕೈ ಕೆಸರಾದರೆ ಬಾಯಿ ಮೊಸರು' ಈ ದಿನಗಳಲ್ಲಿ ಎಚ್ಚರಿಕೆಯ ಗಂಟೆಯಾಗಿದೆ. ಕೈ ಕೆಸರು ಅಥವಾ ಕೊಳೆಯಾಗುವುದು ಶ್ರಮದ ದುಡಿಮೆಯನ್ನು ಸಂಕೇತಿಸಿದರೆ ಮೊಸರು ಅದರ ಪ್ರತಿಫಲವನ್ನು ಬಿಂಬಿಸುತ್ತದೆ. ಪ್ರಕೃತಿಯಲ್ಲಿ ದೇಹ ದಂಡಿಸದೆ ಬದುಕಲು ಹೊರಟರೆ ಅಂಥಾ ದೇಹ ಶಿಥಿಲಗೊಳ್ಳುತ್ತದೆ. ಯಾವ ರೂಪದಲ್ಲಾದರೂ ಶ್ರಮ ಪಡಲೇಬೇಕು.

4. **ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ**

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ವವನ್ನು ಬಹುಸುಂದರವಾಗಿ ಅರ್ಥೈಸುತ್ತದೆ. ಪ್ರಸ್ತುತ ಗಾದೆ 'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ' ಮನುಷ್ಯನ ಜೀವನ ಕ್ರಮಕ್ಕೆ ನೇರವಾಗಿ ಸಂಬಂಧಿಸಿದೆ. ಈ ಗಾಥೆಯಲ್ಲಿ ಬಾಗುವುದು ಎಂದರೆ ದರ್ಪಕ್ಕೆ ಬಾಗಿ ನಡೆಯುವುದೆಂದು, ವಿನಯದಿಂದ ತಿಳಿದವರೆದುರು ಬಾಗಿ, ಅವರಿಂದ ಮಾರ್ಗದರ್ಶನ ಹೊಂದಬೇಕು ಎಂಬ ಸಂಕೇತವಿದೆ. ಬಾಲ್ಯದಲ್ಲಿಯೇ ಮಗುವಿಗೆ ಒಳಿತು–ಕೆಡುಕುಗಳನ್ನು ವಿಭಜಿಸುವ, ಒಳಿತನ್ನು ಎಷ್ಟೇ ಕಷ್ಟವಾದರೂ ಅನುಸರಿಸುವ ಶಿಕ್ಷಣ ನೀಡುವುದು. ಅಗತ್ಯ ವಯಸ್ಸಿಗೆ ಬಂದ ಭಾಗ್ಯ ಬಾಲ್ಯದಿಂದ ರೂಢಿಸಿಕೊಂಡಿರುವ ತಿಳಿವಳಿಕೆಗಳು ತಪ್ಪು ಎಂದು ತಿದ್ದಲು ಹೊರಟರೆ ಉಪಯೋಗವಾಗುವುದಿಲ್ಲ. ಪರಿಸ್ಥಿತಿಗಳೊಂದಿಗೆ ಹೊಂದಿಕೊಳ್ಳುವುದು ಬಾಲ್ಯದಿಂದಲೂ ರೂಢಿಸಿಕೊಳ್ಳಬೇಕು, ಸ್ವಾಭಿಮಾನವನ್ನು ಬಿಡಬಾರದು.

5. **ತಾಳಿದವನು ಬಾಳಿಯಾನು**

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ವವನ್ನು ಬಹು ಸುಂದರವಾಗಿ ಅರ್ಥೈಸುತ್ತದೆ. "ತಾಳುವಿಕೆಗಿಂತ ತಪವು ಇಲ್ಲ" ಎಂದಿದ್ದಾರೆ ಕನಕದಾಸರು. ಗಿಡ ನೆಟ್ಟ ಕೂಡಲೇ ಫಸಲು ಬಿಡಬೇಕು ಎಂದರೆ ಸಾಧ್ಯವಿಲ್ಲ. ಸಂಗೀತಾಭ್ಯಾಸ ಮಾಡಿದರೆ ಒಂದೇ ತಿಂಗಳಿನಲ್ಲಿ ಕಛೇರಿ ನೀಡುವಂತಾಗಬೇಕು ಎನ್ನುವುದು ಸಾಧ್ಯವಿಲ್ಲ. ಪ್ರತಿಯೊಂದು ಸಾಧನೆಯಲ್ಲೂ ತಾನು ಬೇಕು ತಾಳ್ಮೆ ಎಂದರೆ ಆಮೆಗತಿಯಲ್ಲಿ ಸಾಗುವುದು ಎಂದರ್ಥವಲ್ಲ ಯಾವ ಸಾಧನೆಗೆ ಎಷ್ಟು ಸಮಯ ಮತ್ತು ಪ್ರಯತ್ನಗಳು ಬೇಕೋ ಅವನ್ನು ಪೂರ್ಣತೆಯಿಂದ ಮಾಡಲೇಬೇಕಾಗುವ ಶಕ್ತಿಯೇ ತಾಳ್ಮೆ; ತಾಳ್ಮೆಯಿಂದ ಕಟ್ಟಿದ್ದು ಮತ್ತು ಪಡೆದಿದ್ದು ದೀರ್ಘಕಾಲ ಬಾಳುತ್ತದೆ.

6. **ಆಳಾಗಬಲ್ಲವನು ಅರಸನಾಗಬಲ್ಲ**

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ವವನ್ನು ಬಹು ಸುಂದರವಾಗಿ ಅರ್ಥೈಸುತ್ತದೆ. ಕಾಯಕರ ಘನತೆಯನ್ನು ಬಡವರು ಶ್ರೀಮಂತರೆನ್ನದೆ ತಿಳಿದು ಕೊಳ್ಳಬೇಕಾಗಿರುವುದು ಅಗತ್ಯ. ತಾನು ಪುರುಷ ಗೃಹಕೃತ್ಯಗಳನ್ನು ಮಾಡುವುದು ಅವಮಾನ. ಎರಡು ಪದವಿಗಳನ್ನು ಪಡೆದಿರುವವನು ಹಳ್ಳಿಯಲ್ಲಿ ಕೃಷಿ ಮಾಡುವುದು ಅವಮಾನ ಎಂಬಂಥ ಧೋರಣೆ ಸರಿಯಲ್ಲ. ಸಾಮಾನ್ಯ ಮನುಷ್ಯ ತನ್ನ ದುಡಿಮೆಯ ಬಲದಿಂದ ಎತ್ತರಕ್ಕೆ ಏರಿರುವ ಉದಾಹರಣೆಗಳು ಸಾಕಷ್ಟಿವೆ. ಆಳಿನ ದುಡಿಮೆ ಸಮಸ್ಯೆ ಸ್ಥಿತಿಗತಿಗಳನ್ನು ಸ್ವತಃ ಅವರೊಂದಿಗೆ ಬೆರೆತು ಅರ್ಥಮಾಡಿಕೊಂಡರಷ್ಟೇ ಆರಸ ಅದನ್ನು ಪರಿಹರಿಸಲು ಸಾಧ್ಯ.

## 7. ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ವವನ್ನು ಬಹು ಸುಂದರವಾಗಿ ಅರ್ಥೈಸುತ್ತದೆ. ಪ್ರಸ್ತುತ ಗಾದೆ 'ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು' ಎಂಬುದು ಒಂದು ಜನಪ್ರಿಯ ಗಾದೆಯಾಗಿದೆ. ತಾಯಿ ನಮ್ಮನ್ನು ಒಂಬತ್ತು ತಿಂಗಳು ತನ್ನ ಗರ್ಭದಲ್ಲಿಟ್ಟುಕೊಂಡು ಪೋಷಿಸಿದರೆ, ಹೊತ್ತನಾಡು ನಮ್ಮನ್ನು ಜೀವನಪೂರ್ತಿ ತನ್ನ ಮಡಿಲಲ್ಲಿಟ್ಟು ಪೋಷಿಸುತ್ತದೆ. ಹೆತ್ತತಾಯಿಯ ಮಡಿಲಿನಲ್ಲಿ ದೊರಕುವ ಸುಖಕ್ಕೆ ಸಮನಾದ ಸುಖ ಬೇರೊಂದಿಲ್ಲ. ಅದೇ ರೀತಿ ಜನ್ಮಭೂಮಿಯ ಸಂಬಂಧವು ಸಹ ಬಿಡಿಸಲಾಗದಂತಹದು. ನಮ್ಮ ನಾಡಿನಲ್ಲಿ ನಮಗೆ ದೊರೆಯುವ ಆನಂದ ಮತ್ತೆ ಎಲ್ಲೂ ದೊರೆಯಲು ಸಾಧ್ಯವಿಲ್ಲ. ಆದ್ದರಿಂದ ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲಾದುದು. ರಾಮಾಯಣ ಮಹಾಕಾವ್ಯದಲ್ಲಿ ಶ್ರೀರಾಮನು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ.

## 8. ಉಪ್ಪಿಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ್ಲ

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ವವನ್ನು ಬಹು ಸುಂದರವಾಗಿ ಅರ್ಥೈಸುತ್ತದೆ. ಪ್ರಸ್ತುತ ಗಾದೆ 'ಉಪ್ಪಿಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ್ಲ' ಎಂಬುದು ಒಂದು ಜನಪ್ರಿಯ ಗಾದೆಯಾಗಿದೆ. ಉಪ್ಪಿಲ್ಲದಿದ್ದರೆ ಯಾವ ಊಟವೂ ರುಚಿಸುವುದಿಲ್ಲ. ಆಡುಗೆಯು ರುಚಿಯಾಗಬೇಕಾದರೆ ಉಪ್ಪು ಪ್ರಧಾನ. ಅದೇ ರೀತಿ ಮಕ್ಕಳ ಬಾಳು ಆನಂದಮಯವಾಗಬೇಕಾದರೆ ತಾಯಿಯೇ ಪ್ರಧಾನ. ಜೀವನದಲ್ಲಿ ಪರಿಸ್ಥಿತಿ ಚೆನ್ನಾಗಿರುವವರೆಗೆ ಎಲ್ಲ ಬಂಧು ಬಳಗದವರು ಪರಸ್ಪರ ಪ್ರೀತಿ, ಪ್ರೇಮದಿಂದ ಇರುತ್ತಾರೆ. ಪರಿಸ್ಥಿತಿ ವಿಷಮವಾದಂತೆಲ್ಲ ಎಲ್ಲರೂ ದೂರ ಸರಿಯುತ್ತಾರೆ. ಆದರೆ ತಾಯಿ ಮಾತ್ರ ಎಂಥ ಪರಿಸ್ಥಿತಿಯನ್ನೂ ನೋಡದೇ ಮಕ್ಕಳನ್ನು ಆರೈಕೆ ಮಾಡುತ್ತಾಳೆ. ಎಂತಹ ಕಷ್ಟ ಬಂದರೂ ಅದನ್ನು ಸಹಿಸಿ ಮಕ್ಕಳನ್ನು ಪೋಷಿಸುತ್ತಾಳೆ. ಆದುದರಿಂದ ಉಪ್ಪಿಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ್ಲ ಎಂದು ಜನಪದರು ಅಭಿಪ್ರಾಯಪಡುತ್ತಾರೆ.

## 9. ಚಿಂತೆಯೇ ಮುಪ್ಪು; ಸಂತೋಷವೇ ಯೌವನ

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ವವನ್ನು ಬಹು ಸುಂದರವಾಗಿ ಅರ್ಥೈಸುತ್ತದೆ. ಪ್ರಸ್ತುತ ಗಾದೆ 'ಚಿಂತೆಯೇ ಮುಪ್ಪು; ಸಂತೋಷವೇ ಯೌವನ' ಎಂಬುದು ಕನ್ನಡದ ಪ್ರಸಿದ್ಧ ಗಾದೆಗಳಲ್ಲಿ ಒಂದಾಗಿದೆ. ಚಿತೆಗೂ ಚಿಂತೆಗೂ ನಡುವೆ ಬಿಂದು ಮಾತ್ರ ವ್ಯತ್ಯಾಸ. ಚಿತೆ ಸತ್ತವರನ್ನು ಸುಟ್ಟರೆ ಚಿಂತೆ ಬದುಕಿರುವವರನ್ನು ಸದಾ ಸುಡುತ್ತಿರುತ್ತದೆ ಚಿಂತೆಯಿಂದ ಸಂತೋಷ ಮಾಯವಾಗಿ, ಮಾನಸಿಕ

ನೆಮ್ಮದಿ ಹಾಳಾಗಿ, ದೇಹ ಕುಗ್ಗಿ ಹೋಗಿ ಬಹುಬೇಗ ಮುಪ್ಪು ಆವರಿಸುತ್ತದೆ. ಸಂತೋಷದ ಸ್ಥಿತಿಯು ನಮ್ಮನ್ನು ಮಾತ್ರವಲ್ಲದೆ ಇಡೀ ಪರಿಸರವನ್ನೇ ಸಂತೋಷದಾಯಕವನ್ನಾಗಿ ಮಾಡುತ್ತದೆ. ಸಂತೋಷದಿಂದ ದೇಹ, ಮನಸ್ಸುಗಳು ಹಗುರವಾಗಿ ಉತ್ಸಾಹವುಂಟಾಗುತ್ತದೆ. ಸಂತೋಷದಿಂದ ದೇಹದ ಆರೋಗ್ಯ ಹೆಚ್ಚಿ ಸದಾ ಯೌವನ ತುಂಬಿ ತುಳುಕುತ್ತದೆ. ಆದ್ದರಿಂದ ಸದಾ ಚಿಂತೆಯನ್ನು ಮಾಡುತ್ತ ನಿರುತ್ಸಾಹದಿಂದ ಮುದುಕುರಂತೆ ಬಾಳುವುದರ ಬದಲು ಸದಾ ಸಂತೋಷದಿಂದ ಇದ್ದು ಉತ್ಸಾಹದಿಂದ ಯುವಕರಂತೆ ಬಾಳಬೇಕು ಎಂಬುದನ್ನು ಈ ಗಾದೆ ತಿಳಿಸುತ್ತದೆ.

### 10. ಕಟ್ಟುವುದು ಕಠಿಣ; ಕೆಡಿಸುವುದು ಸುಲಭ

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ವವನ್ನು ಬಹು ಸುಂದರವಾಗಿ ಅರ್ಥೈಸುತ್ತದೆ. ಪ್ರಸ್ತುತ ಗಾದೆ **'ಕಟ್ಟುವುದು ಕಠಿಣ, ಕೆಡಿಸುವುದು ಸುಲಭ'** ಎಂಬುದು ಕನ್ನಡದ ಪ್ರಸಿದ್ಧ ಗಾದೆಗಳಲ್ಲಿ ಒಂದಾಗಿದೆ. **'ಕುಂಬಾರನಿಗೆ ವರ್ಷ; ದೊಣ್ಣೆಗೆ ನಿಮಿಷ'** ಎಂಬ ಗಾದೆಯೂ ಇದೇ ಅರ್ಥವನ್ನು ಹೊಂದಿದೆ. ಒಂದು ಮನೆಯನ್ನು ಕಟ್ಟುವುದು ಎಷ್ಟು ಕಠಿಣವಾದ ಕಾರ್ಯ. ಆದರೆ ಒಂದು ಮನೆಯನ್ನು ಸುಲಭವಾಗಿ ಕೆಡಹಬಹುದು. ಹಾಗೆಯೇ ಮನುಷ್ಯ ತನ್ನ ಉತ್ತಮವಾದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಜೀವಮಾನವೆಲ್ಲ ಕಷ್ಟಪಟ್ಟರೂ ಸಾಲದು. ಆದರೆ ಹಾಗೆ ರೂಪಿಸಿಕೊಂಡ ವ್ಯಕ್ತಿತ್ವವನ್ನು ಒಂದು ನಿಮಿಷದಲ್ಲಿ ಹಾಳು ಮಾಡಿಕೊಳ್ಳಬಹುದು. ಆದ್ದರಿಂದ ಜೀವನದಲ್ಲಿ ಕಷ್ಟಪಟ್ಟು ರೂಪಿಸಿಕೊಂಡ ವ್ಯಕ್ತಿತ್ವವನ್ನು ಎಚ್ಚರಿಕೆಯಿಂದ ಕಾಪಾಡಿಕೊಂಡು ನಾಶಮಾಡಿಕೊಳ್ಳದೆ ಉತ್ತಮ ವ್ಯಕ್ತಿಗಳಾಗಿ ಬದುಕಬೇಕು ಎಂದು ಈ ಗಾದೆಯು ತಿಳಿಸುತ್ತದೆ.

## ಅನುಬಂಧ–4

# ನಿರಂತರ ಮತ್ತು ವ್ಯಾಪಕ ಮೌಲ್ಯ ಮಾಪನ

ಕಲಿಕೆ ಹಾಗೂ ಕಲಿಸುವಿಕೆಗೆ ಸಂಬಂಧಿತ ಅನೇಕ ವಿಷಯಗಳು ಶಿಕ್ಷಕ ಕೇಂದ್ರಿತ ಶಿಕ್ಷಣದಿಂದ ಶಿಶು ಕೇಂದ್ರಿತ ಶಿಕ್ಷಣದತ್ತ ಸಾಗಿದ್ದರೂ ಮೌಲ್ಯಮಾಪನ ಪ್ರಕ್ರಿಯೆ ಮಾತ್ರ ಇನ್ನೂ ಹಳೆಯ ಪದ್ಧತಿಯಾಗಿ ಉಳಿದು ಅದು ತರಗತಿ ಪ್ರಕ್ರಿಯೆಯೊಂದಿಗೆ ಸಮ್ಮಿಳಿತವಾಗಿಲ್ಲ. ಶಾಲಾ ದೈನಂದಿನ ಚಟುವಟಿಕೆಯಲ್ಲಿ ಕ್ರಿಯಾಶೀಲವಾಗಿ ನಮ್ಮನ್ನು ನಿರಂತರವಾಗಿ ತೊಡಗಿಸಿಕೊಂಡಿದ್ದರೂ, ಮೌಲ್ಯಮಾಪನ ವಿಧಿವಿಧಾನಗಳೂ, ಸಮರ್ಥ ಸಾಧನಾ ಸಲಕರಣೆಗಳೂ ಮತ್ತು ಅನುಸರಿಸಬೇಕಾದ ತಂತ್ರಗಳ ಬಗ್ಗೆ ಮತ್ತಷ್ಟು ಅರಿವು ಮೂಡಿಸಿಕೊಳ್ಳುವ ಅಗತ್ಯವಿದೆ. ಎಲ್ಲಾ ಸನ್ನಿವೇಶದಲ್ಲಿ ಅದರಲ್ಲಿಯೂ ವಿದ್ಯಾರ್ಥಿ ಸಮೂಹದಲ್ಲಿ ವಿಭಿನ್ನ ಆಸಕ್ತಿ, ಅಭಿರುಚಿ, ಮನೋಧರ್ಮಗಳು ವ್ಯಕ್ತವಾಗುವುದರಿಂದ ಪ್ರತಿ ಮಗು ವಿಶಿಷ್ಟ ಎನಿಸಿಕೊಳ್ಳುತ್ತದೆ. ಎಲ್ಲರನ್ನೂ ಒಂದೇ ಅಳತೆಗೋಲಿನಿಂದ ಅಳೆದು ಪ್ರಗತಿ ಇಂತಿಷ್ಟೇ ಎಂದು ನಿರ್ಧರಿಸಲು ಸಾಧ್ಯವಿಲ್ಲ. ಹಾಗಾದರೆ;

* ನಮ್ಮ ವಿದ್ಯಾರ್ಥಿಗಳ ವಿಭಿನ್ನ ಆಸಕ್ತಿ ಮತ್ತು ಕಲಿಕೆಯ ಪ್ರವೃತ್ತಿಗಳನ್ನು ಮೌಲ್ಯಮಾಪನಕ್ಕೆ ಒಳಪಡಿಸುವುದಾದರೂ ಹೇಗೆ?

* ನಾವು ಕಂಡುಕೊಂಡಿರುವ ಸಾಂಪ್ರದಾಯಿಕ ಹಾಗೂ ತರಗತಿಯ ಪ್ರಯೋಗಗಳಿಗೆ ಸಾಕಷ್ಟು ದೂರವಾಗಿರುವ ಪರೀಕ್ಷೆಗಳನ್ನಷ್ಟೇ ಮೌಲ್ಯಮಾಪನದಲ್ಲಿ ಪರಿಗಣಿಸಬೇಕೇ?

* ಆ ಪರೀಕ್ಷೆಗಳನ್ನೇ ವಿಭಿನ್ನವಾಗಿ ನೋಡುವುದಾದರೂ ಹೇಗೆ?

* ಅಗತ್ಯವಿರುವ ತಂತ್ರ ಮತ್ತು ಸಾಧನ–ಸಲಕರಣೆಗಳಾವುವು?

* ಈ ತಂತ್ರ ಮತ್ತು ಸಾಧನಗಳನ್ನು ಪಠ್ಯ, ಸಹಪಠ್ಯ ಮತ್ತು ಮಗುವಿನ ಸಮಗ್ರ ವರ್ತನೆಗಳನ್ನು ಮೌಲ್ಯೀಕರಿಸಲು ಬಳಸುವುದು ಹೇಗೆ? ಇಂತಹ ಜಿಜ್ಞಾಸೆಗಳು ನಮ್ಮೆಲ್ಲರನ್ನೂ ಇಂದಿಗೂ ಕಾಡುತ್ತಿರುವುದು ಸಹಜ. ಕಲಿಕೆಯ ಸನ್ನಿವೇಶದಲ್ಲಿ ಕಲಿಕಾರ್ಥಿಯನ್ನು ನಿರಂತರವಾಗಿ ಮೌಲ್ಯಮಾಪನಕ್ಕೆ ಒಳಪಡಿಸುವ ಮೂಲಕ ಕಲಿಕಾರ್ಥಿಗಳು ಸಮಗ್ರ ಬೆಳವಣಿಗೆಯನ್ನು ಪ್ರೇರೇಪಿಸಿ, ಕ್ರಿಯಾಶೀಲಗೊಳಿಸಿ, ಅಪೇಕ್ಷಿತ ವರ್ತನೆಯತ್ತ ವಿಕಸಿತಗೊಳಿಸುವಂತೆ ಮಾಡಲೇಬೇಕಾದ ಸಂಪೂರ್ಣ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ, ಅಲ್ಲವೆ?

ಮೌಲ್ಯಮಾಪನ ಪ್ರಕ್ರಿಯೆಗೆ ಸಂಬಂಧಿಸಿದಂತೆ ನಾವು ಈಗಾಗಲೇ ಸಾಕಷ್ಟು ಅಧ್ಯಯನವನ್ನು ಮಾಡಿದ್ದೇವೆ. (ತರಗತಿಯಲ್ಲಿ ಈ ಬಗ್ಗೆ ಕಾರ್ಯ ಚಟುವಟಿಕೆಗಳು ಚಲನಶೀಲವಾಗಿವೆ.) ಇಲಾಖೆಯಿಂದ ರಚಿಸಲ್ಪಟ್ಟಿರುವ ಸಾಹಿತ್ಯಗಳು ನಮ್ಮೊಂದಿಗಿವೆ. ಅವುಗಳನ್ನು ಒಮ್ಮೆ ಅವಲೋಕನಕ್ಕೊಳಪಡಿಸಿದರೆ ಸಾಕಷ್ಟು ಮಾಹಿತಿಗಳನ್ನು ನಾವು ಗ್ರಹಿಸಲು ಸಾಧ್ಯ. ಆದರೂ ಈ ಸಾಹಿತ್ಯದ ಮೂಲ ಉದ್ದೇಶ. ಈಗಾಗಲೇ ನಾವು ಮಾಡುತ್ತಿರುವ ದೈನಂದಿನ ಮೌಲ್ಯಮಾಪನ ಚಟುವಟಿಕೆಗಳಿಗೆ ನಿರ್ದಿಷ್ಟತೆಯನ್ನು ಹಾಗೂ ನಿಖರತೆಗಳನ್ನು ಕಂಡುಕೊಳ್ಳುವುದೇ ಆಗಿದೆ.

1986ರ ರಾಷ್ಟ್ರೀಯ ಶಿಕ್ಷಣ ನೀತಿಯೂ ಶಾಲಾ ಮೌಲ್ಯಮಾಪನವನ್ನು ಬಲಗೊಳಿಸುವ ನಿಟ್ಟಿನಲ್ಲಿ ನಿರಂತರ ಮತ್ತು ವ್ಯಾಪಕ ಎಂಬ ಪದವನ್ನು ಗುರುತಿಸಿರುವುದು ವಿಶೇಷ. ಇತ್ತೀಚಿನ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು–2005 ಮತ್ತು ಆರ್.ಟಿ.ಇ.–2005 ಮತ್ತು ಆರ್.ಟಿ.ಇ–2009 ಸೆಕ್ಷನ್ 29 (ಎಚ್) ಮತ್ತು ಸೆಕ್ಷನ್ 30 ಸಹ ಇದಕ್ಕೆ ವಿಶೇಷ ಪ್ರಾಮುಖ್ಯತೆಯನ್ನು ನೀಡಿ ಬೋಧನಾ ಪ್ರಕ್ರಿಯೆಯನ್ನು ಎಲ್ಲಾ ರೀತಿಯಿಂದಲೂ ಬಲವರ್ಧನೆಗೊಳಿಸಬೇಕು ಎಂಬುದಾಗಿ ಅಭಿಪ್ರಾಯಪಡುತ್ತದೆ.

## ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಅರ್ಥ :

ವಿದ್ಯಾರ್ಥಿಯ ಪಠ್ಯ ಹಾಗೂ ಸಹಪಠ್ಯ ಚಟುವಟಿಕೆಗಳಲ್ಲಿನ ಸಾಧನೆ, ಶಾಲಾ ಸನ್ನಿವೇಶದಲ್ಲಿ ವಿವಿಧ ಪಾತ್ರ ನಿರ್ವಹಣೆ, ಪಾಲ್ಗೊಳ್ಳುವಿಕೆ ಮತ್ತು ಪ್ರಗತಿಯನ್ನು ವಿವಿಧ ತಂತ್ರಗಳ ಮೂಲಕ ಸಮಗ್ರವಾಗಿ ದಾಖಲಿಸಿಕೊಂಡು, ವಿಶ್ಲೇಷಿಸಿ ಬಂದ ಒಳನೋಟಗಳಿಂದ ಮಗುವಿನ ಸರ್ವಾಂಗೀಣ ಅಭಿವೃದ್ಧಿ ಅನುಕೂಲಿಸುವ ಪ್ರಕ್ರಿಯೆಗೆ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನವೆನ್ನಬಹುದು.

ಮೇಲ್ಕಂಡ ವಾಕ್ಯವನ್ನು ಗಮನಿಸಿದರೆ ನಮಗೆ ನಿರಂತರ ಮತ್ತು ವ್ಯಾಪಕ ಎಂಬ ಎರಡು ಪದಗಳು ಗಮನ ಸೆಳೆಯುತ್ತವೆ.

**ನಿರಂತರ ಮೌಲ್ಯಮಾಪನದ ಅರ್ಥ :**


ನಿರಂತರ ಮೌಲ್ಯಮಾಪನವೆಂದರೆ ವಿದ್ಯಾರ್ಥಿಗಳ ಶಾಲೆಯಲ್ಲಿನ ಕಲಿಕಾ ಸಂದರ್ಭಗಳು ಹಾಗೂ ತೊಡಗಿಸಿಕೊಳ್ಳುವ ವಿವಿಧ ಚಟುವಟಿಕೆಗಳಲ್ಲಿನ ಅವರ ಸಹಜ ವರ್ತನೆಗಳನ್ನು ನಿರಂತರವಾಗಿ ಗಮನಿಸಿ ಮಗುವಿನ ಬೆಳವಣಿಗೆ ಮತ್ತು ಅಭಿವೃದ್ಧಿ ಪ್ರಕ್ರಿಯೆಗಳನ್ನು ಪೋಷಿಸುವುದು.

**ವ್ಯಾಪಕ ಮೌಲ್ಯಮಾಪನದ ಅರ್ಥ :**

ವ್ಯಾಪಕ ಮೌಲ್ಯಮಾಪನವೆಂದರೆ ನಿರ್ದಿಷ್ಟಪಡಿಸಿದ ಪಠ್ಯಕ್ಕೆ ಸೀಮಿತವಾಗದೆ, ಸಹಪಠ್ಯಗಳನ್ನೊಳಗೊಂಡಂತೆ ಮಗುವಿನ ಎಲ್ಲಾ ವರ್ತನೆಗಳನ್ನೂ ಅಭಿವೃದ್ಧಿಗೊಳಿಸುವುದಾಗಿದೆ.

ನಿರಂತರ ಮೌಲ್ಯಮಾಪನ ಎಂಬ ಪದ ಕಾಲಘಟಕ್ಕೆ ಸಂಬಂಧಿಸಿದೆ ಹಾಗೂ ವ್ಯಾಪಕ ಎನ್ನುವ ಪದ ಮೌಲ್ಯಮಾಪನ ಕೈಗೊಳ್ಳಬಹುದಾದ ವಿವಿಧ ಸಂದರ್ಭ ಮತ್ತು ಆಯಾಮಗಳನ್ನು ಸೂಚಿಸುತ್ತದೆ.

ಈ ಕೆಳಗಿನ ರೇಖಾ ಚಿತ್ರದಿಂದ ಈ ಎರಡು ಅಂಶಗಳು ಮತ್ತು ಅವುಗಳೊಳಗಿನ ಅಂತರ್ ಸಂಬಂಧವನ್ನು ಗಮನಿಸಬಹುದು.





* ನಿರಂತರ ಮೌಲ್ಯಮಾಪನದಿಂದ ಮಗುವಿನ ದೈಹಿಕ, ಬೌದ್ಧಿಕ, ಮಾನಸಿಕ, ಸಾಮಾಜಿಕ ಬೆಳವಣಿಗೆಯನ್ನು ಗಮನಿಸಿ ಪ್ರಗತಿಯ ನಿರಂತರತೆಯಲ್ಲಿ ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತದೆ. ಇದರಿಂದ ಮಗುವಿನ ವ್ಯಕ್ತಿತ್ವ ಯಾವ ರೀತಿಯಲ್ಲಿ ವಿಕಸನಗೊಳ್ಳುತ್ತಿದೆ, ಯಾವ ರೀತಿಯ ಮಧ್ಯವರ್ತನೆಗಳು ಮಗುವಿಗೆ ಉಪಯುಕ್ತವಾಗಬಹುದು ಎಂದು ತಿಳಿಯಲು ಸಾಧ್ಯವಾಗುತ್ತದೆ.
* ವ್ಯಾಪಕ ಮೌಲ್ಯಮಾಪನದಿಂದ ಪಠ್ಯ-ಸಹಪಠ್ಯ ಸಂಯೋಜಿತ ಹಾಗೂ ಮಗುವಿನ ಸಹಜ ವರ್ತನೆಯ ಕ್ಷೇತ್ರಗಳನ್ನು ಗಮನಿಸಿ ಅವುಗಳನ್ನು ಅಭಿವೃದ್ಧಿಪಡಿಸಬಹುದು. ಒಟ್ಟಾರೆಯಾಗಿ ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನದಿಂದ ಮಗುವಿನ ಸರ್ವಾಂಗೀಣ ಬೆಳವಣಿಗೆಯನ್ನು ನಿರಂತರವಾಗಿ ಅನುಕೂಲಿಸಲು ಸಾಧ್ಯವಾಗುತ್ತದೆ.

**ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಪ್ರಾಮುಖ್ಯತೆ :**

* ವಿದ್ಯಾರ್ಥಿಗಳ ಕಲಿಕೆಯ ಮಟ್ಟವನ್ನು ಅರ್ಥೈಸಿಕೊಳ್ಳಲು ಸಹಕರಿಸುತ್ತದೆ.
* ಮಕ್ಕಳ ಪ್ರಗತಿಯನ್ನು ಅರ್ಥೈಸಿಕೊಳ್ಳುವ ಸಲುವಾಗಿ ಸಾಧನಾ ಸಲಕರಣೆಗಳನ್ನು ರಚಿಸಿಕೊಳ್ಳಲು ಮತ್ತು ಅದನ್ನು ಪರಿಷ್ಕೃತಗೊಳಿಸಲು ದಾರಿ ತೋರಿಸುತ್ತದೆ.
* ಸಕಾಲದಲ್ಲಿ ಪೋಷಕರಿಗೆ ಪ್ರಗತಿಯನ್ನು ಅರ್ಥೈಸಲು ಅನುವು ಮಾಡಿಕೊಡುತ್ತದೆ.
* ನಾನು ಎಲ್ಲಿದ್ದೇನೆ, ನಾನು ನೀಡಬೇಕಾದ ಕಲಿಕೆಯ ಅನುಭವಗಳಾವುವು, ನಾನು ಅಳವಡಿಸಿಕೊಂಡ ಬೋಧನಾ ಕಲಿಕೆಯ ಪ್ರಕ್ರಿಯೆ ವಯೋಮಾನಕ್ಕೆ ಅನುಗುಣವಾಗಿದೆಯೇ ಎಂಬ ಹಿಮ್ಮಾಹಿತಿಯನ್ನು ಪಡೆದುಕೊಳ್ಳಲು ಶಿಕ್ಷಕರಿಗೆ ಸಹಾಯಕವಾಗುತ್ತದೆ.
* ವಿದ್ಯಾರ್ಥಿಗೆ ತನ್ನ ಕಲಿಕೆಯ ಬಗ್ಗೆ ಆತ್ಮವಿಶ್ವಾಸವನ್ನು ಮೂಡಿಸಲು ಹಾಗೂ ಅಪೇಕ್ಷಿತ ಬೆಳವಣಿಗೆಯ ಕಡೆಗೆ ಮಾರ್ಗದರ್ಶಿಸಲು ನೆರವಾಗುತ್ತದೆ.
* ಯಾವುದೇ ಭಯ, ಆತಂಕಗಳಿಲ್ಲದೆ ಸ್ವಚ್ಛಂದ ಪರಿಸರದಲ್ಲಿ ಮುಕ್ತವಾಗಿ ಕಲಿಕೆಯನ್ನು ಒರೆಹಚ್ಚಲು ಸಾಧ್ಯವಿದೆಯೆಂಬುದನ್ನು ಮನಗಾಣಿಸುತ್ತದೆ.
* ಶಿಕ್ಷಣ ವ್ಯವಸ್ಥೆಯಲ್ಲಿ ಅಳವಡಿಸಿಕೊಳ್ಳಬೇಕಾದ ವಿಧಿವಿಧಾನಗಳನ್ನು ಮತ್ತು ಅಗತ್ಯ ನೀತಿ ನಿರೂಪಣೆಗಳನ್ನು ರಚಿಸಿ ಅಳವಡಿಸಿಕೊಳ್ಳಲು ಅವಕಾಶ ಕಲ್ಪಿಸಿಕೊಡುತ್ತದೆ.
* ಅಪೇಕ್ಷಿತ ಶಾಲಾ ಸನ್ನಿವೇಶವನ್ನು ನಿರ್ಮಾಣ ಮಾಡಿಕೊಳ್ಳುವ ಮೂಲಕ ಶಾಲೆಯ ಸಮಗ್ರ ಅಭಿವೃದ್ಧಿಯತ್ತ ಮುನ್ನಡೆಯಲು ದಾರಿ ತೋರಿಸುತ್ತದೆ.
* ಗುಣಮಟ್ಟದ ಶಿಕ್ಷಣದ ಅಭಿವೃದ್ಧಿಯನ್ನು ಕಾಲಕಾಲಕ್ಕೆ ಖಾತ್ರಿಪಡಿಸಲು ಚಾಲನೆ ನೀಡುತ್ತದೆ.

ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನಕ್ಕೆ ಇರುವ ಆಯಾಮ/ಕಲಿಕಾ ಕ್ಷೇತ್ರಗಳನ್ನು ಈ ಕೆಳಗಿನ ಚಿತ್ರದಿಂದ ಅರ್ಥೈಸಿಕೊಳ್ಳಬಹುದು.



## ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನ ವಿಧಗಳು :

ಪಠ್ಯ ಸಂಯೋಜಿತ ವಿಷಯಗಳ ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನ ಮಾಡುವಾಗ ರೂಪಣಾತ್ಮಕ ಮತ್ತು ಸಂಕಲನಾತ್ಮಕ ಎಂಬ ಎರಡು ಮೌಲ್ಯಮಾಪನ ವಿಧಾನಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ.

## ರೂಪಣಾತ್ಮಕ ಮೌಲ್ಯಮಾಪನ (Formative Assesment) :

ರೂಪಣಾತ್ಮಕ ಮೌಲ್ಯಮಾಪನ ವರ್ಷಪೂರ್ತಿ ಶಿಕ್ಷಕರು ಕೈಗೊಳ್ಳುವ ಔಪಚಾರಿಕ ಮತ್ತು ಅನೌಪಚಾರಿಕ ಮೌಲ್ಯಮಾಪನವಾಗಿದೆ. ಇದು ನೈದಾನಿಕ ಪರೀಕ್ಷೆ ಮತ್ತು ಪರಿಹಾರ ಬೋಧನೆಗಳನ್ನೂ ಒಳಗೊಂಡಿರುತ್ತದೆ. ಮೌಲ್ಯಮಾಪನದಲ್ಲಿ ಕೈಗೊಳ್ಳುವ ಚಟುವಟಿಕೆಗಳೆಂದರೆ ತರಗತಿ ಕಾರ್ಯಗಳು, ರಸಪ್ರಶ್ನೆ, ಗೃಹಪಾಠಗಳು, ಯೋಜನೆ, ನಿಯೋಜಿತ ಕಾರ್ಯಗಳು, ಪರೀಕ್ಷೆಗಳು ಇತ್ಯಾದಿ. ರೂಪಣಾತ್ಮಕ ಮೌಲ್ಯಮಾಪನವು ಮಗುವಿನ ನಿರಂತರ ಬೆಳವಣಿಗೆಯ ದೃಷ್ಟಿಯಿಂದ ಮಹತ್ವಪೂರ್ಣವೆನಿಸಿಕೊಳ್ಳುತ್ತದೆ.

## ಸಂಕಲನಾತ್ಮಕ ಮೌಲ್ಯಮಾಪನ (Summative Assesment) :

ಇದು ವರ್ಷದ ಮೊದಲ ಸೆಮಿಸ್ಟರ್ ಮತ್ತು ಎರಡನೆಯ ಸೆಮಿಸ್ಟರ್ ಅವಧಿಯಲ್ಲಿ ನಡೆಯುತ್ತದೆ. ಇದು ವರ್ಷದ ಅಥವಾ ಒಂದು ನಿರ್ದಿಷ್ಟ ಅವಧಿಯ ಸಮಗ್ರ ಕಲಿಕೆಯನ್ನು ಪರಿಶೀಲಿಸುವುದರೊಂದಿಗೆ ಶಿಕ್ಷಕರಿಗೆ ಮತ್ತು ಪೋಷಕರಿಗೆ ಆ ಅವಧಿಯಲ್ಲಿ ಆದ ಒಟ್ಟು ಕಲಿಕೆಯ ಹಿಮ್ಮಾಹಿತಿಯನ್ನು ನೀಡುತ್ತದೆ. ಇದಕ್ಕೆ ಈ ಕೆಳಗಿನ ತಂತ್ರಗಳನ್ನು ಬಳಸಿಕೊಳ್ಳಬಹುದು.

* ರಾಜ್ಯ ಪಠ್ಯಕ್ರಮ ಆಧರಿಸಿ ಶಾಲೆಯಲ್ಲಿ ಕಲಿಸುತ್ತಿರುವ ಶಿಕ್ಷಕರೇ ಶಾಲಾ ಮಟ್ಟದಲ್ಲಿಯೇ ಪರೀಕ್ಷಾ ಕಾರ್ಯ ಕೈಗೊಳ್ಳುವುದು. ಇದರ ಪೂರ್ವಭಾವಿಯಾಗಿ ಪ್ರಶ್ನೆಕೋಠಿಯನ್ನು ತಯಾರಿಸುವುದು.
* ಸಹಪಠ್ಯ ಸಂಯೋಜಿತ ವಿಷಯಗಳಿಗೆ ಮಾನಕಗಳನ್ನು ನಿರ್ಧರಿಸಿ, ವಿವಿಧ ಸಾಧನಗಳನ್ನು ತಯಾರಿಸಿ ಬಳಸುವುದು. ಉದಾ : ದರ್ಜಾಮಾಪನ, ತನಿಖಾಪಟ್ಟಿ, ಸಾಂದರ್ಭಿಕ ವರ್ತನಾ ದಾಖಲೆ ಪತ್ರ ಇತ್ಯಾದಿ.

## ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ – (ಎನ್.ಸಿ.ಎಫ್–2005)

**ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನವು NCF–2005ರ ಆಶಯ.** ಕಲಿಕೆ ಮತ್ತು ಕಲಿಕೆಯ ಪ್ರಗತಿಯು ಇಡಿಯಾಗಿರಬೇಕು, ಅರ್ಥಾತ್ ಅದು ಸಮಗ್ರವಾಗಿರಬೇಕು ಎಂದು NCF–2005 ಬಯಸುತ್ತದೆ. ಎನ್.ಸಿ.ಎಫ್.ನಲ್ಲಿ ಈ ಅಂಶಗಳನ್ನು ಹೇಳಲಾಗಿದೆ.

1. ಮಗುವಿನ ಕಲಿಕೆಯ ಗುಣಮಟ್ಟ ಮತ್ತು ವೈಶಾಲ್ಯಗಳನ್ನು ಕುರಿತ ಯಾವುದೇ ಪ್ರಗತಿ ವರದಿಯು ಸಾಕಷ್ಟು ವ್ಯಾಪಕವಾಗಿರಬೇಕು. ಅದು ಮಗುವಿನ ಸಾಧನೆಯ, ತೊಡಗಿಸಿ ಕೊಳ್ಳುವಿಕೆಯ ಎಲ್ಲಾ ಆಯಾಮಗಳ ಕುರಿತಂತೆಯೂ ಹಿಮ್ಮಾಹಿತಿ ನೀಡಲು ಶಕ್ತವಾಗಿರಬೇಕು.

2. ಎಲ್ಲಿಯವರೆಗೆ ಪರೀಕ್ಷೆಗಳು ಮತ್ತು ಕಿರುಪರೀಕ್ಷೆಗಳು ಮಕ್ಕಳ ಜ್ಞಾಪಕ ಶಕ್ತಿ ಮತ್ತು ಪಠ್ಯಪುಸ್ತಕದ ಜ್ಞಾನವನ್ನು ಮರುಸೆಳೆಯುವುದನ್ನು ಮಾತ್ರ ಅಳೆಯುತ್ತವೆಯೋ ಅಲ್ಲಿಯವರೆಗೆ ಪಠ್ಯಕ್ರಮವನ್ನು ಕಲಿಕೆಯತ್ತ ನಿರ್ದೇಶಿಸುವ ಪ್ರಯತ್ನಗಳೆಲ್ಲ ವ್ಯರ್ಥವಾಗುತ್ತವೆ.

3. ಕೇವಲ ಕಲಿಕೆಯ ಫಲಿತಾಂಶಗಳನ್ನಷ್ಟೇ ಅಲ್ಲದೇ ಕಲಿಕೆಯ ಅನುಭವಗಳನ್ನು ಮೌಲ್ಯಮಾಪನ ಮಾಡಬೇಕಾಗಿದೆ. ವೈಯಕ್ತಿಕ ಮತ್ತು ಗುಂಪು ಅಭ್ಯಾಸಗಳಲ್ಲಿ ಅವರವರ ಕಲಿಕಾ ಅನುಭವಗಳು ಪ್ರತಿಫಲವಾಗುವಂತೆ ಹಾಗೂ ಮಾಪನಕ್ಕೆ ಅನುವಾಗುವಂತೆ ರಚಿಸಿಕೊಳ್ಳಬೇಕು.

4. ಜ್ಞಾನಾಧಾರಿತ ವಿಷಯ ಕ್ಷೇತ್ರಗಳಲ್ಲಿ ಮಕ್ಕಳು ಏನನ್ನು ಕಲಿತಿದ್ದಾರೆ ಮತ್ತು ಈ ಜ್ಞಾನವನ್ನು ಸಮಸ್ಯೆ ನಿವಾರಿಸಲು ಅನ್ವಯಿಕವಾಗಿ ಹೇಗೆ ಬಳಸುತ್ತಾರೆ ಎಂಬುದನ್ನು ಅಳೆಯುವುದೇ ಪರೀಕ್ಷೆಗಳ ಉದ್ದೇಶವಾಗಬೇಕು.

5. ಸಹಪಠ್ಯ ವಿಷಯಗಳಲ್ಲಿ ಮಕ್ಕಳು ಏನನ್ನು ಕಲಿಯುತ್ತಾರೆ ಮತ್ತು ಇವುಗಳಿಂದ ಅವರು ಪಡೆಯುವ ಲಾಭವೇನು ಎನ್ನುವುದನ್ನು ಗಮನದಲ್ಲಿರಿಸಿಕೊಂಡು ಶಿಕ್ಷಕರು ವಿದ್ಯಾರ್ಥಿಗಳ ಭಾಗವಹಿಸುವಿಕೆ, ಆಸಕ್ತಿ, ಶ್ರದ್ಧೆಯ ಮಟ್ಟ, ವಿವಿಧ ಸಾಮರ್ಥ್ಯಗಳನ್ನು ಮತ್ತು ಕೌಶಲಗಳನ್ನು ಮೌಲ್ಯಮಾಪನಕ್ಕೆ ಒಳಪಡಿಸಬಹುದು.

## ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಹಾಗೂ RTE 2009 :

ತರಗತಿ ಕೋಣೆಗಳು ಅಥವಾ ಶಾಲಾ ಸನ್ನಿವೇಶ ಕೇವಲ ಬೌದ್ಧಿಕ ವಿಷಯ ಕ್ಷೇತ್ರಗಳಿಗೆ ಸೀಮಿತವೆನಿಸಿದೆ ಮಗುವಿನ ಸಮಗ್ರ ಬೆಳವಣಿಗೆಗೆ ಅವಕಾಶವನ್ನು ಕಲ್ಪಿಸುವಂತೆ ರೂಪಿಸಲ್ಪಡಬೇಕು. ಈ ಹಿನ್ನೆಲೆಯಲ್ಲಿ RTE – 2009 ಪಠ್ಯಕ್ಕೆ ಸಂಬಂಧಿಸಿದ ಕೆಲವು ಆಶಯಗಳನ್ನು ಹೀಗೆ ವ್ಯಕ್ತಪಡಿಸುತ್ತದೆ.

* ಸಂವಿಧಾನದಲ್ಲಿ ಪವಿತ್ರ ಸ್ಥಾನ ನೀಡಿರುವ ಮೌಲ್ಯಗಳ ಅನುಸರಣೆ
* ಮಕ್ಕಳ ಸರ್ವಾಂಗೀಣ ಅಭಿವೃದ್ಧಿ
* ಮಕ್ಕಳ ಜ್ಞಾನ, ಸಾಮರ್ಥ್ಯ ಮತ್ತು ಪ್ರತಿಭೆಯ ವರ್ಧನೆ
* ಪೂರ್ಣ ಪ್ರಮಾಣದಲ್ಲಿ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯಗಳ ವಿಕಸನ.
* ಶಿಶುಸ್ನೇಹಿ ಮತ್ತು ಶಿಶು ಕೇಂದ್ರಿತ ವಾತಾವರಣದಲ್ಲಿ ಚಟುವಟಿಕೆಗಳು, ಅನ್ವೇಷಣೆ ಮತ್ತು ಸಾಹಸ ಶೋಧನೆಯ ಮೂಲಕ ಮಕ್ಕಳ ಕಲಿಕೆ.
* ಮಗುವಿನ ಭಯ, ಆಘಾತ ಹಾಗೂ ಆತಂಕ ಹೋಗಲಾಡಿಸುವುದು ಮತ್ತು ಮಗು ಮುಕ್ತವಾಗಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ನೆರವು.

## ಮೌಲ್ಯಮಾಪನದ ಕುರಿತಂತೆ RTE 2009 ಏನು ಹೇಳುತ್ತದೆ?

* ಸೆಕ್ಷನ್ 29(ಎಚ್)ರಂತೆ ಜ್ಞಾನದ ಗ್ರಹಿಕೆ ಮತ್ತು ಅದನ್ನು ಅನ್ವಯಿಸುವ ಸಾಮರ್ಥ್ಯಗಳಲ್ಲಿ ಮಕ್ಕಳ ಪ್ರಗತಿಯ ಸಮಗ್ರ ಹಾಗೂ ನಿರಂತರ ಮೌಲ್ಯ ನಿರ್ಧರಣೆ ಮಾಡತಕ್ಕದ್ದು.

* ಪ್ರಾಥಮಿಕ ಶಿಕ್ಷಣವು ಪೂರ್ಣಗೊಳ್ಳುವವರೆಗೆ ಯಾವ ಮಗುವನ್ನೂ ಮಂಡಳಿಗಳ ಪರೀಕ್ಷೆಯಲ್ಲಿ ಉತ್ತೀರ್ಣವಾಗಬೇಕೆಂದು ಒತ್ತಾಯಪಡಿಸತಕ್ಕದ್ದಲ್ಲ.
* ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಿದ ಪ್ರತಿಯೊಂದು ಮಗುವಿಗೆ ನಿಯಮಿಸಬಹುದಾದಂತಹ ನಮೂನೆಯಲ್ಲಿ ಮತ್ತು ವಿಧಾನದಲ್ಲಿ ಪ್ರಮಾಣ ಪತ್ರವನ್ನು ನೀಡತಕ್ಕದ್ದು.

**ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಉದ್ದೇಶಗಳು :**

* ವಿದ್ಯಾರ್ಥಿಯ ಸಾಧನೆಯನ್ನು ಸಮಗ್ರವಾಗಿ ಅವಲೋಕನಕ್ಕೆ ಒಳಪಡಿಸುವುದು.
* ಪ್ರತಿ ಸಾಮರ್ಥ್ಯದಲ್ಲಿಯೂ ವಿದ್ಯಾರ್ಥಿಯು ಸಾಧನೆಯನ್ನು ದಾಖಲಿಸಿಕೊಳ್ಳುವುದು.
* ನಿರೀಕ್ಷಿತ ಮತ್ತು ಗಳಿಸಿದ ಕಲಿಕೆಯನ್ನು ವಿಶ್ಲೇಷಿಸುವುದು.
* ಅಂಕಗಳ ಬದಲಿಗೆ ಶ್ರೇಣಿ ನೀಡುವ ಮೂಲಕ ಪ್ರಗತಿಯನ್ನು ವ್ಯಕ್ತಪಡಿಸುವುದು.
* ಕಲಿಕೆಯನ್ನು ಖಾತ್ರಿಪಡಿಸಿಕೊಳ್ಳಲು ಸಮಯ, ಸಂದರ್ಭಕ್ಕೆ ತಕ್ಕಂತೆ ಬೇಕಾಗುವ ಹಿಮ್ಮಾಹಿತಿ ಪಡೆದುಕೊಳ್ಳುವುದು.
* ವಿವಿಧ ಲಿಖಿತ ಪರೀಕ್ಷೆಗಳ ಒತ್ತಡವನ್ನು ಕಡಿಮೆ ಮಾಡುವುದು.
* ಸಾಧನ–ಸಲಕರಣೆಗಳನ್ನು ಉಪಯೋಗಿಸಿ ಲಿಖಿತ, ಮೌಖಿಕ, ವೀಕ್ಷಣೆ, ಸಂದರ್ಶನ, ದಜಾ ಮಾಪನ, ಸಾಂಧರ್ಭಿಕ ದಾಖಲೆ, ಇತ್ಯಾದಿಗಳನ್ನು ಬಳಸಿ ವೈಯಕ್ತಿಕ ಹಾಗೂ ಗುಂಪುಗಳಲ್ಲಿ ಕಲಿಕೆಯ ವಿವಿಧ ಆಯಾಮಗಳಲ್ಲಿ ಒರೆ ಹಚ್ಚುವುದು.
* ಪರೀಕ್ಷೆಯೆಂಬ ಭಯ ಮತ್ತು ಆತಂಕವನ್ನು ಹೋಗಲಾಡಿಸುವುದು.
* ಸಂತಸದಾಯಕ ಮತ್ತು ಶಿಶುಸ್ನೇಹಿ ವಿಧಾನಗಳನ್ನು ಅನುಸರಿಸಿ ಮಕ್ಕಳ ಕಲಿಕೆಯನ್ನು ಅರ್ಥಮಾಡಿಕೊಳ್ಳುವುದು.
* ಸಹಪಠ್ಯ ಕ್ಷೇತ್ರಗಳಾದ ಸಾ.ಉ.ಉ.ಕಾ., ಕಲೆ, ದೈಹಿಕ ಶಿಕ್ಷಣ ಮುಂತಾದವುಗಳಲ್ಲಿ ಮಕ್ಕಳ ತೊಡಗಿಸಿಕೊಳ್ಳುವಿಕೆಯನ್ನು ದಾಖಲಿಸಿ ವಿಶ್ಲೇಷಿಸುವುದು.
* ವಿವಿಧ ಕ್ಷೇತ್ರಗಳಲ್ಲಿನ ವಿದ್ಯಾರ್ಥಿಯ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಸಮಗ್ರ ವೈಯಕ್ತಿಕ ದಾಖಲೆಗಳನ್ನು ಇಡುವುದು. (Individual Profile)
* ಮಗುವಿನ ಹಾಜರಾತಿ, ವೈಯಕ್ತಿಕ ಶುಚಿತ್ವ, ಕ್ರಮಬದ್ಧತೆ, ಜವಾಬ್ದಾರಿ, ಪ್ರಜಾಸತ್ತಾತ್ಮಕ ಮನೋಧೋರಣೆ, ಪರಿಸರ ಸಂರಕ್ಷಣೆ ಕಾಳಜಿ, ಕರ್ತವ್ಯ ಪ್ರಜ್ಞೆ, ಸ್ವಯಂನಿಯಂತ್ರಣ, ಭಾಗವಹಿಸುವಿಕೆ, ಸಹಕಾರ ಇತ್ಯಾದಿಗಳನ್ನು ಮೌಲ್ಯಮಾಪನದ ಪರಿಧಿಯೊಳಕ್ಕೆ ತರುವುದು.
* ಮಕ್ಕಳ ಪ್ರಗತಿಯ ಬಗ್ಗೆ ಪೋಷಕರು ಮತ್ತು ಸಮುದಾಯದ ಸದಸ್ಯರಲ್ಲಿ ಆತ್ಮವಿಶ್ವಾಸ ಮೂಡಿಸುವಂತೆ ಹಿಮ್ಮಾಹಿತಿ ನೀಡುವುದು.
* ಮೌಲ್ಯಮಾಪನ ಪ್ರಕ್ರಿಯೆಯಿಂದ ಹೊರಬರುವ ಫಲಿತಗಳು ಧನಾತ್ಮಕ ಬದಲಾವಣೆ ಹಾಗೂ ಬೆಳವಣಿಗೆಗೆ ಪೂರಕವಾಗಿರುವಂತೆ ನೋಡಿಕೊಳ್ಳುವುದು.
* ಸ್ವಮೌಲ್ಯಮಾಪನ ಮಾಡಿಕೊಳ್ಳುವ ಸಾಮರ್ಥ್ಯವನ್ನು ಅಭಿವೃದ್ಧಿಗೊಳಿಸುವುದು.

# ಶಾಲೆಗಳಲ್ಲಿ ಶೈಕ್ಷಣಿಕ ಮೌಲ್ಯಮಾಪನ

**ಉದ್ದೇಶಗಳು :**


1. ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನ ಪ್ರಕ್ರಿಯೆಗಳನ್ನು ಅರ್ಥೈಸಿಕೊಳ್ಳುವಿರಿ.
2. ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನ ಅನುಷ್ಠಾನದಲ್ಲಿ ಬರುವ ಸವಾಲುಗಳನ್ನು ಮತ್ತು ಪರಿಹಾರ ಕ್ರಮಗಳನ್ನು ತಿಳಿಯುವಿರಿ.

ಕಲಿಕಾ ಪ್ರಕ್ರಿಯೆಯು ಪ್ರಾಥಮಿಕ ಶಾಲೆಗಳಲ್ಲಿ ಏಕರೂಪತೆಯನ್ನು ಪಡೆದುಕೊಂಡಿರುವುದು ನಮಗೆಲ್ಲರಿಗೂ ತಿಳಿದ ಸಂಗತಿಯಾಗಿದೆ. ಆದರೆ ಇಲ್ಲಿ ನಡೆಯುತ್ತಿರುವ ಮೌಲ್ಯಮಾಪನದ ಸ್ವರೂಪಗಳು ಕೆಲವೊಮ್ಮೆ ಭಿನ್ನತೆಯಿಂದಲೂ ಕೂಡಿದೆ.

ಒಂದರಿಂದ ಮೂರನೆಯ ತರಗತಿಯವರೆಗೆ ನಲಿ-ಕಲಿ ಪದ್ಧತಿ ಇದ್ದು ಇಲ್ಲಿನ ಕಲಿಕಾ ಪ್ರಕ್ರಿಯೆಯಲ್ಲಿ ಮಗು ನೇರವಾಗಿ, ಪರೋಕ್ಷವಾಗಿ ನಿರಂತರ ಮೌಲ್ಯಮಾಪನಕ್ಕೆ ಒಳಪಡುತ್ತಿದೆ. ನಾಲ್ಕನೆಯ ತರಗತಿಯಲ್ಲಿ ಚಟುವಟಿಕೆ ಆಧಾರಿತ ವಿಧಾನ ಇದ್ದು ಇಲ್ಲಿನ ಕಲಿಕಾ ಪ್ರಕ್ರಿಯೆಯ ಹಂತಗಳೂ ಕೂಡ ವಿದ್ಯಾರ್ಥಿಯನ್ನು ನಿರಂತರ ಮೌಲ್ಯಮಾಪನಕ್ಕೆ ಒಳಪಡಿಸುತ್ತವೆ. ಐದರಿಂದ ಎಂಟನೆಯ ತರಗತಿಯವರೆಗೆ ಚಟುವಟಿಕೆಯಾಧಾರಿತ ಕಲಿಕಾ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿದ್ದು ಈ ಪ್ರಕ್ರಿಯೆಯ ಹಂತಗಳು ಕೂಡ ನಿರಂತರ ಮೌಲ್ಯಮಾಪನದಿಂದ ಹೊರತಾಗಿಲ್ಲ. ಆದರೆ ಈ ಎಲ್ಲಾ ಹಂತಗಳಲ್ಲಿ ಮಗುವಿನ ಪ್ರಗತಿಯನ್ನು ದಾಖಲಿಸಿರುವ ಅಂಶಗಳು ಕೇವಲ ಜ್ಞಾನ ವಲಯಕ್ಕೆ ಸೀಮಿತವಾಗಿರುತ್ತದೆ.

ಸಹಪಠ್ಯ ಕಲಿಕೆಯ ಮೌಲ್ಯಮಾಪನ ಮಾಡಿ ದಾಖಲಿಸಿಕೊಳ್ಳಬೇಕು ಎಂದು ಹೇಳಲಾಗಿದ್ದರೂ ಇವುಗಳಿಗೆ ಜ್ಞಾನ ವಲಯದ ವಿಷಯಗಳಿಗೆ ಸಿಗುವ ಮನ್ನಣೆ ಸಿಗುತ್ತಿಲ್ಲ ಎನ್ನುವುದೂ ಸತ್ಯವೇ ಆಗಿದೆ. ಅಂದರೆ ಎಲ್ಲವೂ ನಿರಂತರ ಮೌಲ್ಯಮಾಪನಕ್ಕೆ ಒಳಪಟ್ಟಂತೆ ಮೇಲ್ನೋಟಕ್ಕೆ ಕಾಣಿಸುತ್ತಿದ್ದರೂ, ವಿದ್ಯಾರ್ಥಿಯ ಕಲಿಕಾ ಮಟ್ಟವನ್ನು ಪರೀಕ್ಷಾಧಾರಿತವಾಗಿ, ವರ್ಷಾಂತ್ಯದಲ್ಲಿ/ಸಂಕಲನಾತ್ಮಕವಾಗಿ ಮಾಡಿದ ಮೌಲ್ಯಮಾಪನದ ಫಲಿತಾಂಶದಿಂದ ಮಾತ್ರ ದೃಢೀಕರಿಸುತ್ತಿದ್ದೇವೆ. ಪ್ರತಿ ಮಗುವಿನ ಕಲಿಕಾ ವೇಗವು ಅದರ ಬೌದ್ಧಿಕ, ಸಾಮಾಜಿಕ ಹಿನ್ನೆಲೆಯನ್ನು ಆಧರಿಸಿರುವುದರಿಂದ ಪ್ರತಿ ಮಗುವೂ ಭಿನ್ನ ಚೈತನ್ಯವನ್ನು ಹೊಂದಿರುತ್ತದೆ ಎಂಬುದನ್ನು ಮನಗಾಣಬೇಕಾದ ಅಗತ್ಯವಿದೆ.

ನಿರಂತರ ಮೌಲ್ಯಮಾಪನವು ಕಲಿಕಾ ಪ್ರಕ್ರಿಯೆಯಲ್ಲಿ ಅಡಕವಾಗಿರುವುದನ್ನು ನೀವೆಲ್ಲರೂ ಗಮನಿಸಿರಬಹುದು. ಆದರೆ ಅಂತಹ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನವನ್ನು ಮೂರ್ತರೂಪದಲ್ಲಿ ವ್ಯಕ್ತಪಡಿಸಲು ಕೂಡಾ ಸಾಧ್ಯವಾಗಬೇಕು ಎನ್ನುವುದು ಕಾಳಜಿ.




## ಭಾಷಾ ವಿಷಯಗಳಲ್ಲಿ ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನ

ಭಾಷೆ ಕಲಿ–ವಿಷಯ ತಿಳಿ ಎಂಬ ಮಾತಿದೆ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005 ಭಾಷೆಯ ಕೌಶಲಗಳ ಕಲಿಕೆಯಿಂದ ಇತರ ವಿಷಯಗಳ ಕಲಿಕೆಯಾಗಬೇಕು ಎಂದು ಅಭಿಪ್ರಾಯಪಡುತ್ತದೆ. ಭಾಷೆಯಲ್ಲಿನ ಒಟ್ಟಾಗಿರುವ ಕೌಶಲಗಳನ್ನು (ಬಿಡಿ ಬಿಡಿಯಾಗಿ ನೋಡಿದಲ್ಲಿ ಅವುಗಳನ್ನು ಸಾಮರ್ಥ್ಯಗಳು ಎಂದು ಹೆಸರಿಸಬಹುದು) ವಿದ್ಯಾರ್ಥಿ ತನ್ನದಾಗಿಸಿಕೊಳ್ಳುವುದು ಅರ್ಥಾತ್ ಅದನ್ನು ರೂಢಿಸಿಕೊಳ್ಳುವಂತೆ ಮಾಡುವುದು ಪ್ರಾಥಮಿಕ ಹಂತದ ಕಾರ್ಯವಾಗಿದೆ. ವಯೋಮಿತಿಯನುಸಾರ ವಿದ್ಯಾರ್ಥಿಗಳು ಬೆಳವಣಿಗೆ ಹೊಂದಿದಂತೆ ಸಾಮರ್ಥ್ಯಗಳು ಅಂತರ್ಗತವಾಗುವುದರೊಂದಿಗೆ ವಿಸ್ತಾರಗೊಳ್ಳುತ್ತಿರಬೇಕು. ಸಾಮರ್ಥ್ಯಗಳ ವೃದ್ಧಿಯೊಂದಿಗೆ ಭಾಷೆಯ ಕೌಶಲದ ಬಳಕೆಗೆ ಪೂರಕ ವಾತಾವರಣವನ್ನು ನಿರಂತರವಾಗಿ ಶಿಕ್ಷಕರು ಒದಗಿಸಿಕೊಡುವುದು ಅವಶ್ಯ. ಇಂತಹ ವಾತಾವರಣಕ್ಕೆ ಶಾಲಾ ಸನ್ನಿವೇಶವು ಔಪಚಾರಿಕವಾಗಿ ಪರಿಗಣಿಸಲ್ಪಟ್ಟರೆ, ಹೊರಗಿನ ಸನ್ನಿವೇಶವು ಅನೌಪಚಾರಿವಾಗಿ ಪರಿಗಣಿಸಲ್ಪಡುತ್ತದೆ. ಮಗು ಸಹಜವಾಗಿ ಕಲಿಯುತ್ತದೆ. ಆದರೆ ಕಲಿಕೆಯ ವ್ಯವಸ್ಥಿತ ಸನ್ನಿವೇಶಕ್ಕೆ ಶಾಲಾ ತರಗತಿಯಲ್ಲಿನ ಪ್ರಕ್ರಿಯೆಗಳಿವೆ. ಅವುಗಳನ್ನು ಸಹಜ ಕಲಿಕೆಯ ಅವಕಾಶಗಳಾಗಿ ಶಿಕ್ಷಕರು ಮಾರ್ಪಡಿಸುವುದರಿಂದ ಕಲಿಕೆ ಶಿಶು ಕೇಂದ್ರಿತವಾಗುತ್ತದೆ.

ಭಾಷೆಯ ಪಠ್ಯದಲ್ಲಿ ಇರುವ ಪಾಠಗಳು, ಅಭ್ಯಾಸಗಳು, ಭಾಷಾಂಶ ಚಟವಟಿಕೆಗಳು ವಿದ್ಯಾರ್ಥಿ ತನ್ನ ಪ್ರಬುದ್ಧತೆಯನ್ನು ಭಾಷೆಯ ಕೌಶಲಗಳಲ್ಲಿ ಸಾಧಿಸಲಿ ಎಂಬ ಕಾರಣಕ್ಕಾಗಿಯೇ ರೂಪಿಸಲ್ಪಟ್ಟಿರುತ್ತವೆ. ಇಂತಹ ಚಟುವಟಿಕೆಗಳಲ್ಲಿ ವಿದ್ಯಾರ್ಥಿ ತೊಡಗಿಸಿಕೊಂಡಿದ್ದನ್ನು ಮಾಪನ ಮಾಡುವ ಯಾರೇ ಆಗಲಿ ಅದನ್ನು ಒಂದು ಚಟುವಟಿಕೆಯಾಗಿ ನೋಡದೆ, ಕಲಿಕೆಯ ಮಹತ್ವದಿಂದ

ಅದನ್ನು ಪ್ರತಿಫಲನಾತ್ಮಕ ಸಾಧಕನವಾಗಿ ನೋಡಬೇಕು. ಮೌಲ್ಯಮಾಪನವೂ ಕಲಿಕಾ ಸಾಧನವಾಗಬೇಕು. ಪ್ರಾಥಮಿಕ ಹಂತದಲ್ಲಿ ಮಕ್ಕಳ ಅಭಿವ್ಯಕ್ತಿಯಲ್ಲಿನ ಸಣ್ಣ ಸಣ್ಣ ತಪ್ಪುಗಳು ಸಹ ಕಲಿಸುವವರ ಗ್ರಹಿಕೆಯಲ್ಲಿ ಮುಖ್ಯವಾಗಬೇಕು. ಆದರೆ ಅದು ತಪ್ಪೆಂದು ನೇರವಾಗಿ ತಿದ್ದುವ ಕ್ರಮಕ್ಕೆ ಹೋಗುವ ಮುನ್ನ ಮಗುವಿನೊಡನೆ ಸಂವಾದವಾಗಬೇಕು. ಕಲಿಕೆ ಮತ್ತು ಕಲಿಸುವಿಕೆಯ ಹಂತದಲ್ಲಿ ಭಾಷಾ ಕೌಶಲಗಳನ್ನು ವಿದ್ಯಾರ್ಥಿಗಳು ಸಮರ್ಥವಾಗಿ ಬಳಸಿಕೊಂಡಾಗ ಮಾತ್ರ. ಉಳಿದ ಕೋರ್ ವಿಷಯಗಳಲ್ಲಿನ ಕಲಿಕೆ ಸುಲಭವಾಗಿ, ವಿಚಾರವನ್ನು ನಿರರ್ಗಳವಾಗಿ ಮಂಡಿಸಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಭಾಷೆಯನ್ನು ಕಲಿಸುವ ಶಿಕ್ಷಕರ ಜವಾಬ್ದಾರಿ ಗುರುತರ ವಾದುದು.

ಆಲಿಸುವುದು, ಮಾತನಾಡುವುದು, ಓದುವುದು ಮತ್ತು ಬರೆಯುವುದರ ಕೌಶಲಗಳ ದೃಷ್ಟಿಯಿಂದ ಪ್ರತಿ ಪಾಠದ ಉದ್ದೇಶ ವಿದ್ಯಾರ್ಥಿಗಳ ದೃಷ್ಟಿಯಿಂದ ಎಷ್ಟರ ಮಟ್ಟಿಗೆ ಸಾಧಿಸಲ್ಪಟ್ಟಿದೆ ಎನ್ನುವುದನ್ನು ಒರೆಹಚ್ಚುವುದೇ ಭಾಷೆಯ ಮೌಲ್ಯಮಾಪನದ ತಳಹದಿ. ಹೀಗೆ ಚಿಂತಿಸಿದ್ದಲ್ಲಿ ಭಾಷೆಯ ಉದ್ದೇಶ ಮತ್ತು ನಿರ್ದಿಷ್ಟ ಉದ್ದೇಶಗಳ ಗಣನೆ ತರಗತಿಗಳಲ್ಲಿ ಬೇಡವೇ ಎಂಬ ಪ್ರಶ್ನೆ ಎದುರಾಗುತ್ತದೆ. ಉದ್ದೇಶಗಳ ಸಾಧನೆಗೆ ಕೌಶಲಗಳು ಬಹುಮುಖ್ಯ ಮಾಧ್ಯಮವಾಗಿ ಕಾರ್ಯನಿರ್ವಹಿಸುತ್ತವೆ ಎನ್ನುವುದನ್ನು ನೆನಪಿನಲ್ಲಿಡಬೇಕು. ಉದಾ : ವಿದ್ಯಾರ್ಥಿಗಳಲ್ಲಿ ಅಂತರ್ಗತವಾಗಬೇಕಾದ ಕೌಶಲಗಳನ್ನು ಅವಲೋಕಿಸಿಕೊಳ್ಳಬೇಕು. ಪುಸ್ತಕ ಪ್ರೇಮವಷ್ಟೇ ಇಲ್ಲಿ ಮುಖ್ಯವಾಗುವುದಿಲ್ಲ. ಆಲಿಸಿದ್ದನ್ನು ಗ್ರಹಿಸಿ ತನ್ನದೇ ಮಾತುಗಳಲ್ಲಿ ವ್ಯಕ್ತಪಡಿಸುವ ಕೌಶಲ ಗಳಿಕೆಯಾಗಬೇಕು. ಓದಿದ್ದನ್ನು ಮನನ ಮಾಡಿಕೊಳ್ಳುವ, ಆ ಬಗ್ಗೆ ಆಲೋಚಿಸಿ ಒಂದು ನಿರ್ಧಾರಕ್ಕೆ ಬರುವ, ವಸ್ತು–ವಿಚಾರವನ್ನು ತಾರ್ಕಿಕತೆಗೆ ಒಳಪಡಿಸುವ, ಮೌಖಿಕ ಅಥವಾ ಲಿಖಿತವಾಗಿ ಸ್ವಂತ ಅಭಿಪ್ರಾಯ ವ್ಯಕ್ತಪಡಿಸುವ, ಏಕೆ? ಹೇಗೆ? ಹಾಗಾಗದಿದ್ದರೆ, ಇತ್ಯಾದಿ ಪ್ರಶ್ನೆಗಳಿಗೆ ಮುಕ್ತವಾಗಿ ಉತ್ತರಿಸುವಲ್ಲಿ ವಿವಿಧ ಕೌಶಲಗಳ ಮೇಲಿನ ವಿದ್ಯಾರ್ಥಿಯ ಒಟ್ಟು ಹಿಡಿತವೇ ಭಾಷೆಯಲ್ಲಿನ ನಿಜವಾದ ಕಲಿಕೆ. ಉದಾ : ಪದ್ಯ ಕಲಿಕೆಯ ಉದ್ದೇಶ ರಸಸ್ವಾದವೇ ಆದರೂ, ಆ ರಸಾನುಭವಕ್ಕೆ ಗ್ರಹಿಕೆಯಿಂದ ಕೂಡಿದ ವಿದ್ಯಾರ್ಥಿಯ ಆಲಿಸುವಿಕೆ ಮಹತ್ವದ್ದು. ವಿಷಯ/ಪರಿಕಲ್ಪನೆಗಳನ್ನು ಎಷ್ಟೇ ಅದ್ಭುತವಾಗಿ ಅರ್ಥೈಸಿಕೊಂಡರೂ, ಅದನ್ನು ಸಮರ್ಥವಾಗಿ ನಿರೂಪಿಸುವಲ್ಲಿ ಮೌಖಿಕ ಮತ್ತು ಲಿಖಿತ ಅಭಿವ್ಯಕ್ತಿ ಪ್ರಾಮುಖ್ಯತೆ ಪಡೆದುಕೊಳ್ಳುತ್ತದೆ. ಭಾಷೆಯ ಕಲಿಕೆಯು ಅಭಿವ್ಯಕ್ತಿಯೊಂದಿಗೆ ಪ್ರಶಂಸೆಯಂತಹ ಇತರೆ ಉದ್ದಿಷ್ಟಗಳ ಬೆಳವಣಿಗೆಗೆ ಹೆಚ್ಚಿನ ಅವಕಾಶಗಳನ್ನು ಒದಗಿಸಬೇಕಾಗುತ್ತದೆ.

ಒಂದು ಪಠ್ಯಾಂಶದ ಮೂಲಕ ಇಂತಹುದೇ ಕೌಶಲವನ್ನು ಬೆಳೆಸುತ್ತೇನೆ ಎಂದುಕೊಳ್ಳಲು ಸಾಧ್ಯವಿಲ್ಲ. ಪ್ರತಿ ಕೌಶಲಗಳು ಒಂದಕ್ಕೊಂದು ಪೂರಕವಾಗಿದ್ದು, ಒಂದರೊಳಗೊಂದು ಬೆಸೆದುಕೊಂಡಿರುವುದರಿಂದ, ವರ್ಗೀಕರಿಸಿ ನೋಡಲು ಸಾಧ್ಯವಿಲ್ಲ. ಆದರೆ ಕೆಲವು ಪಾಠಗಳು ಅವುಗಳಲ್ಲಿನ ಯವುದಾದರೊಂದರ ಪ್ರಾಧಾನ್ಯತೆಯನ್ನು ಗುರುತಿಸಲು ಸಹಕರಿಸಲೂಬಹುದು. ಕೆಲವು ಪಾಠಗಳ ನಿರೂಪಣೆಯೇ ವಿದ್ಯಾರ್ಥಿಗಳಲ್ಲಿ ನಾನು ಬೆಳೆಸಬೇಕಾದ ಕೌಶಲ ಯಾವುದು

ಎನ್ನುವುದನ್ನು ಶಿಕ್ಷಕರಿಗೆ ತಾನಾಗಿಯೇ ನಿರ್ದೇಶಿಸುತ್ತದೆ. ಅಂತಹ ಪಠ್ಯಾಂಶಗಳ ತಿರುಳು ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನಕ್ಕೆ ಆಧಾರವಾಗಿರುತ್ತದೆ.

ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದಲ್ಲಿ ಯಾವೆಲ್ಲ ಅಂಶಗಳಿಗೆ ತರಗತಿ ಕೋಣೆಯಲ್ಲಿ ಆದ್ಯತೆ ನೀಡಬೇಕು ಎನ್ನುವುದರ ಜೊತೆಗೆ, ಹಾಗೆಯೇ ಪೂರ್ವಭಾವಿಯಾಗಿ ಯೋಜಿಸಿಕೊಂಡ ವ್ಯವಸ್ಥಿತ ಕಾರ್ಯಸೂಚಿ ಇರಲೇಬೇಕು.

**ನಿರ್ವಹಣೆಯಲ್ಲಿ ಶಿಕ್ಷಕರ ಪಾತ್ರ :**

* ಪ್ರತಿಯೊಬ್ಬ ವಿದ್ಯಾರ್ಥಿ ವಿಶಿಷ್ಟ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು.
* ಪ್ರತಿ ಹಂತದ ಕಲಿಕೆಯನ್ನು ವಿದ್ಯಾರ್ಥಿಗಳು ಅವರವರ ರೀತಿ ಕಲಿತಿರುವುದನ್ನು ದೃಢ ಪಡಿಸಿಕೊಂಡು ಪ್ರಗತಿಯನ್ನು ವಿಶ್ಲೇಷಣೆಗೊಳಪಡಿಸಬೇಕು.
* ಹಿಮ್ಮಾಹಿತಿ, ಪರಿಹಾರ ಕಾರ್ಯ, ಪುನರ್ ಹಿಮ್ಮಾಹಿತಿಯಂತಹ ಕಾರ್ಯಕ್ಕೆ ನಮ್ಮನ್ನು ಒಳಪಡಿಸಿಕೊಳ್ಳಬೇಕು.
* ಭಾಷೆಯ ವಿವಿಧ ಆಯಾಮಗಳಲ್ಲಿ ವಿದ್ಯಾರ್ಥಿಯ ಬೆಳವಣಿಗೆಯನ್ನು ಅವಲೋಕನಕ್ಕೊಳ ಪಡಿಸಲು ಅವಶ್ಯವಾದ ಸಾಧನ ಮತ್ತು ತಂತ್ರಗಳನ್ನು ತಾವೇ ತಯಾರಿಸಿಕೊಳ್ಳಬೇಕು.
* ಮೌಲ್ಯಮಾಪನಕ್ಕೆ ಪೂರಕವಾದ ಸೂಚಕಗಳನ್ನು ತಾವೇ ತಯಾರಿಸಿಕೊಳ್ಳುವ ಕೌಶಲವನ್ನು ಮೈಗೂಡಿಸಿಕೊಳ್ಳಬೇಕು.
* ಅಂತರಾವಲೋಕನಗಳ ಮೂಲಕವಾಗಿ, ಚಿಕ್ಕ ಚಿಕ್ಕ ಮೌಲ್ಯಮಾಪನಗಳ ಮೂಲಕವಾಗಿ ವಿವಿಧ ಆಯಾಮಗಳಲ್ಲಿ ವಿದ್ಯಾರ್ಥಿಯನ್ನು ಅರ್ಥಮಾಡಿಕೊಳ್ಳಬೇಕು.
* ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನದ ತಂತ್ರಗಳನ್ನು ತರಗತಿಯಲ್ಲಿ ಅಳವಡಿಸುವ ಕಾರ್ಯತಂತ್ರಗಳನ್ನು ಅರ್ಥಮಾಡಿಕೊಳ್ಳಬೇಕು.

**ನಮಗಿರುವ ಸವಾಲುಗಳು :**

* ಇದು ಸಾಧ್ಯವೇ? ಮಕ್ಕಳು ಹೆಚ್ಚಿದ್ದರೆ ಹೇಗೆ?
* ದಾಖಲೆಗಳನ್ನು ನಿರ್ವಹಿಸುವುದಾದರೂ ಹೇಗೆ?
* ವೈಯಕ್ತಿಕ ಗಮನ ನೀಡಲೂ ನಮ್ಮಿಂದ ಆಗುವುದೇ?
* ಈಗಿರುವ ಪರೀಕ್ಷಾ ಪದ್ಧತಿ ಇದಕ್ಕೆ ಪೂರಕವಾಗಿದೆಯೇ?
* ಇನ್ನು ಮುಂದೆ ಪ್ರಶ್ನೆಗಳಿಗೆ ಉತ್ತರ ಬರೆಸುವಂತಹ ಪರೀಕ್ಷೆಗಳು ಇರುವುದಿಲ್ಲವೆ?
* ಸಾಧನ ತಂತ್ರಗಳನ್ನು ಅಳವಡಿಸುವುದು ಮತ್ತು ತಯಾರಿಸಿಕೊಳ್ಳುವುದನ್ನು ಯಾರು ಹೇಳಿಕೊಡುತ್ತಾರೆ?
* ವೈಯಕ್ತಿಕ ಪ್ರಗತಿ ವಹಿ ಮತ್ತು ಸಮಗ್ರ ಪ್ರಗತಿ ವಹಿ ನಿರ್ವಹಣೆಗೆ ಮಾರ್ಗದರ್ಶನವಿದೆಯೇ? ಇತ್ಯಾದಿ.

ಈ ಎಲ್ಲಾ ಪ್ರಶ್ನೆಗಳಿಗೆ ಈ ಸಾಹಿತ್ಯದಲ್ಲಿ ಉದಾಹರಣೆಯೊಂದಿಗೆ ಉತ್ತರಿಸಲು ಪ್ರಯತ್ನಿಸಿದೆ.

ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನ ಕೈಗೊಳ್ಳಲು ಭಾಷಾ ವಿಷಯಗಳಲ್ಲಿ ಕೌಶಲಗಳು ಮತ್ತು ಕಲಿಕಾ ಮಾನಕಗಳನ್ನು ಆಧಾರಗಳಾಗಿ ಗುರುತಿಸಿಕೊಳ್ಳುವುದು ಅವಶ್ಯಕ. ಕೆಲವು ಸಾಮಾನ್ಯ ನಿರ್ದಿಷ್ಟಗಳನ್ನು ಕೆಳಗಿನ ಪಟ್ಟಿಯಲ್ಲಿ ಉದಾಹರಣೆಯಾಗಿ ನೀಡಿದೆ.

**ಭಾಷಾ ಕೌಶಲಗಳಲ್ಲಿ ಸಾಮಾನ್ಯವೆನಿಸಿಕೊಳ್ಳುವ ಕೆಲವು ನಿರ್ದಿಷ್ಟಗಳು**

| ಕ್ರಸಂ. | ಕೌಶಲಗಳು | ಕೌಶಲಗಳು ಒಳಗೊಳ್ಳುವ ಮಾನಕಗಳೂ / ನಿರ್ದಿಷ್ಟಗಳು |
|---|---|---|
| 1. | ಆಲಿಸುವುದು | * ಪ್ರಾಸಪದ್ಯ ಮತ್ತು ಶಿಶುಗೀತೆಗಳ ಆಲಿಸುವಿಕೆ.<br>* ಕತೆಗಳನ್ನು ಆಲಿಸುವುದು.<br>* ಗದ್ಯ ಪದ್ಯ ಭಾಗಗಳಲ್ಲಿನ ಪಠ್ಯವನ್ನು ಆಲಿಸಿ ಗ್ರಹಿಸುವುದು.<br>* ಆಲಿಸಿದ್ದನ್ನು ಅರ್ಥಮಾಡಿಕೊಳ್ಳುವುದು ಮಾತ್ರವಲ್ಲದೆ, ಏಕೆ? ಹೇಗೆ? ಎಂಬ ಪ್ರಶ್ನೆಗಳಿಗೆ ಉತ್ತರಿಸಲು ಸಮರ್ಥನಾಗುವುದು.<br>* ಪಠ್ಯವನ್ನು ಆಲಿಸಿದ ನಂತರ ಪ್ರಶ್ನೋತ್ತರಗಳಿಗೆ ಮತ್ತು ಅಭಿವ್ಯಕ್ತವಾಗುವ ಅಂಶಗಳಿಗೆ ಉತ್ತರಿಸಲು ಮುಂದಾಗುವುದು ಇತ್ಯಾದಿ. |
| 2. | ಮಾತನಾಡುವುದು | * ಸರಳ ವಾಕ್ಯಗಳಿಂದ ಕೂಡಿದ ಅಭಿವ್ಯಕ್ತಿ.<br>* ಸ್ವತಂತ್ರವಾಗಿಯೂ ಮತ್ತು ಮುಕ್ತವಾಗಿ ಮಾತನಾಡುವುದು.<br>* ಶಿಷ್ಟಾಚಾರತೆಯಿಂದ ಕೂಡಿದ ಮಾತನಾಡುವಿಕೆ.<br>* ಪಠ್ಯ ಅಥವಾ ಕಲಿವಿನ ಅಂಶದ ಬಗ್ಗೆ ಸ್ವತಂತ್ರ ಅಭಿವ್ಯಕ್ತಿ.<br>* ನಿರರ್ಗಳ, ಸ್ವರಭಾರ ಏರಿಳಿತ, ನಿಲುಗಡೆ ಆಧಾರಿತ, ಲೇಖನ ಚಿಹ್ನೆಗಳ ಭಾವಧಾರಿತದಿಂದ ಕೂಡಿದ ಮೌಖಿಕ ಅಭಿವ್ಯಕ್ತಿ.<br>* ಸಮಂಜಸ ಪದಪುಂಜ ಮತ್ತು ವಾಕ್ಯಜೋಡಣೆಯಿಂದ ಕೂಡಿದ ಮಾತುಗಾರಿಕೆ.<br>* ಪದ್ಯ ಮತ್ತು ಗಮಕಗಳ ವಾಚನ.<br>* ಛಂದೋಬದ್ಧತೆಯಿಂದ ಕೂಡಿದ ಭಾಷಾಂಶಗಳ ಅಭಿವ್ಯಕ್ತಿ.<br>* ಸ್ವ ಅಭಿವ್ಯಕ್ತಿಯಲ್ಲಿ ಮೂಡಿಬಂದ ಕತೆ–ಕವನಗಳ ವಾಚನ.<br>* ಸಹೃದಯರಾಗಿ ಮೆಚ್ಚಿಕೊಂಡ ಅಥವಾ ಮೆಚ್ಚಿಕೊಳ್ಳದ ಪುಸ್ತಕದ ಬಗೆಗೆ ಹಿಮ್ಮಾಹಿತಿ ನೀಡುವಂತಹ ಮೌಖಿಕ ಅಭಿವ್ಯಕ್ತಿ.<br>* ಸನ್ನಿವೇಶಗಳನ್ನು ಅರ್ಥಮಾಡಿಕೊಂಡು ಮಾತನಾಡುವುದು.<br>* ಕಾರ್ಯಕಾರಣ ಸಂಬಂಧವನ್ನು ಅರ್ಥಮಾಡಿಕೊಂಡು ಮಾತನಾಡುವುದು.<br>* ಅಪರಿಚಿತ ಸನ್ನಿವೇಶಗಳಲ್ಲಿನ ಸಂಭಾಷಣೆಗಳನ್ನು ಅರ್ಥ ಮಾಡಿಕೊಂಡು ಪ್ರತಿಕ್ರಿಯೆ ನೀಡುವುದು, ಇತ್ಯಾದಿ. |

| | | |
|---|---|---|
| 3. | ಓದುವುದು | * ಪದ, ವಾಕ್ಯಗಳ ಓದುವಿಕೆ.<br>* ವಾಕ್ಯಗಳಿಂದ ಕೂಡಿದ ಪ್ಯಾರಾಗಳ ನಿರರ್ಗಳ ಓದುವಿಕೆ.<br>* ಲೇಖನ ಚಿಹ್ನೆ ಆಧಾರಿತ ಮತ್ತು ನಿಲುಗಡೆ ಆಧರಿಸಿದ ಸ್ಪಷ್ಟ ಓದುವಿಕೆ.<br>* ಗ್ರಹಿಸಿ ಅರ್ಥ ಮಾಡಿಕೊಳ್ಳುವುದರ ಜೊತೆಗಿನ ನಿಕಟ ಸಂಬಂಧ ವನ್ನಿರಿಸಿಕೊಳ್ಳುವುದರ ಓದುವಿಕೆ.<br>* ಛಂದೋಬದ್ಧವಾಗಿ ಓದುವುದು.<br>* ಗದ್ಯ ಮತ್ತು ಪದ್ಯಗಳ ನಡುವಿನ ವ್ಯತ್ಯಾಸಗಳನ್ನು ಅರ್ಥ ಮಾಡಿಕೊಂಡು ಓದುವುದು.<br>* ವಸ್ತು–ವಿಚಾರವನ್ನು ಮತ್ತು ಪರಿಕಲ್ಪನೆಗಳನ್ನು ಅರ್ಥೈಸಿಕೊಳ್ಳು ವಂತಹ ಓದುವಿಕೆ.<br>* ಕವಿ, ಲೇಖಕ ಮತ್ತು ವಿಮರ್ಶಕರ ಮೂಲ ಆಶಯವನ್ನು ಅರ್ಥಮಾಡಿಕೊಳ್ಳುವ ಓದುವಿಕೆ.<br>* ತಾನು ಓದಿದ್ದನ್ನು ಇತರರಿಗೆ ಅರ್ಥೈಸಿ ಹೇಳುವಂತಹ ಸಾಮರ್ಥ್ಯದಿಂದ ಕೂಡಿದ ಓದುವಿಕೆ ಇತ್ಯಾದಿ. |
| 4. | ಬರೆಯುವುದು | * ವ್ಯಾಕರಣ ಬದ್ಧವಾದ ಅಭಿವ್ಯಕ್ತಿ<br>* ಕಾರ್ಯಕಾರಣ ಸಂಬಂಧಕ್ಕೆ ಪೂರಕವಾದ ಅಭಿವ್ಯಕ್ತಿ.<br>* ವಸ್ತು–ವಿಚಾರದ ಬಗೆಗೆ ಸ್ವತಂತ್ರ ನಿಲುವನ್ನು ವ್ಯಕ್ತಪಡಿಸು ವಂತಹ ಅಭಿವ್ಯಕ್ತಿ.<br>* ಓದಿದ್ದನ್ನು ಗ್ರಹಿಸಿಕೊಂಡು ಅಭಿಪ್ರಾಯವನ್ನು ಕ್ರೋಢೀಕರಿಸುವ ಅಭಿವ್ಯಕ್ತಿ.<br>* ಸ್ವತಂತ್ರವೆನಿಸಿಕೊಳ್ಳುವ ಲಿಖಿತ ಹಾಗೂ ಪ್ರಶಂಸೆಯನ್ನು ವ್ಯಕ್ತಪಡಿಸುವಂತಹ ಅಭಿವ್ಯಕ್ತಿ.<br>* ಚರ್ಚೆ, ಸಂವಾದಗಳಲ್ಲಿ ಮತ್ತು ಅಪರಿಚಿತ ಸನ್ನಿವೇಶಗಳಲ್ಲಿನ ಅಂಶಗಳನ್ನು ಲಿಖಿತವಾಗಿ ಮಂಡಿಸುವ ಅಭಿವ್ಯಕ್ತಿ.<br>* ಸ್ವಂತವಾಗಿ ಕತೆ, ಕಾವ್ಯ, ಕವಿತೆ, ಇತ್ಯಾದಿಗಳನ್ನು ರಚಿಸುವಂತಹ ಕಲೆ ಮತ್ತು ಸಹೃದಯರಾಗಿ ವಿಷಯವನ್ನು ವಿಮರ್ಶಿಸುವುದು.<br>* ಯಾವುದಾದರೊಂದು ವಿಷಯದ ಮೂಲ ಆಶಯಕ್ಕೆ ಪೂರಕವಾಗಿ ಆಲೋಚಿಸಿ, ತನ್ನದೇ ಚಿಂತನೆಗಳನ್ನು ವ್ಯಕ್ತಪಡಿಸು ವಂತಹ ಅಭಿವ್ಯಕ್ತಿ.<br>* ಪಠ್ಯಾಂಶಗಳಿಗೆ ಪೂರಕವಾಗಿ ಗ್ರಹಿಸಿದ್ದನ್ನು ಲಿಖಿತವಾಗಿ ಮಂಡಿಸುವ ಅಭಿವ್ಯಕ್ತಿ. |

**ಪ್ರತಿ ಕೌಶಲಗಳ ಮೌಲ್ಯಮಾಪನಕ್ಕೆ ನೆರವು ನೀಡಬಲ್ಲ ಕೆಲವು ತಂತ್ರಗಳನ್ನು ಮತ್ತು ಸಾಧನಗಳನ್ನು ಪರಿಚಯಿಸಿಕೊಳ್ಳೋಣ.**

ತಂತ್ರಗಳು–ಮಾಹಿತಿ ಅಥವಾ ದತ್ತಾಂಶಗಳನ್ನು ಸಂಗ್ರಹಿಸಲು ಕೈಗೊಳ್ಳುವ ಚಟುವಟಿಕೆ ಅಥವಾ ವಿಧಾನಗಳೇ ತಂತ್ರಗಳು. ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನ ಕೈಗೊಳ್ಳಲು ಅಗತ್ಯವಾದ ಮಾಹಿತಿ ನಮಗೆ ವಿವಿಧ ಮೂಲಗಳಿಂದ ಲಭ್ಯವಾಗುತ್ತದೆ. ಇಲ್ಲಿ ಉದಾಹರಣೆಗಾಗಿ ಮಗು ಆಲಿಸುವುದನ್ನು ಮಾಪನ ಮಾಡಬೇಕಿದೆ ಎಂದುಕೊಂಡಾಗ ಈ ಆಲಿಸುವ ಚಟುವಟಿಕೆಯನ್ನು ಮೌಲ್ಯಮಾಪನ ಮಾಡಬೇಕಾಗುತ್ತದೆ. ಇದಕ್ಕಾಗಿ ಹಮ್ಮಿಕೊಳ್ಳುವ ಎಲ್ಲಾ ರೀತಿಯ ಚಟುವಟಿಕೆಗಳನ್ನು ಹಾಗೂ ಸನ್ನಿವೇಶಗಳ ನಿರ್ಮಾಣವನ್ನು ತಂತ್ರಗಳೆಂದು ಕರೆಯಬಹುದು. ಈ ಚಟುವಟಿಕೆಗಳು ಹೇಗೆ ಮಾಪನ ಮಾಡುತ್ತೇವೆ ಎನ್ನುವುದನ್ನು ತಿಳಿಸುತ್ತದೆ.

ಸಾಧನಗಳು – ಸೃಷ್ಟಿಸಿಕೊಂಡ ಸನ್ನಿವೇಶಗಳಲ್ಲಿ ವಿದ್ಯಾರ್ಥಿಯ ಕಲಿಕೆ ಮತ್ತು ಭಾಗವಹಿಸುವಿಕೆಯನ್ನು ಮೌಲ್ಯಮಾಪನಕ್ಕೊಳಪಡಿಸಲು ಸಹಕರಿಸುವ ಯುಕ್ತ ಸಾಮಗ್ರಿಗಳೇ ಸಾಧನಗಳು. ಇವು ಮಾಪನವನ್ನು ಯಾವುದರಿಂದ ಮಾಡುತ್ತೇವೆ ಎನ್ನುವುದನ್ನು ತಿಳಿಸುತ್ತದೆ.

| **ಆಲಿಸುವುದು ಮತ್ತು ಮಾತನಾಡುವುದು** | | |
|---|---|---|
| **ಕ್ರ.ಸಂ.** | **ತಂತ್ರಗಳು** | **ಸಾಧನಗಳು** |
| 1. | ವೀಕ್ಷಣೆ/ಅವಲೋಕನ | ಅವಲೋಕನ ಪಟ್ಟಿ (ಪಾತ್ರಾಭಿನಯ, ಚರ್ಚೆ, ಉಕ್ತಲೇಖನ, ಪ್ರತಿಕ್ರಿಯೆಗಳು) |
| 2. | ಮೌಖಿಕ | ಮೌಖಿಕ ಪ್ರಶ್ನೆಗಳು (ವೈಯಕ್ತಿಕ, ಗುಂಪುಗಳಲ್ಲಿ, ತರಗತಿಯ ಒಳಗೆ/ಹೊರಗೆ) ಸಂವಾದ |
| 3. | ಬರವಣಿಗೆ | |
| 4. | ಸ್ವ ಮೌಲ್ಯಮಾಪನ | |
| 5. | ಗುಂಪು ಮೌಲ್ಯಮಾಪನ | |

| **ಓದುವುದು ಮತ್ತು ಬರೆಯುವುದು** | | |
|---|---|---|
| 1. | ವೀಕ್ಷಣೆ/ಅವಲೋಕನ | ಅವಲೋಕನಪಟ್ಟಿ |
| 2. | ಮೌಖಿಕ | ಪ್ರಶ್ನೆಗಳು (ವೈಯಕ್ತಿಕ, ಗುಂಪು, ಚರ್ಚೆ) |
| 3. | ಲಿಖಿತ | ಲಿಖಿತ ಪ್ರಶ್ನೆಗಳು (ಗೊತ್ತಿರುವ, ಗೊತ್ತಿಲ್ಲದ ಪ್ಯಾಸೇಜ್‌ಗಳು) – ನೈದಾನಿಕ ಪರೀಕ್ಷೆ |

| | | |
|---|---|---|
| 4. | ಯೋಜನೆಗಳು | |
| 5. | ಸ್ವ ಮೌಲ್ಯಮಾಪನ | ನಿಯೋಜಿತ ಕಾರ್ಯಗಳು |
| 6. | ಗುಂಪುಮೌಲ್ಯಮಾಪನ | ಕೃತಿ ಸಂಪುಟ |

**ಗಮನಿಸಿ :** ಭಾಷೆಯ ಕಲಿಕೆ ಕೌಶಲಗಳನ್ನು ಆಧರಿಸಿ ನಿಂತಿದ್ದರೂ, ಪ್ರತಿ ಕೌಶಲಗಳೂ ಅದರಲ್ಲಿನ ಸಾಮರ್ಥ್ಯಗಳನ್ನು ಒರೆಹಚ್ಚುವಂತೆಯೇ, ಅದರಲ್ಲಿನ ಮೂಲ ಉದ್ದಿಷ್ಟಗಳನ್ನು ಗಣನೆಗೆ ತೆಗೆದುಕೊಳ್ಳುತ್ತದೆ.

ಇದುವರೆಗೆ ಭಾಷಾ ಕೌಶಲಗಳು ಮತ್ತು ಅವುಗಳಿಂದ ನಿರೀಕ್ಷಿಸುವ ಕಲಿಕಾಮಾನಕಗಳನ್ನು ಗಮನಿಸಿದ್ದೇವೆ. ಇವುಗಳನ್ನು ಬಳಸಿ ನಮ್ಮ ವಿವಿಧ ತಂತ್ರ ಮತ್ತು ಸಾಧನಗಳಿಂದ ಸಿ.ಸಿ.ಇ. ಹೇಗೆ ಅಳವಡಿಸಬಹುದು ಎನ್ನುವುದನ್ನು ತಿಳಿಯೋಣ.

## ಭಾಷೆಯಲ್ಲಿ ರೂಪಣಾತ್ಮಕ ಮೌಲ್ಯಮಾಪನದ ಪ್ರಕ್ರಿಯೆ :

ಈ ಕೆಳಗೆ ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನವನ್ನು ಕೈಗೊಳ್ಳುವ ಪ್ರಕ್ರಿಯೆಯನ್ನು ಚರ್ಚಿಸಿದೆ. ಒಂದೇ ಚಟುವಟಿಕೆಯಿಂದ ಶ್ರೇಣಿ ನೀಡಲಾಗುವುದಿಲ್ಲ. ಹಲವು ಚಟುವಟಿಕೆಗಳಿಂದ ಮಗುವನ್ನು ಅರ್ಥೈಸಿಕೊಂಡು ಶ್ರೇಣಿ ನೀಡುವ ಪ್ರಕ್ರಿಯೆಯನ್ನು ವಿವರಿಸಿದೆ. ಇದು ಮೊದಲ ರೂಪಣಾತ್ಮಕ ಮೌಲ್ಯಮಾಪನ ಗ್ರೇಡ್ ನೀಡುವವರೆಗೆ ಸಾಗಿದೆ.

ರಾ.ಪ.ಚೌ–2005ರ ಆಶಯಗಳೆಲ್ಲ ನಿರಂತರ ಮತ್ತು ವ್ಯಾಸದ ಮೌಲ್ಯಮಾಪನ ಅತ್ಯಂತ (CCE) ಪ್ರಮುಖವಾದ ಅಂಶವಾಗಿದ್ದು ಇದರ ವ್ಯಾಪಕ ಹಾಗೂ ಪ್ರಾಯೋಗ ಅಂಶಗಳನ್ನು ಕಲಿತು ಬೋಧಕರು ತಮ್ಮ ಬೋಧನೆಯಲ್ಲಿ ಅಳವಡಿಸಿಕೊಳ್ಳುವುದು ಅತ್ಯಂತ ಅಗತ್ಯ. ಈ ರಚನಾ–9 ಸಂಚಿಕೆಯಲ್ಲಿ CCE ಬಗ್ಗೆ ಸ್ಥೂಲವಾದ ವಿವರಗಳನ್ನು ಮಾತ್ರ ಸೇರಿಸಲಾಗಿದೆ. ಈ ಬಗ್ಗೆ ಭಾಷಾ ಶಿಕ್ಷಕರು ಡಿ.ಎಸ್.ಇ.ಆರ್.ಟಿ. ಪ್ರಕಟಿಸಿರುವ ಸಾಧನ ಹಾಗೂ ಸಾಧನ ಪುಷ್ಟಿ ತರಬೇತಿ ಕೈಪಿಡಿಗಳನ್ನು ಅಧ್ಯಯನ ಮಾಡಲು ಕೋರಿದೆ.

## ರಚನಾ – ೨ – ವೇ:ಳಾಪಟ್ಟಿ

## ಪ್ರೌಢಶಾಲಾ ಶಿಕ್ಷಕರ ತರಬೇತಿ – ವಿಷಯ : ಪ್ರಥಮ ಭಾಷೆ ಕನ್ನಡ ತರಗತಿ – 9

| ದಿನ | 1ನೇ ಅವಧಿ<br>9.30 ರಿಂದ 11.45 | | 2ನೇ ಅವಧಿ<br>12.00 ರಿಂದ 1.30 | | 3ನೇ ಅವಧಿ<br>2.15 ರಿಂದ 3.45 | | 4ನೇ ಅವಧಿ<br>4.00 ರಿಂದ 5.30 |
|---|---|---|---|---|---|---|---|
| 1ನೇ ದಿನ | ನೋಂದಣಿ, ಪರಿಚಯ ತರಬೇತಿ ಪೂರ್ವ ಪರೀಕ್ಷೆ. | | NCF-2005 RTE-2009 ಆಶಯಗಳು ಭಾಷಾ ಬೋಧನೆಯ ಹಿನ್ನಲೆಯಲ್ಲಿ | | * ಮಾತೃಭಾಷಾ ಬೋಧನೆಯ ಗುರಿಗಳು ಮತ್ತು ಮಾರ್ಗೋಪಾಯಗಳು<br>* ಭಾ. ತರಗತಿಯಲ್ಲಿ ಪಠ್ಯಪುಸ್ತಕ | | ಗದ್ಯ ಪ್ರಾತ್ಯಕ್ಷಿಕೆ |
| 2ನೇ ದಿನ | ಪ್ರಾರ್ಥನೆ, ವರದಿ, ಸುಭಾಷಿತ ಗದ್ಯ ಪ್ರಾತ್ಯಕ್ಷಿಕೆಗೆ ಸಿದ್ದತೆ. | ವಿರಾಮ | ಸಿರಿ ಕನ್ನಡ 9ರ ಒಂದು ಪರಿಚಯ –ರಚನಾ–ವಾದದ ಹಿನ್ನೆಲೆಯಲ್ಲಿ | ವಿರಾಮ | ಶಿಬಿರಾರ್ಥಿಗಳಿಂದ ಪ್ರದರ್ಶನ ಪಾಠ–(2 ಗುಂಪುಗಳಿಂದ) | ವಿರಾಮ | ಶಿಬಿರಾರ್ಥಿಗಳಿಂದ ಪ್ರದರ್ಶನ ಪಾಠ – (2 ಗುಂಪುಗಳಿಂದ) |
| 3ನೇ ದಿನ | ಪ್ರಾರ್ಥನೆ, ವರದಿ, ಸುಭಾಷಿತ, CCE ಅರ್ಥವ್ಯಾಪ್ತಿ | ಚಹಾ | CCE – ಮಹತ್ವ ತರಗತಿಯಲ್ಲಿ ಅನುಷ್ಠಾನ | ಊಟದ | ವ್ಯಾಕರಣ, ಅಲಂಕಾರ, ಛಂದಸ್ಸು ಬೋಧನಾ ಮಾರ್ಗದರ್ಶನ | ಚಹಾ | ಪದ್ಯ ಪಾಠ ಪ್ರಾತ್ಯಕ್ಷಿಕೆ |
| 4ನೇ ದಿನ | ಪ್ರಾರ್ಥನೆ, ವರದಿ, ಸುಭಾಷಿತ ವಾಕ್ಯ ರಚನಾ ಕೌಶಲ ಪತ್ರ, ಪ್ರಬಂಧ, ಗಾದೆ ಇತ್ಯಾದಿ. | | ಶಿಬಿರಾರ್ಥಿಗಳಿಂದ ಪದ್ಯ–ಪಾಠ ಪ್ರದರ್ಶನ (2 ಗುಂಪುಗಳಿಂದ) | | CCE ದಾಖಲೆಗಳ ನಿರ್ವಹಣೆ. | | ಶಿಬಿರಾರ್ಥಿಗಳಿಂದ ಪದ್ಯ ಪಾಠ ಪ್ರದರ್ಶನ (2 ಗುಂಪುಗಳಿಂದ) |
| 5ನೇ ದಿನ | ಪ್ರಾರ್ಥನೆ, ವರದಿ, ಸುಭಾಷಿತ ಭಾಷಾ ಬೋಧನೆಯಲ್ಲಿ ತಂತ್ರಜ್ಞಾನದ ಬಳಕೆ, ಪೂರಕ ಚಟುವಟಿಕೆಗಳ ಪಾತ್ರ ಯೋಜನೆ, ಅನುಷ್ಠಾನ. | | ಸಿರಿ ಕನ್ನಡ 9ರಲ್ಲಿನ ಪಠ್ಯ ಸಮಸ್ಯೆಗಳು – ಪರಿಹಾರ | | * ತರಬೇತಿಯ ಸಾಫಲ್ಯ ಪರೀಕ್ಷೆ<br>* ಭಾಷಾ ಬೋಧನೆಯಲ್ಲಿ ಕಲಿಕಾ ಸಾಮಗ್ರಿ. | | ಸಮಾರೋಪ<br>ಅನುಭವ ಹಂಚಿಕೆ |